
ಪ್ರಚೋದನೆ

ಲಂಕೇಶ್

ಆಗಸ್ಟ್ 01, 2012 ಪುಟ 20 ರೂ. 14/-



ಅಮರಪ್ರೇಮಿ ಅಸ್ತಂಗತ



ರಾಜಕೀಯದಲ್ಲೂ ಸುದೀಪ್ ಝಲಕ್?



ಹಳ್ಳಿ ಹೈದ ಹುಚ್ಚನಾದ

ಪಶ್ಚಿಮ ಘಟ್ಟ ಮಾನ್ಯತೆ ಜನರಿಗೆ ಕಷ್ಟ ಪರಿಸರಕ್ಕೆ ನಷ್ಟ

ರಾಯಭಾಗ ಶಾಸಕ ಐಹೊಳೆಯ ಗೂಂಡಾಗಿರಿ

ಹುಬ್ಬಳ್ಳಿ : ನೂರಾನಿ ಮಾರ್ಕೆಟ್ ಸೊಸೈಟಿ ಫಿನಿಶ್!



ಕಂತ್ರಿ ಕಲ್ಲಡ್ಕ ಗೆದ್ದ ಹಾಲಾಡಿ ಸೋತ






ಚಾರ್ವಾಕ

• ಶಿವಸುಂದರ

ಹಾಲಾಡಿ ಶ್ರೀನಿವಾಸ ಶೆಟ್ಟರೂ ಮತ್ತು ಕಲಡ್ಕ ಪ್ರಭಾಕರ ಭಟ್ಟರೂ

ಜಾತಿವ್ಯಾಕರಣ ಮತ್ತು ಹಿಂದೂತ್ವ ರಾಜಕಾರಣ

ಅತ್ತ ಜಗದೀಶ ಶೆಟ್ಟರ್ ಎಂಬ ಕುಂತಿ ಪುತ್ರನಿಗೆ ಪಟ್ಟಾಭಿಷೇಕ ಆಗುತ್ತಿದ್ದಂತೆ ಇತ್ತ ಕರಾವಳಿಯ ಭಂಟ ಸಮುದಾಯದ ಪ್ರಭಾವಿ ರಾಜಕಾರಣಿ ಬಿಜೆಪಿ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ನೀಡಲು ಅವರು ಕೊಡುತ್ತಿರುವ ಕಾರಣ ಪ್ರಾಯಶಃ ಕರ್ನಾಟಕದಲ್ಲಿ ಹಿಂದೂತ್ವ ರಾಜಕಾರಣ ಎದುರಿಸುತ್ತಿರುವ ಸವಾಲುಗಳನ್ನು ಸೂಚಿಸುವಂತಿದೆ. ಕುಂದಾಪುರದ ಮಾತ್ರವಲ್ಲದೆ ಇಡೀ ಕರಾವಳಿಯ ಭಂಟ ಸಮುದಾಯದ ಬೆಂಬಲವನ್ನು ಬಿಜೆಪಿಗೆ ರೂಢಿಸಿಕೊಟ್ಟ, ಬಿಜೆಪಿಯಲ್ಲಿದ್ದರೂ ಭ್ರಷ್ಟಾಚಾರದಿಂದ 'ಗಾವುದ ದೂರ ಇದ್ದ', ಎಂದಿಗೂ ಮಂತ್ರಿಗಿರಿಗೆ ಆಸೆ ಬೀಳದ 'ಸಜ್ಜನ' ಹಾಲಾಡಿ ಶ್ರೀನಿವಾಸ ಶೆಟ್ಟರು ಬಿಜೆಪಿ ರಾಜ್ಯಾಧ್ಯಕ್ಷರ ವಿರುದ್ಧ ಮತ್ತು ಆರೆಸ್ಸೆಸ್ ವಿರುದ್ಧ ಕಿಡಿಕಾರಿ ರಾಜೀನಾಮೆ ಕೊಟ್ಟಿರುವುದು ಹಲವು ಕಾರಣಗಳಿಗೆ ಕುತೂಹಲಕಾರಿಯಾಗಿದೆ.



ಅವರ ಪ್ರಕಾರ: "ನನ್ನ ಪಾಡಿಗೆ ನಾನು ನನ್ನ ಕ್ಷೇತ್ರದಲ್ಲಿದ್ದರೆ ಯಡಿಯೂರಪ್ಪನವರ ಮಗ ರಾಘವೇಂದ್ರ ಮತ್ತು ಸ್ಥಳೀಯ ಆರೆಸ್ಸೆಸ್ ನಾಯಕರೊಬ್ಬರು ನನಗೆ ಮಂತ್ರಿಗಿರಿಗೆ ಆಯ್ಕೆ ಮಾಡಲಾಗಿದೆಯೆಂದೂ, ಕೂಡಲೇ ಬೆಂಗಳೂರಿಗೆ ಬರಬೇಕೆಂದೂ ತಿಳಿಸಿದರು. ಶೆಟ್ಟರ್ ಸಂಪುಟ ಪ್ರಮಾಣವಚನ ಸ್ವೀಕಾರ ಸಮಾರಂಭದ ದಿನ ಬೆಳಗ್ಗೆಯಿಂದ ಸಂಭವನೀಯರ ಪಟ್ಟಿಯಲ್ಲಿ ನನ್ನ ಹೆಸರು ಪದೇಪದೇ ಕಾಣಿಸಿಕೊಳ್ಳುತ್ತಿತ್ತು. ಸದಾನಂದ ಗೌಡರೂ ಸಹ ರಾಜ್ಯ ಗುಪ್ತಚರ ದಳದವರು ಬಂದು ನನ್ನನ್ನು ಸಮಾರಂಭಕ್ಕೆ ಕರೆದುಕೊಂಡು ಬರುವುದಾಗಿ ಹೇಳಿದ್ದರು. ಹೀಗಾಗಿ ಕರಾವಳಿಯ ಇತರ ಶಾಸಕರ ಜೊತೆ ನಾನೂ ಶಾಸಕರ ಭವನದಲ್ಲಿ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ಕುಟುಂಬದೊಂದಿಗೆ ಕಾಯುತ್ತಿದ್ದೆ. ಆದರೆ ಅಂತಿಮ ಕ್ಷಣದಲ್ಲಿ ನನ್ನ ಹೆಸರನ್ನು ಕೈಬಿಟ್ಟು, ಬೆಳಗ್ಗೆ 11 ಗಂಟೆಯವರೆಗೂ ನನ್ನ ಜೊತೆಗೆ ಇದ್ದ ಮತ್ತೊಬ್ಬ ಶಾಸಕ ಪೂಜಾರಿಯವರನ್ನು ಮಂತ್ರಿಯನ್ನಾಗಿ ಮಾಡಲಾಗಿದೆ. ನನಗೆ ಮಂತ್ರಿಗಿರಿಯ ಬಗ್ಗೆ ಆಸೆ ಇಲ್ಲ. ಆದರೆ ಬೆಂಗಳೂರಿಗೆ ಕರೆಸಿ ಪಟ್ಟಿಯಲ್ಲಿ ಹೆಸರಿದ್ದರೂ ಅದನ್ನು ಅಳಿಸಿ ಬೇರೆಯವರಿಗೆ ನೀಡಿ ಅವಮಾನ ನೀಡಲಾಗಿದೆ. ಇದು ನನಗಾದ ಅವಮಾನವಲ್ಲ, ಬದಲಿಗೆ ನನ್ನ ಕ್ಷೇತ್ರದ ಜನತೆಗೆ ಆದ ಅವಮಾನ."

ಅವರನ್ನು ಬೆಂಬಲಿಸುತ್ತಾ ಇನ್ನೊಬ್ಬ 'ಅವಕಾಶ ವಂಚಿತ' ಕರಾವಳಿಯ ಶಾಸಕ ಅಂಗಾರ ಸಹ ರಾಜೀನಾಮೆ ನೀಡಲು ಮುಂದಾಗಿದ್ದಾರೆ. ಬಿಜೆಪಿಯ ಪತ್ನಿ ಹಂತಕರ ಪಟ್ಟಿಯಲ್ಲಿ ಪ್ರಮುಖ ಸ್ಥಾನದಲ್ಲಿರುವ ರಘುಪತಿ ಭಟ್ಟನ ನೇತೃತ್ವದಲ್ಲಿ ಕರಾವಳಿ ಶಾಸಕರೆಲ್ಲಾ ಹಾಲಾಡಿ ಶೆಟ್ಟರ ಹಿಂದೆ ನಿಂತು ಬಿಜೆಪಿ ಹೈಕಮಾಂಡ್‌ಗೆ ದೂರು ಒಯ್ಯುವ ಸಿದ್ಧತೆಯನ್ನು ನಡೆಸಿದ್ದಾರೆಂಬ ವರದಿಯೂ ಇದೆ.


ಈ ಬಗೆಯ ಭಿನ್ನಮತವನ್ನು ಬಿಜೆಪಿ ಕಳೆದ ನಾಲ್ಕು ವರ್ಷಗಳಲ್ಲಿ ಹಲವಾರು ಬಾರಿ ಕಂಡಿದೆ. ಆದರೆ ಈ ಬಾರಿಯದ್ದು ಹಲವು ಕಾರಣಕ್ಕೆ ವಿಶೇಷವಾಗಿದೆ. ಶತಾಯಗತಾಯ ಅಧಿಕಾರ ಹಿಡಿಯಲು ಹಿಂದೂತ್ವದ ಬಿಲ್ಲಿಗೆ ಜಾತಿ ಎಂಬ ಬಾಣ ಹೂಡಿ ಅಧಿಕಾರವನ್ನು ಹೊಡೆಯಲು ನಡೆಸುತ್ತಿದ್ದ ಪ್ರಯತ್ನ ಸ್ವಲ್ಪ ಬೂಮರಾಂಗ್ ಆಗುತ್ತಿರುವಂತೆ ಕಾಣುತ್ತಿದೆ. ಬಿಜೆಪಿ ನಡೆಸುತ್ತಿದ್ದ ಅಂತರಂಗ ಮತ್ತು ಬಹಿರಂಗದ ಜಾತಿರಾಜಕಾರಣ ಪ್ರಾಂಗಣವನ್ನು ದಾಟಿ ಈಗ ಗರ್ಭಗುಡಿಯನ್ನೇ ಪ್ರವೇಶಿಸಿದೆ.

ಏಕೆಂದರೆ ಯಡಿಯೂರಪ್ಪನವರ ನೇತೃತ್ವದಲ್ಲಿ ಉತ್ತರ ಕರ್ನಾಟಕದಲ್ಲಿ ಬಿಜೆಪಿ ಗೆದ್ದು ಬರಲು ಬಹುಪಾಲು ಕಾರಣವಾಗಿದ್ದು ಒಕ್ಕಲಿಗ ಮುಖ್ಯಮಂತ್ರಿ ಕುಮಾರಸ್ವಾಮಿ ಲಿಂಗಾಯತ ಯಡಿಯೂರಪ್ಪನನ್ನು ಮುಖ್ಯಮಂತ್ರಿ ಆಗಲು ಬಿಡಲಿಲ್ಲ ಎಂಬ ಅನುಕಂಪ, ಲಿಂಗಾಯತ ಮಠಾಧಿಪತಿಗಳ ಅವಕಾಶವಾದಿ ಜಾತಿವಾದಿ ರಾಜಕಾರಣ, ರೆಡ್ಡಿ ಬ್ರದರ್ಸ್‌ಗಳ ದುಡ್ಡು. ಹೀಗಾಗಿ ಕರ್ನಾಟಕದ ಇತರ ಭಾಗದಲ್ಲಿ ಬಿಜೆಪಿಯ ವಿಜಯ ಪ್ರಧಾನವಾಗಿ ಅನುಕಂಪದ ಮುಸುಕಿನಲ್ಲಿದ್ದ ಲಿಂಗಾಯತರ ಸೇಡಿನ 'ಜಾತಿ' ಓಟಾಗಿತ್ತೇ ವಿನಃ ಸಂಪೂರ್ಣವಾಗಿ ಹಿಂದೂತ್ವದ ಸಿದ್ಧಾಂತದ ವಿಜಯವಾಗಿರಲಿಲ್ಲ.

ಆದರೆ ಕರಾವಳಿ ಹಾಗಲ್ಲ. ಇಲ್ಲಿ ಆರೆಸ್ಸೆಸ್ ಕಳೆದ 20-25 ವರ್ಷಗಳಿಂದ ಸತತವಾಗಿ ಮೊಗವೀರ, ಬಿಲ್ಲವ ಮತ್ತು ಭಂಟ ಸಮುದಾಯಗಳ ನಡುವೆ ಹಿಂದೂತ್ವ ಸಂಘಟನೆಗಳನ್ನು ಕಟ್ಟುತ್ತಾ ಬಂದಿದೆ. ಅಲ್ಲಿಂದ ಬಿಜೆಪಿಗೆ ಆಯ್ಕೆಯಾಗಿ ಬಂದ ಎಲ್ಲರೂ ಆರೆಸ್ಸೆಸ್ ಶಾಖಾ ಮಠದವರೇ. ಅದರಲ್ಲೂ ಕಳೆದ ಹತ್ತು ವರ್ಷಗಳಲ್ಲಿ ಪ್ರಬಲ ಮುಸ್ಲಿಂ ವಿರೋಧಿ ಸಮೂಹ ಸನ್ನಿಯನ್ನು ಸೃಷ್ಟಿಸಿರುವ ಸಂಘಪರಿವಾರ ಹಿಂದೂತ್ವವಾದಿ ಸಿದ್ಧಾಂತಕ್ಕೆ ಪ್ರಬಲವಾದ ಸಂಘಟನಾ ತಳಹದಿಯನ್ನು ಕರಾವಳಿಯ ಎಲ್ಲಾ ಸಮುದಾಯಗಳಲ್ಲೂ ಪಡೆದುಕೊಂಡಿತ್ತು. ಹೀಗಾಗಿ ಅಲ್ಲಿ ಬಿಜೆಪಿ ಪಡೆಯುತ್ತಿದ್ದ ಓಟು ಜಾತಿ ಓಟಲ್ಲ, ಅದು ಬಿಜೆಪಿ ಪಕ್ಷದ ಹಿಂದೂತ್ವವಾದಿ ಸಿದ್ಧಾಂತಕ್ಕೆ ಬೀಳುತ್ತಿದ್ದ ಓಟು. ಕರಾವಳಿಯ ಇಡೀ ಹಿಂದೂ ಸಮುದಾಯವೇ ಸಂಘಪರಿವಾರದ ರಾಜಕಾರಣಕ್ಕೆ ಪಕ್ಕಾಗಿದೆಯೆಂಬುದು ಇದರ ಅರ್ಥವಲ್ಲವಾದರೂ ಚುನಾವಣೆಯ ಸಂದರ್ಭದಲ್ಲಿ ಅದು ಮುಖ್ಯವಾಗುತ್ತಿತ್ತು ಎಂಬುದಂತೂ ನಿಜ. ಹೀಗಾಗಿಯೇ ಕಳೆದ ಲೋಕಸಭಾ ಚುನಾವಣೆಯಲ್ಲಿ ಜನಾರ್ದನ ಪೂಜಾರಿಯೆಂಬ ದೊಡ್ಡ ಕಾಂಗ್ರೆಸ್ ಘಟದೆದುರು ನಳಿನ್ ಕುಮಾರ್ ಕಟೀಲ್ ಎಂಬ ಅಡ್ರೆಸ್ಸಿಗೇ ಇಲ್ಲದ ವ್ಯಕ್ತಿ ಬಿಜೆಪಿಯಿಂದ ಚುನಾವಣೆಗೆ ನಿಂತು ಒಂದೂವರೆ ಲಕ್ಷಕ್ಕೂ ಹೆಚ್ಚು ಮತಗಳಿಂದ ಆಯ್ಕೆಗೊಂಡಿದ್ದ. ಇದೆಲ್ಲದರ ಹಿಂದೆ ಆರೆಸ್ಸೆಸ್‌ನ ನಿರಂತರ ಮತ್ತು ಸತತ ದ್ವೇಷ ರಾಜಕಾರಣದ ಸಂಘಟನಾ ಸದೃಢೀಕರಣದ ಅಂಶವಿದೆ. ಹೀಗಾಗಿಯೇ ಆರೆಸ್ಸೆಸ್‌ನ ರಾಷ್ಟ್ರೀಯ ಕಾರ್ಯಕಾರಿ ಮಂಡಳಿಯ ಸಭೆ ಕರ್ನಾಟಕದಲ್ಲಿ ನಡೆದಾಗ ಅವರು ಆಯ್ಕೆ ಮಾಡಿದ ಜಾಗ ಕರಾವಳಿಯ ಪುತ್ತೂರು.

ಹಾಗೆಯೇ ಕರಾವಳಿ ಭಾಗದ ಆರೆಸ್ಸೆಸ್ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟ ಕೇವಲ ಕರಾವಳಿಯಲ್ಲಿ ಮಾತ್ರವಲ್ಲದೇ ಇಡೀ ಬಿಜೆಪಿ ಸರ್ಕಾರದ ರಿಮೋಟ್ ಕಂಟ್ರೋಲ್ ಆಗಿದ್ದಾನೆ ಮತ್ತು ದೇಶಮಟ್ಟದಲ್ಲೇ ಆರೆಸ್ಸೆಸ್ ಸಂಘಟನೆಯೊಳಗೆ ಪ್ರಭಾವಿಯಾಗಿ ಬೆಳೆದಿದ್ದಾನೆ. ಇಂದು ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಎಲ್ಲಾ ದೌರ್ಜನ್ಯಗಳ ಹಿಂದೆ ಮತ್ತು ಅಲ್ಲಿ ನಿಧಾನವಾಗಿ ಸಂಭವಿಸುತ್ತಿರುವ ಶೂದ್ರ ಶಕ್ತಿಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಬ್ರಾಹ್ಮಣೀಕರಣದ ಹಿಂದೆ ಕಲ್ಲಡ್ಕ ಪ್ರಭಾಕರ ಭಟ್ಟನ ಪ್ರಧಾನ ಪಾತ್ರವಿದೆ. ಇಡೀ ಕರಾವಳಿ ಆಡಳಿತ ಯಂತ್ರಾಂಗದ ಮೇಲೆ ಭಟ್ಟನ ಪರೋಕ್ಷ ನಿಯಂತ್ರಣವಿದೆ. ಹೆಚ್ಚುಕಡಿಮೆ ಭಟ್ಟ ಕರಾವಳಿಯ ಆರೆಸ್ಸೆಸ್ ಪ್ರಧಾನಮಂತ್ರಿ ಎಂದರೂ ತಪ್ಪಾಗುವುದಿಲ್ಲ. ಏಕೆಂದರೆ ರಾಜ್ಯದ ಬಿಜೆಪಿ ಮುಖ್ಯಮಂತ್ರಿಗಳು ಸಹ ಕರಾವಳಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಭಟ್ಟನ ಅಣತಿ ದಾಟುವುದಿಲ್ಲ. ಮುಸ್ಲಿಂ ಮತ್ತು ಪ್ರಗತಿಪರ ಸಂಘಟನೆಗಳು ಮತ್ತು ಕೋಮು ಸೌಹಾರ್ದ ವೇದಿಕೆ ಭಟ್ಟನ ಈ ಕರಾಮತ್ತುಗಳ ವಿರುದ್ಧ ಆಗಾಗ ಪ್ರತಿಭಟನೆಗಳನ್ನು ನಡೆಸಿರುವುದನ್ನು ಬಿಟ್ಟರೆ ಕರಾವಳಿಯಲ್ಲಿ ಆತನನ್ನು ವಿರೋಧಿಸುವವರೇ ಇಲ್ಲ. ವಿರೋಧಿಸುವ ಮನಸ್ಥಿತಿ ಮತ್ತು ಸಾಮರ್ಥ್ಯ ಇರುವವರನ್ನು ಆತ ಸಂಘಪರಿವಾರದಲ್ಲಿ ಬೆಳೆಯಗೊಡುತ್ತಿಲ್ಲ. ಅದಕ್ಕೆ ಹಾಲಾಡಿ ಶ್ರೀನಿವಾಸ ಶೆಟ್ಟರ ಪ್ರಕರಣವೇ ಸಾಕ್ಷಿ ಎಂದು ಈಗ ಆರೆಸ್ಸೆಸ್‌ನ ಕಟ್ಟಾ ಅನುಯಾಯಿಗಳೇ ಹೇಳುತ್ತಿದ್ದಾರೆ.

ಆದರೆ ಈಗ ಇಂಥಾ ಕಲ್ಲಡ್ಕ ಪ್ರಭಾಕರ ಭಟ್ಟನ ವಿರುದ್ಧವೂ ಕರಾವಳಿಯ ಹಿಂದೂ ಸಮುದಾಯವೇ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸುತ್ತಿದೆ. ಕೊನೆ ಗಳಿಗೆಯಲ್ಲಿ ಹಾಲಾಡಿ ಶ್ರೀನಿವಾಸ ಶೆಟ್ಟರಿಗೆ ಮಂತ್ರಿಗಿರಿ ತಪ್ಪಲು ಕಲ್ಲಡ್ಕ ಪ್ರಭಾಕರ ಭಟ್ಟನೇ ಕಾರಣವೆಂದು ರಾಜೀನಾಮೆ ನೀಡಿ ಹೊರಬಂದ ಶಾಸಕ ಶೆಟ್ಟರೇ ಹೇಳಿದ್ದಾರೆ. ತಾನು ಪ್ರಭಾಕರ ಭಟ್ಟನ ಮಾತನ್ನು ಶಿರಸಾವಹಿಸಿ ಪಾಲಿಸದೇ ಇದ್ದದ್ದೇ ತನ್ನ ಹೆಸರು ಮಂತ್ರಿಪಟ್ಟಿಯಿಂದ ಕೊನೆಕ್ಷಣದಲ್ಲಿ ಮಾಯವಾಗಲು ಕಾರಣವೆಂದು ಅವರು ಸ್ಪಷ್ಟವಾಗಿ ಮತ್ತು ಬಹಿರಂಗವಾಗಿ ಹೇಳಿದ್ದಾರೆ. ಈ ಹಿಂದೆಯೂ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಮುಖ್ಯಸ್ಥರ ನೇಮಕಾತಿ ವಿಷಯದಲ್ಲಿ ಭಟ್ಟರು ಎಲ್ಲಾ ಕುತಂತ್ರಗಳನ್ನು ನಡೆಸಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಆ ಸ್ಥಾನಕ್ಕೆ ಬರುವುದನ್ನು ತಡೆಗಟ್ಟಿದ್ದರು. ಅಲ್ಲದೆ ಕುಂದಾಪುರದ ಸಂಘಪರಿವಾರದ ಸಂಸ್ಥಾನದಲ್ಲಿ ಭಟ್ಟನ ಹಲವು ಆಟಾಟೋಪಗಳಿಗೆ ಶೆಟ್ಟರು ಬೆಂಬಲಿಸದೇ ಇದ್ದದ್ದು ಮತ್ತು ಅವರು ರಾಜಕೀಯವಾಗಿ ಬಿಜೆಪಿಯಾದರೂ ಒಳಗಿನಿಂದ 'ಹಿಂದೂತ್ವವಾದಿ' ಯಾಗದಿರುವುದೂ ಆರೆಸ್ಸೆಸ್‌ನ ಕೆಂಗಣ್ಣಿಗೆ ಕಾರಣವಾಯಿತು ಎಂದು ಹೇಳಲಾಗುತ್ತಿದೆ. ಆಸ್ತಿ ಮತ್ತು ಅಧಿಕಾರಕ್ಕೆ ಸಂಬಂಧಪಟ್ಟಂಥ ಇಂಥಾ ಹತ್ತು ಹಲವು ಸೆಕ್ಯುಲಾರ್ ಸಂಗತಿಗಳು ಈ 'ಧರ್ಮಾಧಾರಿತ' ಪಕ್ಷದ ಒಳಗೊಳಗೆ 'ಭಟ್ಟಾಧಿಪತ್ಯ'ಕ್ಕೆ ಕಾರಣವಾಗಿರುವುದು ಮತ್ತು ಅದು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪ್ರತಿಷ್ಠಿತರಾಗಿರುವ ಪ್ರಬಲ ಶೂದ್ರ ಜಾತಿಗಳ ಆಸಕ್ತಿಗಳೊಂದಿಗೆ ಘರ್ಷಣೆಗಿಳಿಯುತ್ತಿರುವುದು ನಿಧಾನವಾಗಿ ರಾಜ್ಯದೆಲ್ಲೆಡೆ ಗೋಚರಿಸುತ್ತಿದೆ.





ಹೀಗಾಗಿಯೇ ಕರಾವಳಿಯ ಜನತೆ ಶೆಟ್ಟರಿಗಾದ ಅವಮಾನವನ್ನು 'ಭಂಟರ' ಸಮುದಾಯದ ಪ್ರತಿಷ್ಠೆಗೆ ಮತ್ತು ಇಡೀ 'ಕರಾವಳಿ' ಪ್ರತಿಷ್ಠೆಗೆ ಆಗಿರುವ ಅವಮಾನವೆಂದು ಭಾವಿಸುತ್ತಿದ್ದಾರೆ.

ಕರಾವಳಿಯಲ್ಲಿ ಮೊಟ್ಟಮೊದಲ ಬಾರಿಗೆ 'ಹಿಂದೂ ಪ್ರತಿಷ್ಠೆ'ಗೆ ಎದುರಾಗಿ 'ಭಂಟ ಪ್ರತಿಷ್ಠೆ' ಮತ್ತು 'ಕರಾವಳಿ ಪ್ರತಿಷ್ಠೆ' ತಾತ್ಕಾಲಿಕವಾಗಿಯೇ ಆದರೂ ಬೀದಿಯಲ್ಲಿ ಬಂಡೆದ್ದಿದೆ. ಇದರ ಪರಿಣಾಮವಾಗಿಯೇ ಕುಂದಾಪುರ ಕ್ಷೇತ್ರದ ಜನತೆ ಮಾತ್ರವಲ್ಲದೇ ಇತರ ಹಲವು ಕಡೆ ಕಲ್ಲಡ್ಕ ಪ್ರಭಾಕರ ಭಟ್ಟರ ವಿರುದ್ಧ ರಾಸ್ತಾ ರೋಖೋ, ಭಟ್ಟನ ಪ್ರತಿಕೃತಿ ದಹನ, ಬೆಂಗಳೂರಿನಲ್ಲಿ ಚಪ್ಪಲಿ ಹಾರ ಇನ್ನಿತ್ಯಾದಿ ಪ್ರತಿಭಟನೆಗಳು ಸತತವಾಗಿ ನಡೆಯುತ್ತಿವೆ. ಮತ್ತೊಂದು ಕಡೆ ಡಿಸಿಎಂ ಆದಕೂಡಲೇ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರು "ಶ್ರೀನಿವಾಸ ಶೆಟ್ಟರಿಗೆ ಅಧಿಕೃತವಾಗಿ ಪಕ್ಷದಿಂದ ಮಂತ್ರಿ ಭರವಸೆ ನೀಡಿರಲಿಲ್ಲ" ಎಂದು ಹೇಳುವ ಮೂಲಕ ಆರೆಸ್ಸೆಸ್‌ನ ಸ್ಥಳೀಯ ನಾಯಕರು ಮತ್ತು ಯಡಿಯೂರಪ್ಪನವರ ಪುತ್ರ ರಾಘವೇಂದ್ರನ ಮಾತಿಗೆ ಬೆಲೆಯಿಲ್ಲ ಎಂದು ಪರೋಕ್ಷವಾಗಿ ಸೂಚಿಸಿದ್ದಾರೆ. ವಾಸ್ತವವಾಗಿ ರಾಘವೇಂದ್ರನಿಗೆ ಕುಂದಾಪುರದಲ್ಲಿ ಟೂರಿಸಂ ವ್ಯವಹಾರವಿದೆ. ಅಲ್ಲಿ ಆತ ಒಂದು ದ್ವೀಪವನ್ನೇ ಇತ್ತೀಚಿಗೆ ಲಂಚದ ದುಡ್ಡಿನಿಂದ ಖರೀದಿ ಮಾಡಿದ್ದಾನೆಂಬ ಸುದ್ದಿಯೂ ಇದೆ. ಆತನ 'ಸ್ವಕ್ಷೇತ್ರ' ಹಿತಾಸಕ್ತಿಯೂ ಇದರಲ್ಲಿ ಇದ್ದದ್ದರಿಂದ ಶೆಟ್ಟರನ್ನು ಮಂತ್ರಿ ಮಾಡಲು ರಾಘವೇಂದ್ರ ಹೆಚ್ಚಿನ ಮುತುವರ್ಜಿ ತೆಗೆದುಕೊಂಡಿರಬಹುದು.

ಅದೇನೇ ಇರಲಿ ನಂತರದಲ್ಲೂ ಬಿಜೆಪಿಯ ನಾಯಕರು ಶೆಟ್ಟರನ್ನು ತಾಜಾ ಮಾಡಲು ಯಾವ ವಿಶೇಷ ಪ್ರಯತ್ನವನ್ನೂ ಮಾಡಲಿಲ್ಲ. ಪ್ರಾಯಶಃ ಅವರು ಹೃದಯಪೂರ್ವಕ ಬಿಜೆಪಿಯಲ್ಲ ಎನ್ನುವುದೂ ಒಂದು ಕಾರಣವಿರಬಹುದು. 'ಹೋದರೆ ಹೋಗಲಿ' ಎಂಬ ಬಿಜೆಪಿ ಪಕ್ಷದ ನಿಲುವು ಅವರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ತೀರ್ಮಾನವನ್ನು ಗಟ್ಟಿಗೊಳಿಸಿದೆಯಲ್ಲದೆ ಅವರು ಪಕ್ಷದಿಂದಲೇ ಹೊರಹೋಗುವ ತೀರ್ಮಾನವನ್ನು ತೆಗೆದುಕೊ[ಳ್ಳುವ] ಹೊಸ್ತಿಲಲ್ಲಿದ್ದಾರೆ. ಈಗಾಗಲೇ ಜೆಡಿಎಸ್ ಅವ[ರನ್ನು] ಸಂಪರ್ಕಿಸಿದೆ ಎಂದೂ ಅದಕ್ಕೆ ಅವರು ಪೂರಕ[ವಾಗಿ] ಸ್ಪಂದಿಸಿದ್ದಾರೆಂದೂ ಸುದ್ದಿ ಹರಡಿದೆ. ಅದೇ ಹಾದಿ[ಯಲ್ಲಿ] ಮತ್ತೊಬ್ಬ ಕರಾವಳಿ ಶಾಸಕ ಅಂಗಾರ ಕೂಡ ಇ[...] ರಘುಪತಿ ಭಟ್ಟ, ಯೋಗೇಶ್ ಭಟ್ಟ ಹಾಗೂ ಇ[...] ಕರಾವಳಿಯ ಶಾಸಕರೂ ಸಹ ಪ್ರಪ್ರಥಮ ಬಾರಿಗೆ ಬಿ[...] ಪಕ್ಷದ ವಿರುದ್ಧ - ಪರೋಕ್ಷವಾಗಿ ಆರೆಸ್ಸೆಸ್‌ನ ಕರಾವಳಿ[...] ಸರಸಂಘ ಚಾಲಕ ಕಲ್ಲಡ್ಕ ಪ್ರಭಾಕರ ಭಟ್ಟನ ವಿರು[ದ್ಧ] ಧ್ವನಿ ಎತ್ತಿದ್ದಾರೆ. ಇದೂ ಈ ಬಾರಿ[...] ಬಿಕ್ಕಟ್ಟು ಹೊರಹಾಕಿರುವ [...] ಕುತೂಹಲಕಾರಿ ಬೆಳವಣಿಗೆ.

ಕರಾವಳಿಯ ಈ ಬೆಳವಣಿ[ಗೆ] ಚಾರಿತ್ರಿಕವಾಗಿಯೂ ಅನನ್ಯವಾಗಿ[...] ಕರ್ನಾಟಕದ ಭೂತ ಮತ್ತು ಭವಿಷ್ಯ[...] ಅರ್ಥಮಾಡಿಕೊಳ್ಳಲು ಸಹಕಾರಿಯಾ[...]

ಲೇಖನದ ಮೊದಲಿನ[...] ಚರ್ಚಿಸಿದಂತೆ ಕರ್ನಾಟಕದ ಇ[...] ಭಾಗದಂತಲ್ಲದೇ ಕರಾವಳಿಯ ಬಿ[...] ಓಟು ಪ್ರಧಾನವಾಗಿ ಅದರ ಹಿಂದೂತ್ವವಾದಿ ಸಿದ್ಧಾ[ಂತಕ್ಕೆ] ಬಿದ್ದ ಓಟು. ಅಲ್ಲಿಯ ಪ್ರಮುಖ ಮತ್ತು ಪ್ರಭಾವಿ ಹಿಂ[...] ಸಮುದಾಯಗಳಾದ ಭಂಟ ಮತ್ತು ಬಿಲ್ಲವ ಜಾತಿ[...] ಅಲ್ಲಿಯ ಆರೆಸ್ಸೆಸ್ ಮತ್ತು ಬಿಜೆಪಿಯ ಬೆನ್ನೆಲು[ಬು] ಪ್ರಧಾನವಾಗಿ ಅಬ್ರಾಹ್ಮಣ ಮತ್ತು ಅವೈದಿಕ ಸಾಂಸ[್ಕೃತಿಕ] ಪರಂಪರೆ ಹೊಂದಿರುವ ಭಂಟ, ಬಿಲ್ಲವ ಮತ್ತು ಮೊಗ[ವೀರ] ಸಮುದಾಯಗಳನ್ನು ಮತ್ತೆ ಬ್ರಾಹ್ಮಣವಾದಿ ಮೇಲರಿಮೆ[...] ಹಿಂದೂತ್ವದ ತೆಕ್ಕೆಗೆ ತರುವುದ[...] ಆರೆಸ್ಸೆಸ್ ಇಲ್ಲಿ ಸಾಪೇಕ್ಷವಾಗಿ ಯ[ಶಸ್ಸು] ಕಂಡಿದೆ. ಇಲ್ಲಿನ ಜನತೆ ಆರಾಧಿ[ಸುವ] ಭೂತಗಳ ಬಾಯಲ್ಲೂ ಭಗವ[...] ಪ್ರವಚನ ಮಾಡಿಸುವಷ್ಟರಮಟ್ಟಿಗೆ [...] 20 ವರ್ಷಗಳಲ್ಲಿ ಸಂಘಪರಿವಾರ ಇ[...] ಜನಸಂಸ್ಕೃತಿಯ ಮೇಲೆ ದಾಳಿ ಮ[...] ಬ್ರಾಹ್ಮಣ್ಯದ ಅಧಿಪತ್ಯಕ್ಕೆ ಒಳಪಡಿ[...] ಈ ಸಾಂಸ್ಕೃತಿಕ ವಿಜಯದ ನಂತರ[...] ಅವರ ಹಿಂದೂ ರಾಷ್ಟ್ರೀಯವಾದ[...] ಬಹಳ ಸುಲಭವಾಗಿ ಅಲ್ಲಿನ ಭ[...] ಮತ್ತು ಶೂದ್ರ ಶಕ್ತಿಗಳಿಗೆ ತುಂಬುವಲ್ಲಿ ಯಶಸ್ವಿಯಾ[...] ಈ ಬೆಳವಣಿಗೆಗೆ 1974ರ ಭೂ ಮಸೂದೆ ಕಾಂ[...] ಒಂದು ಭೂಮಿಕೆಯನ್ನು ಒದಗಿಸಿಕೊಟ್ಟಿತು.

ಭೂ ಮಸೂದೆಯ ನಂತರದ ಆರ್ಥಿಕತೆ [...] ಭಂಟ್ ಸಮುದಾಯಕ್ಕೆ ಮತ್ತು ನಂತರದಲ್ಲಿ ಬಿ[...] ಸಮುದಾಯಕ್ಕೆ ವಿಶಿಷ್ಟ ಬಗೆಯ ಚಲನೆಯ[ನ್ನು] ತಂದುಕೊಟ್ಟಿತು. 1974ರ ಭೂ ಮಸೂದೆ ಕಾಂ[...] ಅತಿ ಹೆಚ್ಚು ಯಶಸ್ವಿಯಾದದ್ದು ದಕ್ಷಿಣ ಕನ್ನಡ ಜಿಲ್ಲೆಯ[...] ಒಂದು ಅಂದಾಜಿನ ಪ್ರಕಾರ ಒಟ್ಟಾರೆ ಎರಡು ಲಕ್ಷ[...] ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದು ಅದರಲ್ಲಿ ಶೇ.88[...] ಅರ್ಜಿಗಳು ಗೇಣಿದಾರರ ಪರವಾಗಿ ಫೈಸಲಾಗಿವೆ. [...] ಭೂಮಾಲಿಕ ಗತ್ತುಗಳು ಇದ್ದದ್ದು ಬಹುಪಾಲು ಬ್ರಾ[ಹ್ಮಣ] ಜೈನ, ಭಂಟ ಮತ್ತು ಕೆಲವೆಡೆ ಮಾತ್ರ ಬಿಲ್ಲವ[ರು] ಗೇಣಿದಾರರೆಂದರೆ ಬಹುಪಾಲು ಬಿಲ್ಲವರು ಮತ್ತು ಅ[...] ಹಲವು ಭಂಟರೂ ಗೇಣಿದಾರರಾಗಿದ್ದರು. ಹೀಗಾಗಿ [...] ಮಸೂದೆ ಕಾಯಿದೆ ಭಂಟ-ಬ್ರಾಹ್ಮಣ-ಜ[ೈನ] ಭೂಮಾಲಿಕತ್ವವನ್ನು ಇಲ್ಲವಾಗಿಸಿ ಪ್ರಧಾನವಾಗಿ ಬಿ[...] ಗೇಣಿದಾರರಿಗೆ ಮತ್ತು ಇತರ ಸಣ್ಣಪುಟ್ಟ ಜಾತಿಗ[ಳಿಗೆ] ಭೂಮಿಯ ಒಡೆತನ ನೀಡಿತು. ಆದರೆ ಆ ವೇಳೆಗಾ[ಗಲೇ] ಭಂಟ ಮತ್ತು ಬ್ರಾಹ್ಮಣ ಭೂಮಾಲಿಕರು ಕೃಷಿಯಿ[...] ಒಂದು ಕಾಲನ್ನು ಆಚೆ ಇಟ್ಟು ಬ್ಯಾಂಕ್, ವ್ಯಾಪಾರ ವ[...] ಇತರ ಸೇವಾಕ್ಷೇತ್ರಗಳಲ್ಲಿ ಬದುಕು ಮತ್ತು ಉ[...] ಕಂಡುಕೊಳ್ಳುತ್ತಿದ್ದರು. ತಮ್ಮನ್ನು ಹಳ್ಳಿಯಿಂದ ಹೊರಗ[...] ದೇವರಾಜ್ ಅರಸ್ ಮತ್ತು ಕಾಂಗ್ರೆಸ್‌ನ ವಿರೋಧಿಗ[...] 80ರ ದಶಕದಲ್ಲಿ ರಾಜಕೀಯ ವೇದಿಕೆಯಾದದ್ದು ಬಿ[...] ಪ್ರಾರಂಭದಲ್ಲಿ ಬ್ರಾಹ್ಮಣ ಮತ್ತು ಜೈನರ ಪಕ್ಷವಾ[...] ಬಿಜೆಪಿಗೆ ನಿಧಾನವಾಗಿ ಭಂಟ ಮತ್ತು ಬಿ[...] ಸಮುದಾಯಗಳ ಮಾಜಿ ಭೂಮಾಲೀಕ ವರ್ಗ[...] ಭರ್ತಿಯಾದವು. ಕೃಷಿಯ ಬಿಕ್ಕಟ್ಟಿನಿಂದಾಗಿ ಸಣ ಹಿಂದ[...] ಪಡೆದ ಬಿಲ್ಲವ-ಭಂಟ ರೈತ ಯುವಜನ ಅರೆ ಉದ[...] ▶





ರಾಜೇಶ್ ಖನ್ನ ಎಂಬ ಸೂಪರ್ ಸ್ಟಾರ್...


ಕಂಡಹಾಗೆ




editorlankesh@gmail.com • ಗೌರಿ ಲಂಕೇಶ್

ರಾಜೇಶ್ ಖನ್ನನ ತುಂಟ ನಗೆ, ಮಿನುಗುವ ಕಣ್ಣು ಸುಂದರಮುಖ 70ರ ದಶಕದಲ್ಲಿ ಲಕ್ಷಾಂತರ ಭಾರತೀಯ ಯುವತಿಯರ ಹೃದಯವನ್ನು ಸೂರೆಗೊಂಡಿತ್ತು. ತಮ್ಮ ಪ್ರೇಮವನ್ನು ನಿವೇದಿಸಿಕೊಂಡು ಆತನಿಗೆ ರಕ್ತದಲ್ಲಿ ಪತ್ರ ಬರೆದವರೇ ಸಾವಿರಾರು ಮಂದಿ. ಆತನನ್ನು ನೋಡಲು ಆತನ ಮನೆಯ ಮುಂದೆ ಹಾಜರಾಗುತ್ತಿದ್ದವರಿಗೆ ಲೆಕ್ಕವಿಲ್ಲ. ಇನ್ನು ಆತ ಇದ್ದಕ್ಕಿದ್ದಂತೆ ಡಿಂಪಲ್ ಕಪಾಡಿಯಾ ಎಂಬ ಸುಂದರಿಯನ್ನು ಮದುವೆ ಆದಾಗ ದೇಶದಾದ್ಯಂತ ಆತ್ಮಹತ್ಯೆ ಮಾಡಿಕೊಂಡ ಯುವತಿಯರ ಲೆಕ್ಕ ಇಟ್ಟವರಿಲ್ಲ.

ರಾಜೇಶ್ ಖನ್ನನ ಮುನ್ನವೂ ಹಲವಾರು ಯಶಸ್ವಿ ಸಿನಿಮಾ ಹೀರೋ ಹೀರೋಯಿನ್‌ಗಳಿದ್ದರು. ವಿಮರ್ಶಕರಿಂದ ಪ್ರಶಂಸೆ ಪಡೆದ ನಟನಟಿಯರಿದ್ದರು. ಆದರೆ ಅವರ್‍ಯಾರೂ ಎಂದೂ ರಾಜೇಶ್ ಖನ್ನನಂತೆ ಭಾಷೆ, ರಾಜ್ಯದಂತಹ ಮಿತಿಗಳನ್ನು ಮೀರಿ ಲಕ್ಷಾಂತರ ಯುವತಿಯರಿಗೆ ಹುಚ್ಚನ್ನು, ಅಷ್ಟೇ ಪ್ರಮಾಣದಲ್ಲಿ ಯುವಕರಲ್ಲಿ ಹೊಟ್ಟೆಕಿಚ್ಚನ್ನು ಮೂಡಿಸಿರಲಿಲ್ಲ. ಆದ್ದರಿಂದಲೇ ರಾಜೇಶ್ ಖನ್ನ ಎಂಬ **phenomenon** ನ ಆಗಮನದವರೆಗೂ ಸ್ಟಾರ್‌ಗಳಿದ್ದರೂ ರಾಜೇಶ್ ಖನ್ನ ಈ ದೇಶದ ಪ್ರಪ್ರಥಮ ಸೂಪರ್‌ಸ್ಟಾರ್ ಎನಿಸಿಕೊಂಡಿದ್ದು.



ಈತ ಮೊದಲನೆ ಬಾರಿಗೆ 'ಆರಾಧನಾ' ಎಂಬ ಸಿನಿಮಾದ ಮೂಲಕ ಎಲ್ಲರ ಗಮನಕ್ಕೆ ಬಂದಾಗ ನನಗಿನ್ನೂ ಏಳು ವರ್ಷ ವಯಸ್ಸು. ಆದರೆ ಅಮ್ಮ ಆ ಸಿನಿಮಾ ನೋಡಲು ನನ್ನನ್ನು ಕರೆದುಕೊಂಡು ಹೋಗಿದ್ದು ಚಿತ್ರಮಂದಿರದಲ್ಲಿದ್ದ ಯುವತಿಯರು



ಆತನನ್ನೇ ದಿಟ್ಟಿಸುತ್ತಾ ಕೂತಿದ್ದದ್ದು, ಸಿನಿಮಾ ಮುಗಿದನಂತರ ತಾವು ಯಾವುದೋ ಅದ್ಭುತವನ್ನು ನೋಡಿದವರಂತೆ ಮುಖ ಅರಳಿಸಿಕೊಂಡು ಹೋಗಿದ್ದು ಇನ್ನೂ ಚೆನ್ನಾಗಿ ನೆನಪಿದೆ.

ರಾಜೇಶ್ ಖನ್ನ ಯುವತಿಯರನ್ನು ಅದು ಹೇಗೆ ಮೋಡಿ ಮಾಡಿದ್ದ ಎಂದರೆ ನಮ್ಮ ಶಾಂತಮ್ಮನ ಬಾಡಿಗೆ ಮನೆಯ ಓನರ್ ಅವರ ಮಗಳೂ ಅದಕ್ಕೆ ಬಲಿಯಾಗಿದ್ದಳು. ನನಗಿಂತ ಸುಮಾರು ಹತ್ತು ವರ್ಷ ಹಿರಿಯಳಾಗಿದ್ದ ಆಕೆಯ ಹೆಸರು ಮೇರು. ಕ್ರಿಶ್ಚಿಯನ್ ಹುಡುಗಿ. ಓದಿನಲ್ಲಿ ತುಂಬಾ ಜಾಣೆ. ಆದರೆ ಆಕೆಯ ಏಕೈಕ ಆಸಕ್ತಿ ರಾಜೇಶ್ ಖನ್ನ. ಆಕೆ ಒಂದು ದೊಡ್ಡ ಸೈಜಿನ ನೋಟ್‌ಬುಕ್‌ನಲ್ಲಿ ರಾಜೇಶ್ ಖನ್ನನ ಫೋಟೋಗಳನ್ನು ಸುಂದರವಾಗಿ ಅಂಟಿಸಿಕೊಂಡಿದ್ದಳು. ಆ ಫೋಟೋಗಳು ದಿನಪತ್ರಿಕೆಗಳಲ್ಲಿ ಮತ್ತು ಸಿನಿಮಾ ಮ್ಯಾಗಜಿನ್‌ಗಳಲ್ಲಿ ಪ್ರಕಟಗೊಂಡಿದ್ದಂತಹವು. ರಾಜೇಶ ಖನ್ನನ ಮುಖ ನೋಡಬೇಕೆನಿಸಿದಾಗಲೆಲ್ಲ ಆ ಪುಸ್ತಕವನ್ನು ತೆರೆದು ನೋಡುತ್ತಿದ್ದಳು.

ಅಷ್ಟರೊಳಗೆ ನಾನೂ ರಾಜೇಶ್ ಖನ್ನನ ಅಭಿಮಾನಿ ಆಗಿದ್ದೆ. ಅದಕ್ಕೆ ಕಾರಣ 'ಹಾಥಿ ಮೇರೆ ಸಾಥಿ' ಎಂಬ ಚಿತ್ರ. ಬೆಂಗಳೂರಿನಲ್ಲಿ ಅದನ್ನು ಆಗಲೇ ಎರಡು ಬಾರಿ ನೋಡಿದ್ದ ನಾನು ಶಿವಮೊಗ್ಗೆಗೆ ಬೇಸಿಗೆ ರಜೆಗೆಂದು ಹೋದಾಗ ಮೂರು ಬಾರಿ ನೋಡಿದ್ದೆ. ನಾನು ಅತಿಹೆಚ್ಚು ಬಾರಿ ನೋಡಿರುವ ಸಿನಿಮಾ ಅದೇ! ಆ ಸಿನಿಮಾದಲ್ಲಿ ಕಮರ್ಷಿಯಲ್ ಸಿನಿಮಾಗಳ ಎಲ್ಲಾ ಅಂಶಗಳು ಇದ್ದರೂ ಮಕ್ಕಳನ್ನು ರಂಜಿಸುವ ಕತೆಯೂ ಇದ್ದಿದ್ದರಿಂದ ಅದನ್ನು ಒಂದು ರೀತಿಯಲ್ಲಿ ಮಕ್ಕಳ ಸಿನಿಮಾ ಎನ್ನಬಹುದು. ಅದರಲ್ಲಿ ನನಗೆ ರಾಜೇಶ್ ಖನ್ನ ಹೆಚ್ಚು ಇಷ್ಟವಾಗಿದ್ದನೋ ಅಥವಾ ಅದರಲ್ಲಿದ್ದ ಆನೆ ಇನ್ನೂ ಹೆಚ್ಚು ಇಷ್ಟವಾಗಿತ್ತೋ ನೆನಪಿಲ್ಲ. ಆದರೆ ಆ ಸಿನಿಮಾ ನೋಡಿದನಂತರ ನಾನು ಕೂಡ 'ಮೇರು ಅಕ್ಕ' ತರಹ ರಾಜೇಶ್ ಖನ್ನನ ಫೋಟೋಗಳನ್ನು ಪತ್ರಿಕೆಗಳಿಂದ ಕತ್ತರಿಸಿಕೊಂಡು ಒಂದು ಹಳೆಯ ನೋಟ್‌ಬುಕ್‌ನಲ್ಲಿ ಅಂಟಿಸಲಾರಂಭಿಸಿದ್ದೆ!

ರಾಜ್ ಕಪೂರ್ ನಿರ್ದೇಶಿಸಿದ್ದ ಅವರ ಮಗ ರಿಶಿ ಕಪೂರ್ ಮತ್ತು ಡಿಂಪಲ್ ಕಪಾಡಿಯ ನಟಿಸಿದ್ದ 'ಬಾಬಿ' ಚಿತ್ರ ಹಲವಾರು ವಿಷಯಗಳಿಗೆ ಸುದ್ದಿ ಮಾಡಿತ್ತು. ಅವುಗಳಲ್ಲಿ ಪ್ರಮುಖವಾದದ್ದು ಡಿಂಪಲ್ ತೊಟ್ಟಿದ್ದ ಕೆಂಪು ಬಣ್ಣದ ಬಿಕಿನಿ, ಚೋಟುದ್ದದ ಸ್ಕರ್ಟ್ ಜೊತೆಗೆ ಮುಂದೆ ಗಂಟು ಬಿಗಿದುಕೊಂಡಿದ್ದ ಬ್ಲೌಸ್. ಆದರೆ ಅದಕ್ಕಿಂತ ಮುಖ್ಯವಾಗಿ ಈ ಚಿತ್ರ ಬಿಡುಗಡೆ ಆಗುವ ಮುನ್ನವೇ ಸೂಪರ್ ಸ್ಟಾರ್ ರಾಜೇಶ್ ಖನ್ನ ತನಗಿಂತಲೂ ಹದಿನೈದು ವರ್ಷ ಚಿಕ್ಕವಳಾದ ಈ ಹುಡುಗಿಯನ್ನು ಮದುವೆ ಆಗಿದ್ದ ಎಂಬುದು. ನನಗಿನ್ನೂ ಚೆನ್ನಾಗಿ ನೆನಪಿದೆ. ಮೆಜೆಸ್ಟಿಕ್‌ನಲ್ಲಿನ ಒಂದು ಚಿತ್ರಮಂದಿರದಲ್ಲಿ 'ಬಾಬಿ' ಸಿನಿಮಾ ನೋಡಲು ಹೋದಾಗ ಗೇಟಿನ ಹತ್ತಿರವೇ ರಿಶಿ ಕಪೂರ್ ಮತ್ತು ಡಿಂಪಲ್ ಕಪಾಡಿಯಾರ ದೊಡ್ಡ ಕಟ್‌ಔಟ್ ಹಾಕಿದ್ದರು. ಆ ಕಟ್ ಔಟಿನಲ್ಲಿ ಡಿಂಪಲ್ ಮೇಲೆ ಹೇಳಿದ ಚಿಕ್ಕ ಸ್ಕರ್ಟ್ ಮತ್ತು ಎದೆಯ ಮುಂದೆ ಗಂಟು ಕಟ್ಟಿಕೊಂಡಿದ್ದ ಬ್ಲೌಸ್ ಚಿತ್ರವಿತ್ತು. ಸಿನಿಮಾ ನೋಡಲು ಬಂದಿದ್ದವರು ಮತ್ತೆ ರಸ್ತೆಯಲ್ಲಿ ಓಡಾಡುತ್ತಿದ್ದವರಲ್ಲೆ ಕೆಲಕ್ಷಣ ನಿಂತು ಆ ಕಟ್‌ಔಟನ್ನು ದಿಟ್ಟಿಸುತ್ತಿದ್ದರು. ಪ್ರಾಯಶಃ ದೇಶದಾದ್ಯಂತ ಮಹಿಳೆಯರು ರಾಜೇಶ್ ಖನ್ನ ಮದುವೆ ಆಗಿದ್ದ ಆ ಹುಡುಗಿಯ ಅಂದವನ್ನು ನೋಡಿ ಹೊಟ್ಟೆಉರಿ ಪಟ್ಟಷ್ಟೇ ಹುಡುಗರೂ ಪಟ್ಟಿರಬಹುದು.

ಏಳು ವರ್ಷಗಳ ಕಾಲ ಅಂಜು ಮಹೇಂದ್ರು ಎಂಬಾಕೆಯನ್ನು ಲವ್ ಮಾಡಿದ್ದ ರಾಜೇಶ್ ಖನ್ನ ಇದ್ದಕ್ಕಿದ್ದಂತೆ ಆಕೆಗೆ ಕೈಕೊಟ್ಟು ಡಿಂಪಲ್ ಎಂಬ ಯುವತಿಯನ್ನು ಮದುವೆ ಆಗಿದ್ದರ ಸುತ್ತ ಹಲವಾರು ಊಹಾಪೋಹ ರೂಮರ್‌ಗಳು ಎಲ್ಲೆಡೆ ಹಬ್ಬಿದವು. ಅವುಗಳಲ್ಲಿ ಒಂದಂತೂ ತುಂಬಾ ರೋಚಕವಾಗಿತ್ತು. ಅದು ಹೀಗಿತ್ತು: ಡಿಂಪಲ್ ಕಪಾಡಿಯಾ ನಿಜವಾಗಲೂ ರಾಜ್‌ಕಪೂರ್ ಮತ್ತು ಆತನ ಪ್ರೇಯಸಿಯಾಗಿದ್ದ ನಟಿ ನರ್ಗೀಸಳ ಮಗಳು. ಅದಕ್ಕೇ ಡಿಂಪಲ್‌ಗೂ ನರ್ಗೀಸ್‌ಗೂ ತುಂಬಾ ಹೋಲಿಕೆ ಇದೆ. ಅವರಿಬ್ಬರ ಹಣೆ ಮತ್ತು ಮೂಗು ಒಂದೇ ತರಹ ಇದೆ. ಆದರೆ ನರ್ಗೀಸ್‌ಳಿಗೆ ಈ ಮಗುವನ್ನು ಸಾಕಲು ಆಗಲಿಲ್ಲ. ಆಗ ಆ ಮಗುವನ್ನು ಕಪಾಡಿಯಾ ಎಂಬ ದಂಪತಿಗಳಿಗೆ ಕೊಟ್ಟರಂತೆ. ಆಕೆ ಬೆಳೆದ ನಂತರ ರಾಜ್ ಕಪೂರ್ ಆಕೆಯನ್ನೇ ತಮ್ಮ 'ಬಾಬಿ' ಸಿನಿಮಾಗೆ ಆಯ್ಕೆ ಮಾಡಿಕೊಂಡರು. ತಾವು ನಿಜಜೀವನದಲ್ಲಿ ಅಣ್ಣ ತಂಗಿ ಎಂದು ಗೊತ್ತಿರದಿದ್ದ ರಿಶಿ ಮತ್ತು ಡಿಂಪಲ್ 'ಬಾಬಿ' ಚಿತ್ರದ ಶೂಟಿಂಗ್ ಸಮಯದಲ್ಲಿ ಒಬ್ಬರನ್ನೊಬ್ಬರು ಪ್ರೀತಿಸಲಾರಂಭಿಸಿದರು. ಇದರ ಬಗ್ಗೆ ರಾಜ್ ಕಪೂರ್‌ಗೆ ಗೊತ್ತಾದಾಗ ಆತನ ತಲೆ ಚಿಟ್ ಹಿಡಿಯಿತು. ಆಗ ಅವರು ರಾಜೇಶ್ ಖನ್ನನ ಕೈ ಹಿಡಿದು ತಮ್ಮನ್ನು ಈ ಗಂಡಾಂತರದಿಂದ ಪಾರು ಮಾಡುವಂತೆ ಬೇಡಿಕೊಂಡರು. ರಾಜೇಶ್ ಖನ್ನನಿಗೂ ಡಿಂಪಲ್‌ಳ ಅಂದಚಂದ ಇಷ್ಟವಾಯಿತು. ಅದಕ್ಕೆ ಅವನು ಆಕೆಯನ್ನು ಮದುವೆ ಆದ! ರಾಜೇಶ್ ಖನ್ನನ ಸುತ್ತ ಇಂತಹ ಹಲವಾರು ಕತೆಗಳು ಆಗಿನ ಕಾಲದಲ್ಲಿ ಸದಾ ಕೇಳಿಬರುತ್ತಿದ್ದವು.




ಆದರೆ ಒಂದು ನಿಜ ಕತೆಯೂ ಇದೆ. ಇದು ಅಪ್ಪನ ಮಿತ್ರರಾಗಿದ್ದ ಕ್ರಿಕೆಟರ್ ಬಾಲಾಜಿ (ಅವರ ನಿಜವಾದ ಹೆಸರು ಶ್ರೀನಿವಾಸನ್) ಅವರು ಹೇಳಿದ್ದು. ಕೆಲವರ್ಷಗಳ ಕಾಲ ಕ್ರಿಕೆಟ್ ಆಡಿದನಂತರ ಅದನ್ನು ತೊರೆದ ಬಾಲಾಜಿ ವಿದೇಶಕ್ಕೆ ಹೋಗಿ ಅಲ್ಲೊಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸಿನಿಮಾ ಬಗ್ಗೆ ಅಷ್ಟೇ ಆಸಕ್ತಿ ಇಲ್ಲದಿದ್ದ ಬಾಲಾಜಿಗೆ ಭಾರತದಲ್ಲೊಬ್ಬ ಸೂಪರ್ ಸ್ಟಾರ್ ಉದಯಿಸಿದ್ದಾನೆ ಎಂಬುದೇ ಗೊತ್ತಿರಲಿಲ್ಲ. ಒಮ್ಮೆ ಬಾಲಾಜಿ ಮುಂಬೈಗೆ ಬಂದಿದ್ದಾಗ ತಾಜ್ ಹೋಟೆಲ್‌ನಲ್ಲಿ ಏರ್ಪಾಟಾಗಿದ್ದ ಒಂದು ಪಾರ್ಟಿಗೆ ಹೋದರಂತೆ. ಆ ಪಾರ್ಟಿಯಲ್ಲಿ ಒಬ್ಬ ಯುವಕ ಬಾಲಾಜಿ ಅವರನ್ನು "ತಮ್ಮ ಹೆಸರೇನು? ತಾವು ಏನು ಮಾಡುತ್ತೀರಿ?" ಎಂದು ಕೇಳಿದನಂತೆ. ಆತನ ಪ್ರಶ್ನೆಗಳಿಗೆ ಉತ್ತರಿಸಿದ ಬಾಲಾಜಿ ಸೌಜನ್ಯದಿಂದ "And you young man, what do you do?" ಎಂದು ಕೇಳಿದರಂತೆ. ಅದನ್ನು ಕೇಳಿ ಆ ಯುವಕನೂ, ಆತನ ಜೊತೆಗಿದ್ದ ಎಲ್ಲರೂ ತಬ್ಬಿಬ್ಬಾದರಂತೆ. ಯಾಕೆ ಎಂದು ಬಾಲಾಜಿಗೆ ಅರ್ಥವಾಗಲಿಲ್ಲ. ಆಗ ಆ ಯುವಕ "ನನ್ನ ಹೆಸರು ರಾಜೇಶ್ ಖನ್ನ. ನಾನೊಬ್ಬ ನಟ. ನಿಮ್ಮಂಥವರು ನಮ್ಮನ್ನು ವಾಸ್ತವ ಲೋಕಕ್ಕೆ ಇಳಿಸುತ್ತೀರಿ. ಥ್ಯಾಂಕ್ಸ್" ಎಂದನಂತೆ. ಆನಂತರವೇ ಬಾಲಾಜಿಗೆ ಗೊತ್ತಾಗಿದ್ದು ಆ ಯುವಕ ಭಾರತೀಯ ಹುಡುಗಿಯರಲ್ಲಿ ಹುಚ್ಚು ಹಿಡಿಸಿದ್ದ ಸೂಪರ್ ಸ್ಟಾರ್ ಎಂದು.

'ಮೇರು ಅಕ್ಕ'ನಂತೆ ನಾನು ರಾಜೇಶ್ ಖನ್ನನನ್ನು ಪ್ರೀತಿಸುತ್ತಿರಲಿಲ್ಲ. ಆದರೆ ಆಕೆಯಂತೆ ನಾನೂ ಆತನ ಫೋಟೋಗಳನ್ನು ಸಂಗ್ರಹಿಸುವುದರಲ್ಲಿ ತಪ್ಪಿಲ್ಲ ಎಂದು ಭಾವಿಸಿದ್ದೆ. ಆದರೆ ಒಮ್ಮೆ ಯಾರೋ ನಮ್ಮ ಮನೆಗೆ ಬಂದಿದ್ದಾಗ ಆ ಪುಸ್ತಕವನ್ನು ನಮ್ಮ ಬೇಬಿ ಅವರಿಗೆ ತೋರಿಸಿದರು. ಅದನ್ನು ನೋಡಿ ಅವರು ನನ್ನನ್ನು ಅದೆಷ್ಟು ಚುಡಾಯಿಸಿದರೆಂದರೆ ನನಗೆ ತುಂಬಾ ಕೋಪ ಬಂದು ಆ ಪುಸ್ತಕವನ್ನು ಅವರ ಕೈಯಿಂದ ಕಿತ್ತುಕೊಂಡು ಹರಿದು ಹಾಕಿದ್ದೆ.

ವರ್ಷಗಳು ಉರುಳಿದವು. ರಾಜೇಶ್ ಖನ್ನ ಮತ್ತು ಅಮಿತಾಭ್ ನಟಿಸಿದ್ದ 'ಆನಂದ್' ಮತ್ತು 'ನಮಕ್ ಹರಾಮ್' ಚಿತ್ರಗಳು ಬಿಡುಗಡೆಗೊಂಡವು. ಜೊತೆಗೆ ಭಾರತೀಯರಿಗೂ ರಾಜೇಶ್ ಖನ್ನ ಎಂಬ ಸನ್ನಿಯಿಂದ ಬಿಡುಗಡೆ ಸಿಕ್ಕಿತು. ರಾಜೇಶ್ ಖನ್ನನಿಗಾಗಿ ಪ್ರೇಮಕತೆಗಳನ್ನು ಬರೆಯುತ್ತಿದ್ದ ಹಿಂದಿ ಸಿನಿಮಾದ ಸ್ಕ್ರಿಪ್ಟ್ ರೈಟರ್‌ಗಳು ಅಮಿತಾಭ್ ಬಚ್ಚನ್‌ಗೆ ಹೊಂದುವ 'ಆಂಗ್ರಿ ಯಂಗ್‌ಮ್ಯಾನ್' ಸುತ್ತ ಕತೆಗಳನ್ನು ಬರೆಯಲಾರಂಭಿಸಿದರು. ನೋಡುನೋಡುತ್ತಿದ್ದಂತೆ ರಾಜೇಶ್ ಖನ್ನನ ಚಾರಿಸ್ಮಾ ಮಾಯವಾಯಿತು, ಆತನ ಮುಖದಲ್ಲಿ ವಯಸ್ಸು ಕಾಣಲಾರಂಭಿಸಿತು. ತನ್ನ ಯೌವ್ವನ ಮತ್ತು ನಂಬರ್ ಒನ್ ಸ್ಥಾನವನ್ನು ಕಾಪಾಡಿಕೊಳ್ಳಲು ಆತ ಹವಣಿಸಲಾರಂಭಿಸಿದ. ತನಗಿಂತ 20ಕ್ಕೂ ಹೆಚ್ಚು ವರ್ಷ ಕಿರಿಯರಾದ ಪದ್ಮಿನಿ ಕೊಲ್ಹಾಪುರೆ ತರಹದ ನಟಿಯರೊಂದಿಗೆ ನಟಿಸಿದ. ಅದ್ಯಾವುದೂ ಆತನಿಗೆ ಮತ್ತೆ ತಾರಾ ವರ್ಚಸ್ಸನ್ನು ತಂದುಕೊಡಲಿಲ್ಲ. ಆತ ಜನರ ಮನಸ್ಸಿನಿಂದ ಮಾಸದಂತೆ ಕಾಪಾಡಲಿಲ್ಲ.

ಈಗ ರಾಜೇಶ್ ಖನ್ನ ಇಲ್ಲ. ಆದರೆ ಇವತ್ತಿಗೂ ಆತ ಮತ್ತು ಶರ್ಮಿಳಾ ಟಾಗೋರ್ ನಟಿಸಿದ್ದ 'ಆರಾಧನಾ' ಮತ್ತು 'ಅಮರ್ ಪ್ರೇಮ್' ತರಹದ ಚಿತ್ರಗಳು ಮನಮುಟ್ಟುತ್ತವೆ. ರಾಜೇಶ್ ಖನ್ನ ಎಷ್ಟು ಒಳ್ಳೆಯ ನಟನಾಗಿದ್ದ, ಎಷ್ಟು ಸುಂದರವಾಗಿದ್ದ ಎಂಬುದನ್ನು ತೋರುತ್ತವೆ. ಆ ಚಿತ್ರಗಳ ಹಾಡುಗಳು ಇವತ್ತಿಗೂ ಜನರ ಮನಸ್ಸಿನಲ್ಲಿ ಉಳಿದಿವೆ.

ರಾಜೇಶ ಖನ್ನ ನನ್ನ ಬಾಲ್ಯದ ಒಂದು ನೆನಪು. ಆತ ಇನ್ನಿಲ್ಲ ಎಂಬ ಸುದ್ದಿ ಕೇಳಿದಾಗ ಆ ನೆನಪುಗಳು ಮರುಕಳಿಸಿದವು.....



ಅಸ್ತಂಗತನಾದ ಅಮರಪ್ರೇಮಿ!




ಹಳ್ಳಿಗಾಡಿನ ಹೈಸ್ಕೂಲಿನಲ್ಲಿ ಎಸ್ಸೆಸ್ಸೆಲ್ಸಿ ಪಾಸಾಗಿ, ಮೈಸೂರಿನ ಬನುಮಯ್ಯ ಕಾಲೇಜಿಗೆ ಅರ್ಜಿ ಹಾಕಿ ಸೀಟು ಸಿಕ್ಕ ಖುಷಿಯಲ್ಲಿ ಮೊಟ್ಟ ಮೊದಲು ಮಾಡಿದ ಕೆಲಸವೆಂದರೆ ಪದ್ಮಾ ಟಾಕೀಸಿಗೆ ಹೋಗಿ ಸಿನಿಮಾ ನೋಡಿದ್ದು. ಅದೂ 'ಕೃಷ್ಣದೇವರಾಯ'!

ನಾನು ನನ್ನ ಜೀವಮಾನದಲ್ಲಿ ನೋಡಿದ ಮೊದಲ ಸಿನಿಮಾ ಅದು. ಅದರಲ್ಲೂ ಕಲರ್ ಸಿನಿಮಾ. ಆ ವಾರದಲ್ಲಿ ಮೂರು ಬಾರಿ 'ಕೃಷ್ಣದೇವರಾಯ'ನನ್ನು ನೋಡಿದ ನಂತರ, ಕುತೂಹಲದ ಮನಸ್ಸು ತಣಿಯಿತು. ಇನ್ನ ಕಾಲೇಜಿಗೆ ಹೋದರೆ, ರಾಜೇಶ್ ಖನ್ನನಂತೆ ಹೇರ್‌ಸ್ಟೈಲ್ ಮಾಡಿಕೊಂಡು ಖುರ್ತಾ ಹಾಕಿದ ಕುಬೇರರ ಮಕ್ಕಳು ಕಾಲೇಜಿನ ಹೊರ ಆವರಣದಲ್ಲಿ ಮಾತನಾಡುತ್ತಾ ನಿಂತಿರುತ್ತಿದ್ದರು. ಅವರ ಸುತ್ತ ಹೊಗಳುಭಟ್ಟ ಹುಡುಗರು. ಅವರ ಬಾಯಿಂದ ರಾಜೇಶ್ ಖನ್ನ ಎಂಬ ಮಾತು ಹೊರಬರುತ್ತಿದ್ದವು.

ನನಗೆ ಈ ರಾಜೇಶ್ ಖನ್ನ ಯಾರು ಎಂಬುದೇ ಗೊತ್ತಿರಲಿಲ್ಲ. ಅದಾಗಲೇ 'ಆರಾಧನಾ' ಸಿನಿಮಾ ಬಿಡುಗಡೆಯಾಗಿ ಊರು ತುಂಬ ಪೋಸ್ಟರುಗಳ ಜೊತೆಗೆ ಎಲ್ಲೆಂದರಲ್ಲಿ ಆ ಚಿತ್ರದ ಹಾಡುಗಳು ಮೊಳಗುತ್ತಿದ್ದವು. ಚಾಮುಂಡಿಪುರಂ ಏರಿಯಾದ ಕಲ್ಯಾಣಮಂದಿರದಲ್ಲಿ 'ರೂಪು ತೆರಾ ಮಸ್ತಾನ' ಎಂಬ ಹಾಡನ್ನು ತಿರುಗಾಮುರುಗಾ ಹಾಕುತ್ತಿದ್ದರು. ಆ ವರ್ಷದ ಗಣಪತಿ ಹಬ್ಬದಲ್ಲಿ ಇಡೀ ಮೈಸೂರು ರಾಜೇಶ್ ಖನ್ನಾನ ಸಿನಿಮಾ ಹಾಡುಗಳಿಂದ ತುಂಬಿಹೋಗಿತ್ತು. ಆರ್ಕೆಸ್ಟ್ರಾದವರು ಬಂದು ಹಾಡುತ್ತಿದ್ದ ಹಾಡುಗಳೂ ಅವೆ.

ಕೆಲವು ವರ್ಷ ಮೊಹಮದ್ ರಫಿ ದನಿ ಮರೆಯಾಗಿದ್ದ ಕಾಲ ಅದು. ಕಿಶೋರ್ ಹಾಡು ಕೇಳಿಯೇ ಸಿನಿಮಾ ನೋಡುವಂತಾಗುತ್ತಿತ್ತು. ಊರ ಕಡೆಯಿಂದ ಬಂದವರನ್ನು ಸಿನಿಮಾ ನೋಡುವಂತೆ ಪುಸಲಾಯಿಸಿ ಅವರನ್ನು ಸೆಕೆಂಡ್ ಶೋಗೆ ಕರೆದುಕೊಂಡು ಹೋಗುತ್ತಿದ್ದೆ. ಆಗಲೇ ನಾನು 'ಆರಾಧನಾ', 'ಕಟೀ ಪತಂಗ್', 'ಹಾಥಿ ಮೇರೆ ಸಾಥಿ' ನೋಡಿದ್ದು. ಈ ಪೈಕಿ 'ಹಾಥಿ ಮೇರೆ ಸಾಥಿ'ಯನ್ನು ಆನೆಗಳಿಗೋಸ್ಕರ ನಾಲ್ಕೈದು ಬಾರಿ ನೋಡಿದ್ದೆ. ಆದರೆ ರಾಜೇಶ್ ಖನ್ನನ ಅಭಿನಯ ಮೆಚ್ಚಲಾಗಿರಲಿಲ್ಲ. ಏಕೆಂದರೆ ಆತ ತುಂಬಾ ಸಹಜವಾಗಿ, ನಿರಾಯಾಸವಾಗಿ ಮತ್ತು ಲೀಲಾಜಾಲವಾಗಿ ಅಭಿನಯಿಸಿದಂತೆ ಕಾಣುತ್ತಿದ್ದ. ಅಂತಹ ಅಭಿನಯವನ್ನು ಮೆಚ್ಚದಿರಲು ಕಾರಣ ನಮ್ಮ ರಾಜಣ್ಣ. 1969-70-71ರಲ್ಲಿ ರಾಜ್‌ಕುಮಾರ್ ಸಿನಿಮಾ ವರ್ಷಕ್ಕೆ ಹತ್ತರಿಂದ ಹನ್ನೆರಡರವರೆಗೆ ಬಿಡುಗಡೆಯಾಗುತ್ತಿದ್ದವು. ಅವನ್ನೆಲ್ಲಾ ನೋಡಿದ ನಾನು ಇತರ ಭಾಷೆಯ ನಟರನ್ನು ನಮ್ಮ ರಾಜಣ್ಣನಿಗೆ ಹೋಲಿಕೆ ಮಾಡಿ, ಇವರ್‍ಯಾರಾದರೂ 'ರಣಧೀರ ಕಂಠೀರವ'ನ ಪಾತ್ರ ಮಾಡಲಿ ನೋಡೋಣ ಎಂದು ಕೊಚ್ಚಿಕೊಳ್ಳುತ್ತಿದ್ದೆ.

ಆದರೆ 'ಆನಂದ್' ಸಿನಿಮಾ ನೋಡಿದ ನಂತರ ಅಭಿನಯದ ಪ್ರಾಕಾರಗಳು ನನ್ನನ್ನು ದಂಗುಬಡಿಸಿದವು.



ಸಿನಿಮಾ ಮುಗಿದ ನಂತರ ಹೊರಟ ಎಲ್ಲರೂ ಅಮಾಯಕನೊಬ್ಬನ ಶವಸಂಸ್ಕಾರ ಮುಗಿಸಿದಂತೆ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡು ಥಿಯೇಟರಿನಿಂದ ಹೊರಬಂದರು. ಸಾವಿಗೆ ತುಂಬ ಹೆದರುತ್ತಿದ್ದ ಕಾಲವದು. ರಾಜೇಶ್ ಖನ್ನ 'ಬಾಬು ಮೋಷಾಯ್' ಎಂದು ಆರ್ದ್ರ ದನಿಯಲ್ಲಿ ತನ್ನ ಕಡೆಗಳಿಗೆಯ ಮಾತನ್ನ ಹೇಳುತ್ತ ಕಣ್ಮುಚ್ಚಿದ. ಆ ಕ್ಷಣ ನೋಡಿದ ಯಾವ ಪ್ರೇಕ್ಷಕನೂ ಅಳದಿರಲಾರ. ಅದೇ ಶಿವಾಜಿ ಗಣೇಶ್ ಸತ್ತಿದ್ದರೆ ಇಡೀ ರೂಮಿನ ಎಲ್ಲಾ ಪದಾರ್ಥಗಳನ್ನು ಧ್ವಂಸ ಮಾಡಿ, ಹಲ್ಲಿನಿಂದ ಬೆಡ್‌ಶೀಟನ್ನು ಹರಿದು, ಕಾಟನ್ನೆ ಕಚ್ಚಿ ಪ್ರಾಣ ಬಿಡುತ್ತಿದ್ದರು. ಆಗ ಯಾರಿಗೂ ದುಃಖವಾಗುತ್ತಿರಲಿಲ್ಲ, ಆದರೆ ರಾಜೇಶ್ ಖನ್ನ ಸಹಜವಾಗಿ ಸತ್ತಿದ್ದ. ದಿನಬೆಳಗಾಗುವುದರಲ್ಲಿ ಆತ ಸೂಪರ್ ಸ್ಟಾರ್ ಆಗಿ ಮೆರೆಯಲು ಈ ಸಹಜಾಭಿನಯವೇ ಕಾರಣವಿರಬಹುದು.

ರಾಜೇಶ್ ಖನ್ನ ಧುತ್ತನೆ ಮೇಲೇರಿದ ಸಂದರ್ಭ ನೋಡಿದರೆ ಆಗಿನ ಎಲ್ಲಾ ಹೀರೋಗಳು ಒಂದು ನಿಲುಗಡೆಗೆ ಬಂದಿದ್ದರು. ದಿಲೀಪ್ ಕುಮಾರ್ ನಟನಾಗಿ ಯುವಜನಾಂಗವನ್ನು ಸೆಳೆಯದ ಶ್ರೇಷ್ಠನಟನಾಗಿ ಉಳಿದುಬಿಟ್ಟಿದ್ದ. ತುಸು ಅವನಂತೆಯೇ ಕಾಣುತ್ತಿದ್ದ ರಾಜೇಂದ್ರಕುಮಾರ್‌ನಲ್ಲಿ ಹೊಸದಾಗಿ ತೋರುವ ಯಾವ ಅಭಿನಯವೂ ಇರಲಿಲ್ಲ. 'ಮೇರಾ ನಾಮ್ ಜೋಕರ್' ಸೋಲಿನಿಂದ ರಾಜ್ ಕಪೂರ್ ಹೀರೊ ಪಾತ್ರದಿಂದ ವಿಮುಖರಾಗಿದ್ದರು. ಇನ್ನ ಕದ್ದು ಕೋಳಿ ಹಿಡಿಯುವವನಂತೆ ನಡೆದುಬರುತ್ತಿದ್ದ ದೇವಾನಂದ್ ಯುವಜನರನ್ನು ಆಕರ್ಷಿಸುವ ವೇಶ ಮತ್ತು ಹೇರ್‌ಸ್ಟೈಲ್ ಹೊಂದಿದ್ದನ್ನು ಬಿಟ್ಟರೆ, ಆತನ ಸಿನಿಮಾವನ್ನ ಬಿಡದಂತೆ ನೋಡಬೇಕೆನ್ನಿಸುತ್ತಿರಲಿಲ್ಲ. ಜಿತೇಂದ್ರ ನಮ್ಮ ಕನ್ನಡದ ಶ್ರೀನಾಥ್‌ನಂತೆ ಸುಳ್ಳು ಹೊಗಳಿಕೆಗೆ ತುತ್ತಾಗಿದ್ದ. ತುಂಬ ಖುಷಿಯಾದಂತೆ ಕುಣಿಯುತ್ತಿದ್ದ ಆತನನ್ನು ಒಳ್ಳೆ ಡ್ಯಾನ್ಸರ್ ಎನ್ನುತ್ತಿದ್ದರು. ನಾವು ನಮ್ಮ ಅಕ್ಕಿಮೂಟೆ ಶ್ರೀನಾಥ್‌ನನ್ನ ಪ್ರಣಯರಾಜ ಎಂದು ಕರೆದಿಲ್ಲವೆ ಹಾಗೆ. ಇನ್ನ ಶ... ಕಪೂರ್‌ನ ನಟನೆ ನೋಡಿ ಜನ ದಣಿದಿದ್ದರು. ಧರ್ಮೇ... ಫುಟ್‌ಬಾಲ್ ಆಟಗಾರನಂತೆ ಕಾಣುತ್ತಿದ್ದನೇ ಹೊರ... ಪ್ರೇಮಿಯಾಗಿ ಕಾಣಲಿಲ್ಲ. ಇಂತಹ ಒಂದು ಸಂದರ್ಭದ... ಹಿಂದಿ ಚಿತ್ರರಂಗದ ಆಗಸದಲ್ಲಿ ಕಾಣಿಸಿಕೊಂಡ ತ... ರಾಜೇಶ್ ಖನ್ನ.

ಇದೇರೀತಿ ಶಾರುಖ್ ಖಾನ್ ಧುತ್ತನೆ ಪ್ರತ್ಯಕ್ಷವಾದ... ರಾಜೇಶ್ ಖನ್ನ ಏರಿಬಂದ ಎತ್ತರವನ್ನ ಮುಟ್ಟಲಾಗಲಿ... ಅದೊಂಥರ ಎವರೆಸ್ಟ್ ತುದಿಯಿದ್ದಂತೆ. ಆ ಜನಪ್ರಿಯತೆ... ತುತ್ತತುದಿ ಮುಟ್ಟಿ ಬಂದವನು ರಾಜೇಶ್ ಖನ್ನ ಮಾ... ಆ ಸಮಯದಲ್ಲಿ ಆತ ನಿವೃತ್ತನಾಗುತ್ತೇನೆ ಎಂದು ಹೇಳಿ... ಆದರೆ ನಿವೃತ್ತಿಯಾಗಿ ಏನು ಮಾಡುವುದೆಂಬ ಸಮ... ಅಷ್ಟೇ ಎತ್ತರದಲ್ಲಿ ಕಾಣಿಸಿಕೊಂಡ ಫಲವಾಗಿ ಹಾ... ಮುಂದುವರಿದ.

ಆತ ಇಡೀ ಭಾರತದ ಯುವ ಜನಾಂಗಕ್ಕೆ ಮಾಡಿ... ಹೇರ್‌ಕಟ್ ಮಾಯವಾಗುತ್ತಾ ಹಳೆಯದಾಯ್ತು. ಆದರೆ... ಆತ ಏರಿದ ಎತ್ತರ ಮಾತ್ರ ಹಾಗೇ ಇತ್ತು.

ಇವತ್ತಿನ ಮಧ್ಯವಯಸ್ಕರು ನೆನೆಸಿಕೊಂಡರೆ, ಆ... ಕಾಲ ಬಹಳ ಸುಂದರವಾಗಿದ್ದ ಕಾಲ. ಕ್ರಿಕೆಟ್ ಹ... ಪಟೌಡಿಯನ್ನು ಮದುವೆಯಾಗಿದ್ದ ಶರ್ಮಿ... ಠಾಗೂರ್-ರಾಜೇಶ್ ಖನ್ನ ಜೋಡಿ ನೋಡುವುದೇ ಒಂ... ಖುಷಿ. ಮುಮ್ತಾಜ್, ಹೇಮಾಮಾಲಿನಿ, ಆಶಾಪರೇ...

ದ್ಯಾವೇಗೌಡ್ರು ಫೋನೆತ್ಕೊಡ್ತಿದ್ರೆ ನಾನ ತೊಗೊಳ್ಳೊದಿಲ್ರಿ!

ಇನ್ನೇನು ಬಿಜೆಪಿ ಮನೆಗೆ ಬೆಂಕಿಬಿದ್ದು, ಅದರೊಳಗಿನ ಹಂದಿಮರಿಗಳೆಲ್ಲಾ ದಿಕ್ಕಾಪಾಲಾಗಿ ಓಡುವ ಸೂಚನೆ ಸಮೀಪವಾದಂತೆ, ದೇವು ಅಂಡ್ ಸನ್ಸ್ ಸರಿಯಾದ ಮಾರಿಬಲಿಯನ್ನೇ ಬಿಜೆಪಿ ಬಾಗಿಲಿಗೆ ಒದ್ದಿ ಕೂತಿದ್ದಾರಂತಲ್ಲಾ, ಈ ಬಲಿಗೆ ಈಗಾಗಲೇ ಕೊರಟಗೆರೆ ಕಡೆಯ ಗಡವನೊಂದು ಅನಾಮತ್ತು ಬಿದ್ದು "ನನಗೆ ಬಲಿ ಹಾಕುವ ಅಗತ್ಯವಿರಲಿಲ್ಲ, ನಾನೇ ನಿಮ್ಮ ಮನೆಯ ಹಿತ್ತಲಬಾಗಿಲಲ್ಲಿ ಕಾಣಿಸಿಕೊಳ್ಳುತ್ತಿದ್ದೆ" ಎಂದು ನಕ್ಕಿತಂತಲ್ಲಾ. ಅತ್ತ ಸಾಗರದ ಕಡೆಯ ಅತೃಪ್ತ ಮಿಕವೊಂದು ಕುಮಾರಸ್ವಾಮಿ ಒಡ್ಡಿದ ಬಲೆಗೆ ಎರಡನೇ ಬಾರಿ ಬೀಳುವುದಕ್ಕಿಂತ ಮಾತುಕತೆಯ ಮೂಲಕವೇ ಬರುವ ತಯಾರಿ ನಡೆಸಿ, ಮುಂದಿನ ಚುನಾವಣೆ ಖರ್ಚುವೆಚ್ಚದ ಚರ್ಚೆ ನಡೆಸಿ, "ಇದೊಂದು ಸೌಹಾರ್ದಯುತವಾದ, ಉಭಯತ್ರರಿಗೂ ಹಿತ ನೀಡುವ ಸಂವಾದವೇ ಹೊರತು ಬಲಿಯ ವಿಷಯವಲ್ಲಾ" ಎಂದನಂತಲ್ಲಾ, ಕುಮಾರಣ್ಣನ ಕಾರ್ಯಾಚರಣೆಯನ್ನು ಹಿಗ್ಗಿನಿಂದಲೇ ಗಮನಿಸಿದ ಮಾಜಿ ಪ್ರಧಾನಿಗಳು "ಆ ಬಿಜೆಪಿಯಿಂದ ಬರುವ ಎಲ್ಲರಿಗೂ ಮಂತ್ರಿ ಮಾಡುವ ಆಶ್ವಾಸನೆ ಕೊಟ್ಟುಬಿಡು. ನಂತರ ನೋಡಿಕೊಳ್ಳೋಣ" ಎಂದರಂತಲ್ಲಾ, ಥೂತ್ತೇರಿ!

* * * *

ಸಿದ್ದರಾಮಯ್ಯನನ್ನು ಜೆಡಿಎಸ್ ಪಾಳಯದಿಂದ ಓಡಿಸಿದ ನಂತರ, ಕುರುಬರ ಜಾಗಕ್ಕೆ ಸಾಬರನ್ನು ತಂದು ತುಂಬುವ ಹುನ್ನಾರದಿಂದ, ಅಪ್ಪಮಕ್ಕಳು ಜಮೀರ್ ಅಹಮ್ಮದನ ಲೀಡರ್‌ಶಿಪ್ಪಿನಲ್ಲಿ, ನ್ಯಾಷನಲ್ ಟ್ರಾವಲ್ ಬಸ್ ಮುಖಾಂತರ ಸಾಬರನ್ನು ಕರೆದು ತಬ್ಬಿ ಕೊಂಡರಂ ತಲ್ಲಾ, ಇದನ್ನು ನೋಡಿ ಹೆದರಿದ ಕಾಂಗ್ರೆಸ್ಸಿಗರು, ಸಾಬರನ್ನು ಕರೆದು, "ನೋಡ್ರೀ, ಇವತ್ತು ಬಿಜೆಪಿಗಳ ಲಾಟ ಮತ್ತು ಚಡ್ಡಿ ಬರುಸಾಗುವಂತೆ ಮಾಡಿದವರು ಈ ಅಪ್ಪಮಕ್ಕಳೆ. ಅವರ ಇಪ್ಪತ್ತು ತಿಂಗಳ ತೆವಲಿಗಾಗಿ ಐದು ವರ್ಷ ಚಡ್ಡಿಗಳನ್ನು ಈ ನಾಡಿನ ಮೇಲೆ ಹೇರಿಬಿಟ್ಟರು. ಅವರು ಯಾವ ನೆದರೂ ಇಲ್ಲದೆ ಈ ನಾಡನ್ನು ಲೂಟಿ ಮಾಡಿಬಿಟ್ಟರು. ಮೊದಲು ಬಡವರಾಗಿದ್ದ ಬಿಜೆಪಿಗಳು ಇವತ್ತು ಶ್ರೀಮಂತರಾಗಲು ಈ ಜೆಡಿಎಸ್ಸಿನ ಅಪ್ಪಮಕ್ಕಳೇ ಕಾರಣ ಎಂದು ಪ್ರೆಸ್‌ಮೀಟ್ ಕರೆದು ಹೇಳಬೇಕು" ಎಂದರಂತಲ್ಲಾ, ಕಾಂಗ್ರೆಸ್ಸೊಳಗಿರುವ ಸಂತೃಪ್ತ ಸಾಬರ ಲೀಡರುಗಳು "ಯಲ್ಲಾ ಪಾರ್ಟಿದು ಅದೇ ಕತೆ ಸಾರ್. ಎಲ್ಲಾ ನಮ್ಗ ಸರಿಯಾಗಿ ಯೂಜ್ ಮಾಡಕಂಡಿ ಬಿಸಾಕ್‌ಬಿಡ್ತರೆ ಅಷ್ಟೆ. ಅದೇ ಬಿಜೆಪಿಗಳು ನೋಡಿ ನಮ್ದು ಸವಾಸ್‌ಗೆ ಬರಲ್ಲ ಗೊತ್ತಾ?" ಎಂದರಂತಲ್ಲಾ, ಥೂತ್ತೇರಿ!

* * * *



ಬರವೆಂಬ ಭೀಕರ ಬ್ರಹ್ಮರಾಕ್ಷಸನ ಬಾಯಿಗೆ ಸಿಕ್ಕು ನರಳುತ್ತಿರುವ ಕರುನಾಡಿಗೆ, ಬರಗಾಲ ಬಡಿದಂತೆ ವಕ್ಕರಿಸಿದ ಜಗದೀಶ್ ಶೆಟ್ಟರ್ ಎಂಬ ಸಜ್ಜನ ರಾಜಕಾರಣಿಯನ್ನು ಬರಮಾಡಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೆ. ಅದಕ್ಕಾಗಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ನೀ ಹೀಂಗ ನೋಡಬೇಡ ನನ್ನಾ, ತಿರುಗಿ ನಾ ಹ್ಯಾಂಗೆ ನೋಡಲೀ ನಿನ್ನಾ....."

"ಹಲೋ ಯಾರು?"

"ನಾನು ಸಾರ್ ಯಾಹು ಅಂತ, ಪತ್ರಕರ್ತ."

"ಹೌದೇನ್ರಿ, ಏನು ಹೇಳ್ರಲ್ಲಾ?"

"ಕರ್ನಾಟಕದ 27 ನೇ ಮುಖ್ಯಮಂತ್ರಿಯಾದ ನಿಮಗೆ ಅಭಿನಂದನೆಗಳು ಸಾರ್."

"ಥ್ಯಾಂಕ್ಸ್‌ರಿ!"

ಥೂತ್ತೇರಿ
ಯಾಹೂ

"ಹೊಸ ಮುಖ್ಯಮಂತ್ರಿಯಾದ ನಿಮ್ಮ ಮುಂದಿರೊ ಸವಾಲುಗಳೇ... ಸಾರ್?"

"ಸವಾಲು ಭಾಳದಾವ್ರಿ. ಎಲ್ರು ಕೂಡ ಕುಂತೂ ಚರ್ಚೆ ಮಾ... ಬಗೆಹರಸ್ತಿವ್ರಿ."

"ಮುಂಗಾರು ಮಳೆ ಬೆಳೆ ಇಲ್ಲ ಸಾರ್..."

"ಹೌದ್ರಿ, ಮುಂದಿಗಿ ಬಾಳ ತ್ರಾಸಾಗೇ... ಎಲ್ರೂ ಕೂಡಿ ಚರ್ಚೆ ಮಾ... ಬಗೆಹರಸ್ತಿವ್ರಿ."

"ಯಾರು ಕೂಡ ಚರ್ಚೆ ಮಾಡ್ತಿರಿ ಸಾರ್?"

"ನಮ್ಮ ಪಕ್ಷದ ಮುಖಂಡರು, ಸಂಬಂಧಪಟ್ಟ ಇಲಾಖೆ, ಅಧಿಕಾರಿಗ... ಕೂಡ ಚರ್ಚೆ ಮಾಡ್ತಿನಿ."

"ದೇವರಾಣೆ ನೀವು ಚರ್ಚೆ ಮಾಡಲ್ಲ ಸಾರ್."

"ಯಾದಕ್ರಿ?"

"ಮುಖ್ಯಮಂತ್ರಿಯಾಗಿ ವಾರಾಯ್ತ ಬಂತು. ಇನ್ನೂ ನೀವು ಗುಡಿ ಗುಂಡ... ಸುಡುಗಾಡು ಸಿದ್ದರನೆಲ್ಲಾ ಬೇಟಿಯಾಗಿ ಕಾಲ ಕಳಿತಾಯಿದ್ದಿರಿ."

"ಗುರುಗಳು, ದೇವರ ಆಶೀರ್ವಾದ ಕೇಳೂದು ತಪ್ಪೇನ್ರಿ?"

"ತಪ್ಪು ಸಾರ್. ಈ ಸಂದರ್ಭದಲ್ಲಿ ಅವ್ರುರಿಂದ ಏನೂ ಪ್ರಯೋಜ... ಇಲ್ಲ. ನೀವು ಮೈಸೂರು ಚಾಮುಂಡಿಬೆಟ್ಟಕ್ಕೆ ಹೋಗೋದಕಿಂತ ಗು... ಹೊಂಟರೊ ಕ್ಷೇತ್ರಕ್ಕೆ ಹೋಗಬಹುದಿತ್ತು. ಆ ಸಿದ್ಧಗಂಗೆ ಸ್ವಾಮಿ ನೋಡೋದಕಿಂ... ಬರಪೀಡಿತ ಜಾಗಕ್ಕೆ ಹುಲ್ಲು ತಂದು ಹಂಚೋ ಅಧಿಕಾರಿಗಳ ಜೊ... ಮಾತಾಡಬವುದಿತ್ತು, ಸಿದ್ದಗಂಗೆ ಸ್ವಾಮಿಗಳಿಗೂ ಖುಷಿಯಾಗದು. ಯಾಕಂ... ಅವುರೂ ದನ ಸಾಕಿದಾರೆ, ದನಿನ ಜಾತ್ರೆನೂ ನಡಸ್ತರೆ."

"ಗೊತ್ತುರಿ. ನಾ ಈಗಾಗ್ಲೆ ಅಧಿಕಾರಿಗಳ ಕೂಡ ಚರ್ಚೆ ಮಾಡಿನಿ. ಆದಲಿತ ಚುರುಕಾಗೇತಿ. ಅದಕ ದೇವಸ್ಥಾನಕ್ಕೆ ಹೋದ್ನ."

ವ ಇಂತ ಸುರಸುಂದರಿಯರೆಲ್ಲಾ ಆತನ ಎತ್ತರಕ್ಕೆ ನಾಯಕರಾದ ನಟಿಯರು. ಆದರಲ್ಲೂ ಮುಮ್ತಾಜ್ ರೆ ಪ್ರೇಕ್ಷಕ ವಿಶೇಷ ಪುಳಕದಿಂದ ರೋಮಾಂಚನ ಳ್ಳುತ್ತಿದ್ದ. ತಮಿಳು ಚಿತ್ರವೊಂದರಲ್ಲಿ ಹೀರೊ, ರೋಯಿನ್ ಸಿನಿಮಾ ನೋಡಲು ಹೋಗುತ್ತಾರೆ. ಆ ರಾಜೇಶ್ ಖನ್ನ ಮತ್ತು ಮುಮ್ತಾಜ್ ನಟಿಸಿದ್ದ ವಾಗಿತ್ತು. ಒಂದು ಮಳೆ ದೃಶ್ಯದ ಹಾಡನ್ನ ಪೂರ್ತಿ ೇರಿಸುತ್ತಾರೆ. ತೋಯ್ದ ಬಟ್ಟೆಯಲ್ಲಿ ಮುಮ್ತಾಜ್ ಣೆಯಂತೆ ಕಾಣುತ್ತಾಳೆ. ಹೀಗೆ ರಾಜೇಶ್ ಖನ್ನನ ಎತ್ತರಕ್ಕೆ ಾಯಕರಾದವರು ಒಬ್ಬಿಬ್ಬರಲ್ಲ. ಒಬ್ಬ ಮಹಾನ್ ನಟ ಾಗಿ ಕತೆ ಬರೆಯುವವರನ್ನು ಪ್ರೇರೇಪಿಸಬಲ್ಲ ಎಂಬುದಕ್ಕೆ ಜೇಶ್ ಒಳ್ಳೆ ಉದಾಹರಣೆ.

ಎಲ್ಲಾ ಖ್ಯಾತಿವಂತರನ್ನು ಹಿಡಿದು ತಮ್ಮ ಬುಟ್ಟಿಗೆ ಕಿಕೊಂಡು ಅವರ ಜನಪ್ರಿಯತೆಯನ್ನು ಯೋಗಿಸಿಕೊಂಡು, ಅನಂತರ ಅವರನ್ನು ಬಿಸಾಕುವುದು ಗ್ರೆ ಮತ್ತು ಬಿಜೆಪಿ ಪಾರ್ಟಿಯ ಹುಟ್ಟುಗುಣ. ಅದರಂತೆ ಜೀವ್ ಗಾಂಧಿ ರಾಜೇಶ್ ಖನ್ನನನ್ನು ಪಾರ್ಟಿಗೆ ಸಿಕೊಂಡು ಸುಮ್ಮನಾದರು. ಸಾಮಾನ್ಯವಾಗಿ ಸಿನಿಮಾ ಗಳು ಎಲ್ಲೆಂದರಲ್ಲಿ ಕಾಣಿಸಿಕೊಂಡರೆ ಅಗ್ಗವಾಗಿ ೇಗುತ್ತಾರೆ. ಇಂತಹದೊಂದು ಸ್ಥಿತಿಗೆ ಇಳಿದು ಮತ್ತೆ ಕರಿಸಿಕೊಂಡು ಮುನ್ನುಗ್ಗಿದವನೆಂದರೆ ಅಮಿತಾಬ್ ್ನ್. ಆದರೆ ರಾಜೇಶ್ ಖನ್ನಾನಂತ ಸೂಕ್ಷ್ಮಮನಸ್ಸಿನ ಿಗಿದು ಸಾಧ್ಯವಾಗಲಿಲ್ಲ. ಆಗಿನ ಕಾಂಗ್ರೆಸ್ ಪಾರ್ಟಿ ತ್ತೆಂದರೆ ಎಂತಹ ಪ್ರಖ್ಯಾತ ವ್ಯಕ್ತಿ ಆ ಪಾರ್ಟಿ ಸೇರಿದರೂ ಟ್ಟವನಂತೆ ಕಂಡು ಜನಪ್ರಿಯತೆ ಕಳೆದುಕೊಳ್ಳುತ್ತಿದ್ದ. ಜೇಶ್ ಖನ್ನನಿಗೂ ಹೀಗೇ ಆಗಿರಬಹುದು.

ರಾಜೇಶ್ ಖನ್ನ ಕಡೇ ದಿನಗಳನ್ನು ಎದುರಿಸಲು ಾರಾಗಬೇಕಿತ್ತು. ಕಳೆದ ಹೋದ ಬೆಳಕಿನಲ್ಲೇ ತೇಲುವುದು ಭವಾದರೂ ಹೊರಬಂದು ಎದುರಿಗಿರುವ ಸ್ಥಿತಿಯನ್ನು ಗಿಸಿಕೊಳ್ಳಬೇಕು. ಈ ವಿಷಯದಲ್ಲಿ ಇಂದಿಗೂ ಾನಟರಿಗೆ ಮಾದರಿಯಾದವರು ದಿಲೀಪ್ ಕುಮಾರ್.

ಅಂದಹಾಗೆ ನಮ್ಮೂರಲ್ಲೂ ಒಬ್ಬ ರಾಜೇಶ್ ಖನ್ನನಿದ್ದ. ಬಾಂಬೆಯಿಂದ ಬಂದರೆ ಇಡೀ ಊರೇ ನೋಡಲು ಯುತ್ತಿತ್ತು. ಅದೇ ಡ್ರೆಸ್ಸು, ಅದೇ ಹೇರ್ ಸ್ಟೈಲು, ೀ ಮಾತು. ಎಲ್ಲವೂ ಹಾಗೇ ಇತ್ತು. ಫಿಯೆಟ್ ಕಾರ್ ನಿಯಲ್ಲಿದ್ದ ಆತ ನಮಗೆಲ್ಲಾ ಕೈ ತುಂಬ ಚಿಲ್ಲರೆ ಕೊಟ್ಟು ಹೋಗುತ್ತಿದ್ದ. ಅವನ ಹೆಸರೇ ಮರೆತು ೀಗ ರಾಜೇಶ್ ಖನ್ನ ಎನ್ನುತ್ತಿದ್ದೆವು. ಈತ ಅಂತ ನಿ ಫಿಯೆಟ್ ಕಾರ್ ಬಂದ್ ಆದಮೇಲೆ ಆಟೋ ಸುತ್ತಿದ್ದಾನೆ.

ರಾಜೇಶ್ ಖನ್ನನ ಸಾವಿನಿಂದ ನಮಗಿಂತಲೂ ಆತನಿಗೆ ಾತವಾಗಿರಬಹುದು. ಏಕೆಂದರೆ ಖನ್ನ ಆತನ ಆರಾಧ್ಯ . ಆ ಕಾಲದಲ್ಲಿ ಖನ್ನನಿಗೆ ಮೂಟೆಗಟ್ಟಲೇ ಪತ್ರ ವ ಪ್ರೇಮಿಗಳಿಗೂ ದುಃಖವಾಗಿದೆ.

● ಬಿ.ಚಂದ್ರೇಗೌಡ

ಮಂತ್ರಿಯಾಗಲಿಲ್ಲ ಆನ್ನೊರ ಸಮಸ್ಯೆ ಹ್ಯಂಗೆ ರಸ್ತಿರಿ ಸಾರ್?"

ವರಿಸ್ವರ ಕೂಡ ಚರ್ಚೆ ಮಾಡಿ ಬಗೆಹರಸ್ತಿನ್ರಿ."

ರಾತ್ರಿವೊತ್ತಲ್ಲಿ ಯಾವಾಗಂದ್ರೆ ಆವಾಗ ಕರಂಟು ವಲ್ಲ. ರಾತ್ರಿವೊತ್ತಾದ್ರು ಕರಂಟು ಕೊಡಿ ಸಾರ್."

ಶೋಭ ಕರಂದ್ಲಾಜೆಯವರ ಕೂಡ ಚರ್ಚೆ ಮಾಡ್ತಿನ್ರಿ."

'ಅನುದಾನರಹಿತ ಶಾಲೆಗಳು ಬಂದ್ ಮಾಡ್ತ ಸಮಸ್ಯೆನ ಮಾಡಿವೆ. ಅವ್ರುಕೇನು ಮಾಡ್ತಿರಿ ಸಾರ್?"

'ಕಾಗೇರಿ ಕೂಡ ಚರ್ಚೆ ಮಾಡ್ತೇನ್ರಿ."

'ಆ ಈಶ್ವರಪ್ಪ ಇಡೀ ರಾಜ್ಯ ತಿರುಗಿ ಜಿಲ್ಲೆಲಿ ಾರಿಗಳ ಮೀಟಿಂಗ್ ಕರದು ಚರ್ಚೆ ಮಾಡ್ತರಂತೆ. ುಮಂತ್ರಿ ನೀವ್ರೊ? ಅವ್ರುರೊ?"

'ಅವ್ರುರು ಉಪಮುಖ್ಯಮಂತ್ರಿ ಆದಾರ್ರಿ."

'ಆ ಅಶೋಕನಿಗಾಗ್ಲೆ ಮುಖ್ಯಮಂತ್ರಿ ಗತ್ತು ಬಂದದೆ. ರಾ ಅಲ್ಪಸಿಗೆ ಐಶ್ವರ್ಯ ಬಂದಂಗೆ ಭಾಳ ಕಾರದಲ್ಲಿ ಮಾತಾಡ್ತರೆ."

'ಅವ್ರುರ ಕೂಡ ಚರ್ಚೆ ಮಾಡಿ ನೀವು ಮುಖ್ಯಮಂತ್ರಿ ಆದೀರಿ ಅಂತ ಹೇಳ್ತಿನ್ರಿ."

'ನಿಮ್ಮ ಆಯ್ಕೆನಾ ಕನಿಷ್ಠ ಐವತ್ತು ಮಂದಿ ಶಾಸಕರು ೊಂದಿಲ್ಲ, ಅಧಿಕಾರ ಹೆಂಗೆ ನಡಸ್ತಿರೀ?"

'ಅವ್ರುರ ಕೂಡ ಚರ್ಚೆ ಮಾಡಿ ಸಹಕಾರ ಕೇಳ್ತಿನ್ರಿ."

'ಬೆಳಗಾಂಯ್ತು ಅಂದ್ರೆ ಎಡೂರಪ್ಪ ಹೇಳಿದ ಕೆಲಸ ಬೇಕಂತೆ, ನಿಜವೆ?"

'ಅಂಗೇನು ಇಲ್ರಿ. ಎಲ್ಲರ ಮಾತನೂ ಕೇಳಬೇಕಾಕ್ತತಿ."

'ಒಂದು ಪೋಳಿ ದ್ಯಾವೇಗೌಡ್ರು ಫೋನ್ ಮಾಡಿದ್ರೆ?"

'ಫೋನೇ ತಗಿಯೂದಿಲ್ರಿ!"

'ಭೂಪಾಲ್ರಿ!!!"

ಸಮಾನ ಶಿಕ್ಷಣದ ಸಾಗರಕ್ಕೆ ಖಾಸಗಿ ಶಿಕ್ಷಣವೆಂಬ ಕೊಳಚೆ ನೀರು


"ಸರ್ಕಾರ ಹೇಳುವಂತೆ ಬಡ ಮಕ್ಕಳನ್ನು ನಾವೇನಾದರೂ ನಮ್ಮ ಶಾಲೆಗಳಿಗೆ ಸೇರಿಸಿಕೊಂಡರೆ ಸಮುದ್ರಕ್ಕೆ ಕೊಳಚೆ ನೀರು ಸೇರಿಸಿದಂತಾಗುತ್ತದೆ" ಎಂದು ಬಹಿರಂಗ ಹೇಳಿಕೆ ನೀಡಿದ 'ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ' (ಕುಸ್ಮಾ)ದ ಅಧ್ಯಕ್ಷ ಜಿ.ಎಸ್.ಶರ್ಮಾ, ಭಾರತ ಬಿಟ್ಟು ಬೇರೆ ಯಾವುದಾದರೂ ದೇಶದಲ್ಲಿದ್ದಿದ್ದರೆ ಇಷ್ಟರಲ್ಲಿ ಜೈಲುಪಾಲಾಗಿರುತ್ತಿದ್ದ. ಏನಿಲ್ಲವೆಂದರೂ ಆತನ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆಯಾದರೂ ದಾಖಲಾಗಿರುತ್ತಿತ್ತು. ಆದರೆ, ಇದು ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಬಿಯ ಮುಂದೆ ಮಂಡಿಯೂರಿ ಕುಳಿತಿರುವ ಸರ್ಕಾರವಿರುವ ರಾಷ್ಟ್ರ. ಇಲ್ಲಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರಗಳಾಗಲಿ ಖಾಸಗೀಕರಣ ಎಂಬುದನ್ನು ವಿರೋಧಿಸುವುದನ್ನು ಊಹಿಸುವುದೂ ಸಾಧ್ಯವಿಲ್ಲ. ಆದ್ದರಿಂದಲೇ ಇಲ್ಲಿ 'ಕುಸ್ಮಾ'ದಂತಹ ಲಾಬಿಗಳು ಸುಪ್ರೀಂಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿ 'ಶಾಲಾ ಬಂದ್'ಗೆ ಕರೆ ಕೊಡುತ್ತವೆ, 'ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಮಾಡಲು ಸಾಧ್ಯವಿಲ್ಲ' ಎಂದು ಘೋಷಿಸುತ್ತವೆ ಹಾಗೂ ಈ ನಾಡಿನ ಶ್ರಮಜೀವಿಗಳನ್ನು ಬಹಿರಂಗವಾಗಿಯೇ ಅವಮಾನಿಸುತ್ತವೆ! ಈ ಹಿಂದೆಯೂ ಬೆಂಗಳೂರಿನ ಹಾಗೂ ದೇಶದ ಬೇರೆಬೇರೆ ಭಾಗಗಳ ಪ್ರತಿಷ್ಠಿತ ವಿದ್ಯಾಸಂಸ್ಥೆಗಳು ಆರ್‌ಟಿಇ ಕೆಳಗೆ 25% ಬಡ-ದಲಿತ ಮಕ್ಕಳನ್ನು ಸೇರಿಸಿಕೊಂಡರೆ ತಮ್ಮ ಶಾಲಾ ಪರಿಸರ 'ಕಲುಷಿತ'ಗೊಳ್ಳುತ್ತದೆ ಎಂಬರ್ಥದ ಹೇಳಿಕೆಗಳನ್ನು ನೀಡಿದ್ದನ್ನು ನಾವ್ಯಾರೂ ಮರೆತಿಲ್ಲ. ಆದರೆ ಕಾಯ್ದೆಯನ್ನು ಜಾರಿಮಾಡಿರುವ ಸರ್ಕಾರ ಈ ಯಾವುದನ್ನೂ ತಡೆಯುವ ಪ್ರಯತ್ನ ಮಾಡುವುದಿಲ್ಲ. ಇವೆಲ್ಲ ಬಹಳ ಸ್ಪಷ್ಟವಾಗಿ ಆ ಆಡಳಿತ ಮಂಡಳಿಗಳ ಜಾತಿವಾದಿ, ವರ್ಗ ಪ್ರತಿಷ್ಠೆಯ ಮನೋಭಾವವನ್ನು ತೋರಿಸುತ್ತದೆ.

ಇಂದು 'ಕುಸ್ಮಾ'ದ ಪದಾಧಿಕಾರಿಗಳು ತಮ್ಮ ಬಂದ್‌ಗೆ ಆರ್‌ಟಿಇಯಲ್ಲಿರುವ ಲೋಪಗಳು, ಅಲ್ಪಸಂಖ್ಯಾತ ಸಂಸ್ಥೆಗಳ ವ್ಯಾಖ್ಯಾನದಲ್ಲಿ ಗೊಂದಲ, ಅಧಿಕಾರಿಗಳ ದುರ್ವರ್ತನೆ ಇತ್ಯಾದಿ ಏನೇ ಕಾರಣ ನೀಡಿದರೂ, ಅದರ ಹಿಂದಿರುವುದು ಕೆಳಸ್ತರದ ಮಕ್ಕಳಿಗೆ ಸ್ಥಾನ ನೀಡಬೇಕೆಂಬ ಸಂಕಟ. ಅದೂ ಉಚಿತವಾಗಿಯಲ್ಲ; ಈ 25% ಸೀಟುಗಳಿಗೆ ಸರ್ಕಾರ ಪ್ರತೀ ಮಗುವಿಗೆ 11,800 ರೂ.ಗಳಂತೆ ಸಂಪೂರ್ಣ ಹಣವನ್ನು ಮರುಪಾವತಿ ಮಾಡುತ್ತದೆ. ಆದರೂ ಈ ದೊಡ್ಡ ಪ್ರತಿಷ್ಠಿತ ಲೂಟಿಕೋರ ಸಂಸ್ಥೆಗಳಿಗೆ, ತಮ್ಮ ಲಾಭದ ಪ್ರಮಾಣದಲ್ಲಿ ಎಲ್ಲೋ ಕೊಂಚ ಕಡಿಮೆಯಾಗುತ್ತದೆಂಬುದೇ ಈ ಮಟ್ಟದ 'ಸಂಘರ್ಷ'ಕ್ಕೆ ಪ್ರೇರೇಪಿಸುತ್ತದೆ! ಹಾಗಾದರೆ ಇವರು ನಡೆಸುತ್ತಿರುವುದೇನು? ಭವ್ಯ ಭಾರತದ ಭವಿಷ್ಯವನ್ನು ನಿರ್ಧರಿಸುವ ಶಿಕ್ಷಣವೆಂಬ ಅತ್ಯುನ್ನತವಾದ ಸೇವೆ ನೀಡುವ ಶಿಕ್ಷಣ ಸಂಸ್ಥೆಗಳನ್ನೋ ಅಥವಾ ಬಂಡವಾಳ ಹೂಡಿ ಲಾಭ ತೆಗೆಯುವ 'ಶಿಕ್ಷಣದ ಫ್ಯಾಕ್ಟರಿ'ಗಳನ್ನೊ?

ಭಾರತದ ಸಂವಿಧಾನ ಜಾರಿಯಾಗುವಾಗಲೇ ಅದರಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಸೇರಿಸಬೇಕೆಂಬುದು ಡಾ.ಅಂಬೇಡ್ಕರ್‌ರವರ ಬಯಕೆಯಾಗಿತ್ತು. ಆದರೆ, ದೊಡ್ಡ ಭೂಮಾಲೀಕರು ಹಾಗೂ ಮೇಲ್ಜಾತಿ ಮನಸ್ಥಿತಿಯ ವ್ಯಕ್ತಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಭಾರತದ ಸಂಸತ್ತಿನಲ್ಲಿ ಇದಕ್ಕಾಗಿ ಅಂಬೇಡ್ಕರ್ ಕಠೋರವಾಗಿ ವಾದಿಸಿದರೂ, ಅಂತಿಮವಾಗಿ ಅದರಲ್ಲಿ ಸೋಲಬೇಕಾಯಿತು. ಅದರಿಂದಾಗಿಯೆ, ಶಿಕ್ಷಣದ ಹಕ್ಕನ್ನು ರಾಜ್ಯ ನಿರ್ದೇಶಕ ತತ್ವಗಳ ಅತಿಮುಖ್ಯವಾದ ಅಂಶಗಳಲ್ಲೊಂದನ್ನಾಗಿ ಮಾಡಿದರು. ಆದ್ದರಿಂದ ಸಂವಿಧಾನದ ರಾ.ನಿ. ತತ್ವಗಳ ಕಲಂ 41 ಮತ್ತು 45, "14 ವರ್ಷ ವಯಸ್ಸಿನೊಳಗಿನ ಪ್ರತಿ ಮಗುವಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡುವುದು ಪ್ರಭುತ್ವದ ಆದ್ಯ ಕರ್ತವ್ಯಗಳಲ್ಲೊಂದು. ಈ ಗುರಿಯನ್ನು ಮುಂದಿನ ಹತ್ತು ವರ್ಷದೊಳಗೆ ತಲುಪಿರಬೇಕು" ಎಂದು ವಿಧಿಸುತ್ತದೆ. ಈ ಉಲ್ಲೇಖ ಹಾಗೂ ಸಮಯದ ಗಡುವೇ ಅಂಬೇಡ್ಕರ್ ಮೊದಲಾದ ದೂರದೃಷ್ಟಿಯುಳ್ಳ ರಾಷ್ಟ್ರ ನಾಯಕರು ಶಿಕ್ಷಣಕ್ಕೆ ನೀಡಿದ್ದ ಮಹತ್ವವನ್ನು ಸಾರುತ್ತದೆ. ಅಷ್ಟು ಮಾತ್ರವಲ್ಲದೆ ಅದನ್ನು ಪ್ರಭುತ್ವದ ಹೊಣೆ ಎಂದಿರುವುದು, ಶಿಕ್ಷಣ ಉಚಿತವಾಗಿರಬೇಕು ಹಾಗೂ ಎಲ್ಲರಿಗೂ ಸಮಾನವಾಗಿರಬೇಕು ಎಂಬುದರ ಬಗ್ಗೆ ಅವರಿಗಿದ್ದ ಕಳಕಳಿಯನ್ನು ತೋರಿಸುತ್ತದೆ. ಇಂತಹ ಚೌಕಟ್ಟಿನ ಕಾರಣದಿಂದಲೇ ಭಾರತದಲ್ಲಿ ಇಂದಿಗೂ ಶಿಕ್ಷಣ 'ಸೇವಾಕ್ಷೇತ್ರ'ವೇ ಆಗಿದೆ; 'ಉದ್ದಿಮೆ'ಯಲ್ಲ! 90ರ ದಶಕದಲ್ಲಿ ಆಳುವವರು ದೇಶವನ್ನು ಸಂಪೂರ್ಣವಾಗಿ ಮುಕ್ತಮಾರುಕಟ್ಟೆಯ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ತೆರೆದಿಟ್ಟಾಗ ಶಿಕ್ಷಣವನ್ನೂ ಕೂಡ ಖಾಸಗೀಕರಿಸುವ ಪ್ರಯತ್ನಗಳು ಭರದಿಂದ ಆರಂಭವಾದವು. ಆದ್ದರಿಂದಲೇ 1995ರ ಉನ್ನಿಕೃಷ್ಣನ್, 2002ರ ಟಿಎಂಎ ಪೈ ಪ್ರಕರಣಗಳ ತೀರ್ಪುಗಳಲ್ಲಿ ಸುಪ್ರೀಂಕೋರ್ಟ್ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಲಾಭಗಳಿಸಲು ಅಧಿಕೃತ ಒಪ್ಪಿಗೆ ನೀಡಿತು. ಆದರೂ ಈಗಲೂ ಶಿಕ್ಷಣವನ್ನು ಸಂಪೂರ್ಣವಾಗಿ 'ಉದ್ದಿಮೆ'ಯನ್ನಾಗಿಸಲು ಸಾಧ್ಯವಾಗಿಲ್ಲ.

ಆದರೆ, ದೇಶದ ಎಲ್ಲ ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಅನಧಿಕೃತವಾಗಿ ಶಿಕ್ಷಣವನ್ನು ವ್ಯಾಪಾರವಾಗಿಸಿವೆ. ಶೇ.25 ಸೀಟುಗಳನ್ನು ದುರ್ಬಲ ವರ್ಗದವರಿಗೆ ನೀಡುವುದೆಂದರೆ ತಮಗೇನೋ ಸಹಿಸಲಸಾಧ್ಯವಾದ ಅನ್ಯಾಯವಾದಂತೆ ವರ್ತಿಸುತ್ತಿರುವ ಈ ಶಾಲೆಗಳ ಮಾಲೀಕರಾರೂ ಸಮಾಜೋದ್ಧಾರಕ್ಕಾಗಿ ಸಂಸ್ಥೆಗಳನ್ನು ತೆರೆದವರಲ್ಲ; ಕನ್ನಡ ಮಾಧ್ಯಮಕ್ಕೆ ಅನುಮತಿ ಪಡೆದು ಇಂಗ್ಲಿಷ್ ಮಾಧ್ಯಮ-ಸಿಬಿಎಸ್‌ಸಿ ಶಾಲೆಗಳನ್ನು ನಡೆಸುತ್ತಿರುವ, ಚಾರಿಟಬಲ್ ಟ್ರಸ್ಟ್, ಎಜುಕೇಶನ್ ಸೊಸೈಟಿಗಳ ಹೆಸರಿನಲ್ಲಿ ಸರ್ಕಾರಕ್ಕೆ ಕೋಟಿಗಟ್ಟಲೆ ತೆರಿಗೆ ವಂಚಿಸುತ್ತಿರುವ, ತಮ್ಮ ಸಿಬ್ಬಂದಿ-ಶಿಕ್ಷಕರನ್ನು ಬಿಡಿಗಾಸಿಗೆ ದುಡಿಸಿ ಶೋಷಿಸುತ್ತಿರುವ, ಜಾತಿವಾದವನ್ನೂ ಧಾರ್ಮಿಕ ಮೂಲಭೂತವಾದವನ್ನೂ ಬೋಧಿಸುತ್ತಿರುವ ಈ ಸಂಸ್ಥೆಗಳಿಗೆ, ಪ್ರತಿಭಟನೆ ನಡೆಸಲು ಯಾವ ನೈತಿಕ ಅಧಿಕಾರವೂ ಇಲ್ಲ.

ಇಷ್ಟಕ್ಕೂ ಅವರ ವಾದ, ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು ಸರ್ಕಾರದ ಹೊಣೆಗಾರಿಕೆ; ಅದಕ್ಕೆ ತಾವು ಬಾಧ್ಯರಲ್ಲ ಎಂಬುದು. ಇದರ ಸತ್ಯಾಸತ್ಯತೆಯನ್ನು ಕೊಂಚ ಪರಿಶೀಲಿಸಬೇಕು. ಸಂವಿಧಾನವು ತನ್ನ ಪ್ರಜೆಗಳನ್ನು ಶಿಕ್ಷಿತರನ್ನಾಗಿಸುವ ಹೊಣೆಯನ್ನು ಪ್ರಭುತ್ವದ ಮೇಲೆ ಹೊರಿಸಿರುವುದು ಸತ್ಯ; ಆದರೆ ಇದು ಅರ್ಧಸತ್ಯ ಮಾತ್ರ. ಸಂವಿಧಾನವೇ ಹೇಳಿರುವಂತೆ, ಮೂಲಭೂತ ಹಕ್ಕುಗಳನ್ನು ಸರ್ವರಿಗೂ ದೊರಕಿಸುವುದು ಭಾರತದ ಪ್ರತಿಯೊಬ್ಬ ನಾಗರಿಕರ ಬಾಧ್ಯತೆಯೂ ಹೌದು! ಇದನ್ನು 'ಪರ್ಯಾಯ ಹೊಣೆಗಾರಿಕೆಯ ತತ್ವ' ಎನ್ನಲಾಗುತ್ತದೆ. ಹಾಗೆಯೇ ಪ್ರಭುತ್ವ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು, ದೇಶದ ಯಾವುದೇ ಪ್ರಜೆಯನ್ನು ಅಥವಾ ಸಂಸ್ಥೆಯನ್ನು ಉಪಕರಣವನ್ನಾಗಿ ಬಳಸಬಹುದು. ಇದನ್ನು 'ಉಪಕರಣ ತತ್ವ' ಎನ್ನಲಾಗುತ್ತದೆ. ಈ ಅರ್ಥದಲ್ಲಿ, ಈ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪರವಾನಗಿ ದೊರೆತಿರುವುದೇ ಮೇಲೆ



ಹೇಳಿದ ಉಪಕರಣ ತತ್ವದ ಆಧಾರದಲ್ಲಿ; ಉತ್ತಮ ಶಿಕ್ಷಣ ನೀಡುವುದರಲ್ಲಿ ಸರ್ಕಾರಕ್ಕೆ ನೆರವಾಗುತ್ತವೆ ಎಂಬ ಆಶಯದಿಂದ. ಆದರೆ ಇವರು ಕನಿಷ್ಠ ಸಾಮಾಜಿಕ ಜವಾಬ್ದಾರಿಯನ್ನೂ ಹೊರಲು ಸಿದ್ಧರಿಲ್ಲ. ಮಾತ್ರವಲ್ಲ, ಅಮಾಯಕರಂತೆ 'ನಾವು ಅನುದಾನವನ್ನೇನೂ ಪಡೆಯುತ್ತಿಲ್ಲವಲ್ಲ, ನಾವ್ಯಾಕೆ 25% ಸೀಟುಗಳನ್ನು ಮೀಸಲಿರಿಸಬೇಕು' ಎಂಬಂತಹ ಅತ್ಯಂತ ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅನುದಾನ ಪಡೆಯದಿದ್ದರೂ, ಸರ್ಕಾರದಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಲವು ಸವಲತ್ತುಗಳನ್ನು ಬಾಚಿಕೊಳ್ಳುತ್ತಿರುವ ಈ ಲೂಟಿಕೋರ ಸಂಸ್ಥೆಗಳು, ಶಿಕ್ಷಣ ಹಕ್ಕು ಕಾಯ್ದೆಯು ಕಡ್ಡಾಯಗೊಳಿಸಿರುವ ಈ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತೆಯೇ ಇಲ್ಲವೆಂಬುದನ್ನು ಅರ್ಥಮಾಡಿಕೊಳ್ಳಬೇಕು.

ಇದರರ್ಥ 'ಶಿಕ್ಷಣ ಹಕ್ಕು ಕಾಯ್ದೆ' ಅತ್ಯುತ್ತಮವಾದುದೆಂದೇನೂ ಅಲ್ಲ! ಈ ಖಾಸಗೀಕರಣ ಮತ್ತು ವ್ಯಾಪಾರೀಕರಣಗಳೆಡೆಗೆ ಮುಖ ಮಾಡಿ ನಿಂತಿರುವ ಸರ್ಕಾರಗಳು ತರುವ ಯಾವುದೇ ಹೊಸ ನೀತಿಯನ್ನೂ ಅನುಮಾನದಿಂದ ನೋಡುವುದಕ್ಕೆ ಸಾಕಷ್ಟು ಕಾರಣಗಳಿವೆ. ಹಾಗೆಯೇ, ಖಾಸಗಿ ಸಂಸ್ಥೆಗಳಿಗೆ ಅವರ ಸಾಮಾಜಿಕ ಜವಾಬ್ದಾರಿಯೆಂದು ಶೇ. 25 ಸೀಟುಗಳನ್ನು ಕಡ್ಡಾಯಗೊಳಿಸುವ ಬದಲು, ಸಾರ್ವಜನಿಕ ಹಣದಿಂದ ಪ್ರತಿವರ್ಷ ದೊಡ್ಡ ಮೊತ್ತವನ್ನು ಅವರ ಬಾಯಿಗೆ ಸುರಿಯುತ್ತಿರುವುದು ಅಸಮರ್ಥನೀಯ. ಈಗಾಗಲೇ ಆರೋಗ್ಯ, ನಾಗರಿಕ ಸೇವೆಗಳು ಮೊದಲಾದ ಎಲ್ಲಾ ಕ್ಷೇತ್ರಗಳಲ್ಲೂ ಬಹಳ ಚಾಣಾಕ್ಷತನದಿಂದ ಖಾಸಗೀಕರಣವನ್ನು ತೂರಿಸುವುದಕ್ಕಾಗಿ ಪರಿಚಯಿಸಲ್ಪಟ್ಟಿರುವ 'ಸಾರ್ವಜನಿಕ ಖಾಸಗಿ ಸಹಭಾಗಿತ್ವ' ಎಂಬ ನೀತಿಯ ಪರಿಣಾಮವೇ ಇದು ಎಂಬ ಅಭಿಪ್ರಾಯವೂ ವ್ಯಾಪಕವಾಗಿದೆ. ಮಾತ್ರವಲ್ಲದೆ, ಶಿಕ್ಷಣದ ಹಕ್ಕನ್ನು ಖಾತ್ರಿಗೊಳಿಸಿದರೂ ಖಾಸಗಿ ಶಿಕ್ಷಣಪತಿಗಳಿಗೆ ಅಧಿಕೃತ ಮಾನ್ಯತೆ ನೀಡಿದೆ ಹಾಗೂ ಬೇಕಾದಷ್ಟು ಶುಲ್ಕ ವಸೂಲಿಗೆ ಅವಕಾಶ ಮಾಡಿಕೊಟ್ಟು ಶಿಕ್ಷಣದ ವ್ಯಾಪಾರೀಕರಣವನ್ನು ಮುಂದುವರಿಸುತ್ತಿದೆಯೆಂಬ ಆರೋಪಗಳೂ ವ್ಯಾಪಕವಾಗಿವೆ. ಅದೇನೇ ಇದ್ದರೂ ಅದಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರತಿಕ್ರಿಯೆ ಅವು ಎಷ್ಟು ಬಲಿಷ್ಠವಾಗಿವೆ ಮತ್ತು ಏನನ್ನೇ ಆದರೂ ಮಾಡಿ ದಕ್ಕಿಸಿಕೊಳ್ಳುವಷ್ಟು ಆಳುವವರ ಮೇಲೆ ಅಧಿಕಾರ ಸ್ಥಾಪಿಸಿವೆ ಎಂಬುದನ್ನು ಸಾಬೀತುಪಡಿಸಿದೆ. ಆದ್ದರಿಂದಲೇ, ಒಟ್ಟಾರೆ ನಮ್ಮ ಶಿಕ್ಷಣ ವ್ಯವಸ್ಥೆಯ ಕುರಿತೇ ಸಕಾರಣವಾದ ವಿಮರ್ಶೆಗಳು ಎದುರಾಗಿವೆ.

ಶಿಕ್ಷಣವೆಂಬುದು ನಿಜಕ್ಕೂ ಏನು ಎಂಬುದರ ಕುರಿತ ಚರ್ಚೆ ಸ್ವತಂತ್ರಪೂರ್ವದಿಂದಲೂ ನಡೆಯುತ್ತಿದೆ. 1882ರಲ್ಲಿ ಹಂಟರ್ ಕಮೀಶನ್ನಿನ ಮುಂದೆ ಜ್ಯೋತಿಬಾ ಫುಲೆಯಂತಹ ದಾರ್ಶನಿಕ ಸಮಾಜ ಸುಧಾರಕರು ದೇಸೀ ಮತ್ತು ಸಮಾನ ಶಿಕ್ಷಣದ ಅಗತ್ಯವನ್ನು ಕುರಿತು ಬಲವಾದ ವಾದ ಮುಂದಿಸುವಾಗಲೆ, ಶಿಕ್ಷಣ ಕೇವಲ ಹೊಟ್ಟೆಪಾಡಿಗಾಗಿಯಲ್ಲ ಎಂಬ ತತ್ವ ಸ್ಪಷ್ಟ ರೂಪ ಪಡೆದಿತ್ತು. ಶಿಕ್ಷಣದ ಗುರಿಯೇನು ಎಂಬ ಕುರಿತು ಮಾತನಾಡುವಾಗ ಐನ್‌ಸ್ಟೀನ್ ಒಂದೆಡೆ "ಶಿಕ್ಷಣದ ಗುರಿ, ಸೃಜನಶೀಲ, ಕ್ರಿಯಾಶೀಲ ಪ್ರವೃತ್ತಿಯ ಗುಣವುಳ್ಳ ಮುಂದಿನ ಪೀಳಿಗೆಯನ್ನು ನಿರ್ಮಿಸುವುದು; ಸಿದ್ಧವಸ್ತುಗಳನ್ನು ತಯಾರಿಸುವುದಲ್ಲ" ಎಂದಿದ್ದಾರೆ. ಆದರೆ, ಶಿಕ್ಷಣ ಕ್ಷೇತ್ರವನ್ನು ಖಾಸಗಿ ಉದ್ದಿಮೆಪತಿಗಳಿಗೆ ತೆರೆದಿಡುವುದರ ಮೂಲಕ ಸರ್ಕಾರ ಈ ಧ್ಯೇಯವನ್ನು ಸಂಪೂರ್ಣವಾಗಿ ಮೂಲೆಗುಂಪು ಮಾಡಿದೆ. ಶಾಲೆಗಳೆಂಬ ಈ ಎಲ್ಲಾ ಖಾಸಗಿ ಫ್ಯಾಕ್ಟರಿಗಳಲ್ಲಿ ಇಂದು ತಯಾರಾಗುತ್ತಿರುವುದು ಮೆಕಾಲೆ ಬಯಸಿದಂತಹ 'ಧಣಿಗಳ ಗುಲಾಮರು'. (ಸರ್ಕಾರಿ ಪಠ್ಯಕ್ರಮ ಇದಕ್ಕಿಂತ ಬಹಳ ಭಿನ್ನವಾಗಿ ಅಥವಾ ಅದ್ಭುತವಾಗೇನೂ ಇಲ್ಲದಿದ್ದರೂ, ಅದೊಂದು ಸಾಮೂಹಿಕ ಯತ್ನದ ಭಾಗವಾಗಿ ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನು ಅನಿವಾರ್ಯವಾಗಿ ಹಾದು ಬರುವುದರಿಂದ ಖಾಸಗಿಗಿಂತ ಉತ್ತಮ). ಹೀಗಿರುವಾಗ ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲದೋಷವೇನು ಎಂಬುದನ್ನು ಕಂಡುಕೊಳ್ಳಬೇಕು. ಅದು ತಿಳಿಯದಿರುವುದೇನೂ ಅಲ್ಲ, ಅದರ ತಾಯಿಬೇರಿರುವುದು ಈ ದೇಶದ ಅಸಮಾನ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ! ಆದ್ದರಿಂದ ನಮ್ಮ ಸಮಾಜ ಹೇಗೆ, ಎಷ್ಟು ಹಂತಗಳಾಗಿ ವಿಭಜಿಸಲ್ಪಟ್ಟಿದೆಯೋ, ಕಲಿಕಾ ಪದ್ಧತಿಯೂ ಹಾಗೆಯೇ ಶ್ರೇಣೀಕರಿಸಲ್ಪಟ್ಟಿದೆ. ಆದ್ದರಿಂದಲೇ, ಸಾಮಾಜಿಕ ಸಮಾನತೆ ಹಾಗೂ ಶಿಕ್ಷಣ ವ್ಯವಸ್ಥೆಯಲ್ಲಿ ಸಮಾನತೆಗಳೆರಡೂ ಒಂದರೊಳಗೊಂದು ಹೆಣೆಯಲ್ಪಟ್ಟಿವೆಯೆಂದು ಹತ್ತಾರು ದಶಕಗಳಿಂದಲೂ, ಚಿಂತಕರು, ಹೋರಾಟಗಾರರು ಪ್ರತಿಪಾದಿಸುತ್ತಲೆ ಬಂದಿದ್ದಾರೆ.

ಅಮೆರಿಕ, ಜಪಾನ್, ಯುರೋಪಿಯನ್ ರಾಷ್ಟ್ರಗಳು ಸೇರಿದಂತೆ ಎಲ್ಲಾ ಮುಂದುವರೆದ ದೇಶಗಳೂ ತಮ್ಮಲ್ಲಿ ನೆರೆಹೊರೆ ಶಾಲೆಗಳ ತತ್ವವನ್ನು ಆಧರಿಸಿರುವ ಸಮಾನ ಶಾಲಾವ್ಯವಸ್ಥೆಯನ್ನು ಮಾತ್ರವೇ ಹೊಂದಿವೆ. ಕ್ಯೂಬಾ, ಫಿನ್ಲ್ಯಾಂಡ್‌ನಂತಹ ಪುಟ್ಟ, ಅಷ್ಟೇನೂ ಸುಭಿಕ್ಷವಲ್ಲದ ದೇಶಗಳೂ ಕೂಡಾ ಈ ವ್ಯವಸ್ಥೆಯನ್ನೇ ಅಳವಡಿಸಿಕೊಂಡಿವೆ ಹಾಗೂ ಅದೇ ತಮ್ಮ ಅಭಿವೃದ್ಧಿಗೆ ಕಾರಣವೆಂದೂ ನಂಬಿವೆ. ಭಾರತದಲ್ಲೂ ಶಿಕ್ಷಣ ವ್ಯವಸ್ಥೆ ಮತ್ತು ಸಾಮಾಜಿಕ ಸುಧಾರಣೆಗಾಗಿ ಅವಿರತ ದುಡಿಯುತ್ತಿರುವ ಅನೇಕರು ಸಾರ್ವಜನಿಕ ವೆಚ್ಚದಲ್ಲಿ, ಸಂಪೂರ್ಣ ಸರ್ಕಾರದ ಜವಾಬ್ದಾರಿಯಲ್ಲಿ ನಿರ್ವಹಿಸಲ್ಪಡುವ ಸಮಾನ ಶಾಲಾ ವ್ಯವಸ್ಥೆಗಾಗಿ ಹೋರಾಡುತ್ತಲೇ ಇದ್ದಾರೆ. ಅದೇ ಶಿಕ್ಷಣ ಪದ್ಧತಿಗೆ ಬಡಿದಿರುವ ಕಾಯಿಲೆಗಳಿಗೆ ಸಮಗ್ರವಾದ ಏಕೈಕ ಪರಿಹಾರ ಎಂಬುದು ಸ್ಪಷ್ಟ.

ಆದ್ದರಿಂದ 'ಕುಸ್ಮಾ' ಘೋಷಿಸಿದ್ದು ಏಳು ದಿನಗಳ ಶಾಲಾಬಂದ್ ಆದರೂ ಅದರ ಅಡಿಯಲ್ಲಿರುವ ಎಲ್ಲಾ ಶಾಲೆಗಳನ್ನೂ ಶಾಶ್ವತವಾಗಿ ಬಂದ್ ಮಾಡಿ ಸರ್ಕಾರದ ಅಧೀನಕ್ಕೊಳಪಡಿಸುವಂತೆ ನಾವು ಆಗ್ರಹಿಸಬೇಕು. ಅಷ್ಟೇ ಅಲ್ಲದೆ ಎಲ್ಲಾ ಖಾಸಗಿ ಶಾಲೆಗಳನ್ನೂ ಸರ್ಕಾರವೇ ರಾಷ್ಟ್ರೀಕರಿಸಿ, ಸಮಾನ ಭಾಷಾ ನೀತಿಯನ್ನು ಒಳಗೊಂಡ ಸಮಾನ-ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆ ಜಾರಿಗಾಗಿ ಒತ್ತಾಯಿಸಬೇಕಾಗಿದೆ. ಅದು ದೂರದ ಕನಸು. ಆದರೆ ಆ ಕನಸನ್ನು ನನಸಾಗಿಸುವ ಹೋರಾಟವೂ ಕೂಡಾ ಬಹಳ ಹಳೆಯದು. ಪ್ರಸಿದ್ಧ ಆಶಾವಾದಿ ಕವಿವಾಣಿಯಂತೆ "ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಕನಸಿಲ್ಲದ ದಾರಿಯಲ್ಲಿ ನಡೆಯಬಹುದೇ!"


ವಿಶೇಷ ಸೂಚನೆ ಪ್ರಜ್ಞಾವಂತ ಪೋಷಕರ ಗಮನಕ್ಕೆ: 'ಕುಸ್ಮಾ'ದ ಅಧ್ಯಕ್ಷನ ಪ್ರತಿಗಾಮಿ ಹೇಳಿಕೆ ಇಂದು ನಮ್ಮ ಗಮನಕ್ಕೆ ಬಂದಿದೆ ಮತ್ತು ನಾಡಿನ ಪ್ರಜ್ಞಾವಂತರ ಸಾಲಿನಲ್ಲಿರುವ 'ಲಂಕೇಶ್' ಓದುಗರು ಇಂತಹ ಧೋರಣೆಯನ್ನು ವಿರೋಧಿಸುತ್ತಾರೆಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಪ್ರತಿನಿತ್ಯ ಇಂತಹ ಜಾತಿವಾದಿ ಮೇಲ್ವರ್ಗದ ದುರಹಂಕಾರದ ಧೋರಣೆಗಳ ವಿಷ, ಖಾಸಗಿ ಶಾಲೆಗಳಲ್ಲಿ ಓದುತ್ತಿರುವ ನಿಮ್ಮಗಳ ಮಕ್ಕಳ ರಕ್ತಕ್ಕೆ ಊಡಿಸಲ್ಪಡುತ್ತಿದೆಯೆಂಬುದು ನಿಮ್ಮ ಗಮನಕ್ಕೆ ಬಂದಿದೆಯೇ? ಇಂದು ಸರ್ಕಾರವೇ ಸರಿಯಾದ ಸವಲತ್ತುಗಳನ್ನು ನೀಡದೆ, ಶಿಕ್ಷಕರನ್ನು ನೇಮಿಸದೆ ಸರ್ಕಾರಿ ಶಾಲೆಗಳ ಕತ್ತು ಹಿಸುಕಿ ಕೊಲ್ಲುತ್ತಿದೆ. ಆದ್ದರಿಂದ ಅಲ್ಲಿ ಮಕ್ಕಳನ್ನು ಓದಿಸುವುದರ ಕುರಿತು ಮಕ್ಕಳ ಪಾಲಕರಾಗಿ ನಮ್ಮೆಲ್ಲರಲ್ಲಿ ಆತಂಕ ಮೂಡುವುದು ಸಹಜ. ಆದರೆ ಅದಕ್ಕೆ ಪರಿಹಾರ ಖಾಸಗಿ ರಂಗವಲ್ಲ ಎಂಬುದು ಈಗಾಗಲೇ ಪದೇಪದೇ ಸಾಬೀತಾಗಿರುವ ಸತ್ಯ. ಅದಕ್ಕೆ ಇದೊಂದು ಇತ್ತೀಚಿನ ಸೇರ್ಪಡೆಯಷ್ಟೇ. ಖಾಸಗಿ ರಂಗಕ್ಕೆ ಕಡಿವಾಣ ಹಾಕಿ, ಶಿಕ್ಷಣವನ್ನು ಸಂಪೂರ್ಣವಾಗಿ ರಾಷ್ಟ್ರೀಕರಿಸುವುದು, ನೆರೆಹೊರೆ ಶಾಲೆಗಳ ತತ್ವವನ್ನು ಆಧರಿಸಿ ಸಮಾನ ಭಾಷಾನೀತಿಯನ್ನೂ ಒಳಗೊಂಡ ಸಮಾನ ಶಾಲಾ ವ್ಯವಸ್ಥೆಯನ್ನು ಜಾರಿಮಾಡುವುದು ಮಾತ್ರವೇ ನಿಜಕ್ಕೂ ಈ ಸಮಸ್ಯೆಗಳನ್ನು ಬಗೆಹರಿಸಬಲ್ಲದು. ಅದೊಂದು ದೀರ್ಘ ಹೋರಾಟವಾದರೂ, ನಾಡಿನ ನಾಳೆಗಳ ದೃಷ್ಟಿಯಿಂದ, ನಮ್ಮೆಲ್ಲರ ಮುದ್ದು ಮಕ್ಕಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಅನಿವಾರ್ಯವಾದ ಹೋರಾಟ. ಆ ಹೋರಾಟದಲ್ಲಿ ನಿಮ್ಮ ದನಿಯೂ ಸೇರಲಿ!

- ಮಲ್ಲಿಗೆ (ಕರ್ನಾಟಕ ಜನಶಕ್ತಿ)

ಪಶ್ಚಿಮಘಟ್ಟಗಳು ಹಿಂದಿನಿಂದಲೂ ಸಂರಕ್ಷಿಸಲ್ಪಟ್ಟಿಲ್ಲವೇ?

ವಿಶ್ವ ಸಂಸ್ಥೆಯು ಪಶ್ಚಿಮ ಘಟ್ಟವನ್ನು ಪಾರಂಪರಿಕ ತಾಣ ಎಂದು ಘೋಷಿಸಿದೆ. ಇದನ್ನು ಢೋಂಗಿ ಪರಿಸರವಾದಿಗಳು ಮತ್ತು ವಿದೇಶಗಳಿಂದ ಹಣ ಪಡೆಯುವ ಎನ್‌ಜಿಒಗಳು ಸ್ವಾಗತಿಸಿವೆ. ಆದರೆ ಇದನ್ನು ಪಾರಂಪರಿಕ ಸ್ಥಾನ ಎಂದು ಪರಿಗಣಿಸಿದರೆ ಅಲ್ಲಿರುವ ಜನತೆಗೆ ಆಗುವ ಕಷ್ಟಗಳೇನು, ಪರಿಸರ ರಕ್ಷಣೆಗೆ ಆಗುವ ನಷ್ಟವೇನು ಎಂಬುದನ್ನು ಕುರಿತು ಪತ್ರಿಕೆ ಮಿತ್ರರಾದ ಮನು ಶೆಣೈ ಮತ್ತು ಕಲ್ಕುಳಿ ವಿಠ್ಠಲ ಹೆಗಡೆ ಬರೆದಿರುವ ಎರಡು ವಿಶೇಷ ಲೇಖನಗಳು ಇಲ್ಲಿವೆ.

ಬಿ.ಎಸ್. ಮನುಶೆಣೈ



ಪಶ್ಚಿಮಘಟ್ಟ ಪ್ರದೇಶವನ್ನು ವಿಶ್ವ ಪಾರಂಪರಿಕ ತಾಣವನ್ನಾಗಿ ಯುನೆಸ್ಕೋ ಸಂಸ್ಥೆ ಗುರುತಿಸಿರುವುದಕ್ಕೆ ಪರ ಹಾಗೂ ವಿರೋಧದ ಕೂಗುಗಳು ಕೇಳಿಬರುತ್ತಿವೆ. ಇದರಿಂದಾಗಿ ಇಲ್ಲಿಯವರೆಗೆ ಸಂರಕ್ಷಣೆಯಾಗದೇ ಇದ್ದ ಪಶ್ಚಿಮಘಟ್ಟ ಇನ್ನು ಮುಂದೆ ಸಂರಕ್ಷಣೆಯಾಗಿ ಹಸಿರಿನಿಂದ ಕಂಗೊಳಿಸುತ್ತದೆ ಮತ್ತು ಇಲ್ಲಿ ಮಾನವ ಹಸ್ತಕ್ಷೇಪವಿಲ್ಲದೆ ಪ್ರಾಣಿ, ಪಕ್ಷಿಗಳು ಸ್ವಚ್ಛಂದವಾಗಿ ವಿಹರಿಸುತ್ತವೆ ಎನ್ನುವ ರೀತಿಯಲ್ಲಿ ಪರಿಸರವಾದಿಗಳು ಎನ್ನುವವರು ಚಿತ್ರಣವನ್ನು ಸಾರ್ವಜನಿಕರಿಗೆ ನೀಡುತ್ತಿದ್ದಾರೆ. ಅವರ ವಿತ್ತಂಡವಾದದ ಮೇಲೆ ಬೆಳಕು ಚೆಲ್ಲಬೇಕಾದ ಕಾರ್ಯವಾಗಬೇಕಾಗಿದೆ.

ಇದನ್ನು ವಿರೋಧಿಸುವವರು ಏತಕ್ಕಾಗಿ ವಿರೋಧಿಸುತ್ತಿದ್ದಾರೆ? ಅವರ ಆತಂಕಗಳು ಏನು? ಎನ್ನುವುದರ ಬಗ್ಗೆ ಎಲ್ಲಿಯೂ ಚಿತ್ರಣಗಳು ಸಿಗುತ್ತಿಲ್ಲ, ಚಿತ್ರಣಗಳು ಸಿಗದ ರೀತಿಯಲ್ಲಿ ಕಾರ್ಯಾಚರಣೆಗಳು ನಡೆಯುತ್ತಿವೆ. ಮಾಧ್ಯಮಗಳನ್ನು ಅದರಲ್ಲೂ ವಿಶೇಷವಾಗಿ ದೃಶ್ಯ ಮಾಧ್ಯಮವನ್ನು ಪರಿಸರವಾದಿಗಳು ನಿಯಂತ್ರಿಸುತ್ತಿದ್ದಾರೆ. ಇವರ ಕಾರ್ಯಾಚರಣೆಯನ್ನು, ಕುತಂತ್ರವನ್ನು ಬರೆದರೆ ಅದು ಪ್ರಕಟವಾಗದಂತೆ ನೋಡಿಕೊಳ್ಳುವಲ್ಲಿ ಅವರುಗಳು ಇಲ್ಲಿಯವರೆಗೆ ಯಶಸ್ವಿಯಾಗಿದ್ದಾರೆ. ರಾಜ್ಯ ಸರಕಾರ ಇದನ್ನು ವಿರೋಧಿಸುತ್ತಿರುವುದೇ ಒಂದು ಅಪರಾಧ ಎನ್ನುವ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ಇದನ್ನು ವಿರೋಧಿಸಲು ಸಾಕಷ್ಟು ಕಾರಣಗಳು ಇವೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ಕರ್ನಾಟಕ ರಾಜ್ಯದ ಕೊಡಗುಜಿಲ್ಲೆಯಲ್ಲಿ ಇದಕ್ಕೆ ವ್ಯಾಪಕವಾದ ವಿರೋಧಗಳು ಕಂಡು ಬಂದಿದೆ. ಕಾರಣ ಪರಿಸರ ವಾದಿಗಳು ಎನಿಸಿಕೊಂಡವರು ತಮ್ಮ ಈ ಪ್ರಯೋಗಕ್ಕೆ ಪ್ರಯೋಗಾಲಯವಾಗಿ ಕೊಡಗನ್ನು ಬಳಸಿಕೊಂಡಿರುವುದಾಗಿದೆ.

ಈ ಹಿಂದೆಯೂ ಪರಿಸರವಾದಿಯ ಸೋಗು ಹಾಕಿಕೊಂಡವರು ಸಾಕಷ್ಟು ಪ್ರಯೋಗಗಳನ್ನು ಕೊಡಗಿನಲ್ಲಿ ಮಾಡಿದ್ದರು. ಇದರಲ್ಲಿ ಪ್ರಮುಖವಾಗಿ ಇಲ್ಲಿ ಉಲ್ಲೇಖಿಸಬೇಕಾಗಿರುವುದು ಉಲ್ಲಾಸ ಕಾರಂತರು ನಾಗರಹೊಳೆಯಲ್ಲಿ ಹುಲಿಗಳ ಬಗ್ಗೆ ಸಂಶೋಧನೆ ಎಂದು ಹೇಳಿಕೊಂಡು, ಹುಲಿಗಳಿಗೆ ರೇಡಿಯೋ ಕಾಲರ್ ಅಳವಡಿಸುವ ಪ್ರಯೋಗಗಳನ್ನು ಮಾಡಿ ಹತ್ತಾರು ಹುಲಿಗಳನ್ನು ಬಲಿ ತೆಗೆದುಕೊಂಡಿದ್ದರು. ಅವರಿಗೆ ಪದ್ಮಭೂಷಣದಂತಹ ಪ್ರಶಸ್ತಿಯು ಲಭ್ಯವಾಯಿತು ಎಂಬುದು ವಿಪರ್ಯಾಸ. ಆ ನಂತರ ಈ ಬಗ್ಗೆ ಅರಣ್ಯ ಇಲಾಖೆ ಎಚ್ಚೆತ್ತುಕೊಂಡು ಅವರಿಗೆ ಸಂಶೋಧನೆ ನಡೆಸಲು ನೀಡಿದ ಅನುಮತಿಯನ್ನು ಹಿಂಪಡೆಯಲು ಶಿಫಾರಸ್ಸು ಮಾಡಿದ್ದರು. ಅವರ ಪ್ರಭಾವದ ಮುಂದೆ ಅರಣ್ಯ ಇಲಾಖೆ ಮಂಕಾಗಿತ್ತು, ತಮಗೆ ಕಡಿವಾಣ ಹಾಕುವವರೇ ಇಲ್ಲ ಎನ್ನುವಂತಹ ಪರಿಸ್ಥಿತಿ ಬಂದಾಗ ಪರಿಸರದ ಸಂರಕ್ಷಣೆ ತಮ್ಮಿಂದಲೇ ಸಾಧ್ಯ ಎನ್ನುವ ರೀತಿಯಲ್ಲಿ ಇವರುಗಳು ವರ್ತಿಸಲು ತೊಡಗಿದರು. ಹೀಗಾಗಿ ಕೊಡಗು ಜಿಲ್ಲೆಯಲ್ಲಿ ವ್ಯಾಪಕವಾಗಿ ಇವರ ವಿರುದ್ಧ ಮತ್ತು ಇಂತಹ ಯೋಜನೆಗಳ ವಿರುದ್ಧ ವಿರೋಧ ಕಂಡುಬಂದಿದೆ.

'ವಿಶ್ವ ಪಾರಂಪರಿಕ ತಾಣ ಎನ್ನುವುದು ಒಂದು ಪಟ್ಟವಷ್ಟೇ. ಇದರಿಂದ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ, ಸಾರ್ವಜನಿಕರಿಗೆ ಅನವಶ್ಯಕವಾಗಿ ಗೊಂದಲವನ್ನು ಉಂಟುಮಾಡುತ್ತಿದ್ದಾರೆ' ಎನ್ನುವುದು ಪರಿಸರವಾದಿಗಳ ವಾದ. ಬರೀ ವಿಶ್ವ ಪಾರಂಪರಿಕ ತಾಣದ ಪಟ್ಟ ದೊರೆಯಬೇಕಾದರೆ ಮತ್ತು ಇದರಲ್ಲಿ ಯಾವುದೇ ಹೆಚ್ಚುಗಾರಿಕೆ ಇಲ್ಲದಿದ್ದರೆ ಪರಿಸರವಾದಿಗಳು ಇಷ್ಟೊಂದು ಹೋರಾಟ ಮತ್ತು ಪರವಾಗಿ ಲೇಖನಗಳ ಸರಮಾಲೆಯನ್ನು ಬರೆಯುವ ಅಗತ್ಯತೆ ಇತ್ತೇ? ವಿಶ್ವ ಪಾರಂಪರಿಕ ತಾಣ ಎನ್ನುವುದು ಒಂದು ಹೂರಣವಷ್ಟೇ. ಅದರ ಒಳಗೆ ಬೇಕಾದಷ್ಟು ತಿರುಳು ಅಡಗಿದೆ ಎಂಬುದನ್ನು ಇದನ್ನು ಸ್ಥೂಲವಾಗಿ ಅಧ್ಯಯನ ಮಾಡಿದವರಿಗೆ ಮಾತ್ರ ತಿಳಿಯಲು ಸಾಧ್ಯ ಮತ್ತು ಈ ಭಾಗದಲ್ಲಿ ವಾಸಿಸುತ್ತಿರುವವರು ಪಡುವ ಬವಣೆಯಿಂದಲೂ ಇದನ್ನು ತಿಳಿಯಲು ಸಾಧ್ಯ.

ಕೊಡಗು ಜಿಲ್ಲೆಯಲ್ಲಿ ಇದನ್ನು ವಿರೋಧಿಸಲು ಪ್ರಬಲವಾದ ಕಾರಣಗಳು ಇವೆ. ಇಲ್ಲಿಯವರೆಗೆ ಅರಣ್ಯ ಇಲಾಖೆಯವರು ನಡೆದುಕೊಂಡ ರೀತಿ ಮತ್ತು ಪರಿಸರವಾದಿಗಳು ಎನಿಸಿಕೊಂಡವರು ವರ್ತಿಸಿದ ವರ್ತನೆಗಳು ಹಾಗೂ ಜಿಲ್ಲೆಯ ಭೂಪ್ರದೇಶದ ಮೇಲೆ ಅರಣ್ಯ ಇಲಾಖೆ ನಡೆಸಿಕೊಂಡು ಬಂದ ಸವಾರಿ ಇದಕ್ಕೆ ಕಾರಣವಾಗಿದೆ.

ಸರ್ವೋಚ್ಚನ್ಯಾಯಾಲಯದಲ್ಲಿ 1996ರಿಂದಲೂ ವಿಚಾರಣೆಯಲ್ಲಿ ಇರುವಂತಹ ಗೋದಾವರ್ಮನ್ ತಿರುಮಲ್‌ಪಾದ್ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ರಿಟ್ ಅರ್ಜಿಗೆ ಸಂಬಂಧಪಟ್ಟಂತೆ 1996ರಲ್ಲಿ ಸರ್ವೋಚ್ಚನ್ಯಾಯಾಲಯ ನೀಡಿದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ತಜ್ಞರ ಸಮಿತಿ ಸಿದ್ಧಪಡಿಸಿದ ವರದಿಯೇ ಜಿಲ್ಲೆಯ ಎಲ್ಲಾ ಆತಂಕಕ್ಕೂ ಮೂಲಕಾರಣವಾಗಿದೆ. ಕೊಡಗು ಜಿಲ್ಲೆ ವಿಶಿಷ್ಟವಾದ ಭೂನಿಬಂಧನೆಗಳನ್ನು ಹೊಂದಿರುವಂತಹ ಜಿಲ್ಲೆಯಾಗಿದೆ. 1964ರಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ ಜಾರಿಗೆ ಬಂದಿದ್ದರೂ, ಕೊಡಗಿನಲ್ಲಿ ಈ ಕಾಯ್ದೆಯು 1999ರ ವರೆಗೆ ಅನುಷ್ಠಾನಕ್ಕೆ ಬಂದಿರಲಿಲ್ಲ. ಹಾಗಾಗಿ ಯಾರೂ ಕೇಳರಿಯದ ಭೂ ನಿಬಂಧನೆಗಳು (ಲ್ಯಾಂಡ್ ಟೆನ್ಯೂರ್) ಅಸ್ತಿತ್ವದಲ್ಲಿ ಇದ್ದವು. ಇದರಲ್ಲಿ ಬಾಣೆ ಎಂಬುದು ಪ್ರಮುಖವಾದ ಒಂದು ಭೂನಿಬಂಧನೆ. ಕೃಷಿ ಯೋಗ್ಯವಾದ ವರ್ಗ (ಬತ್ತದ ಗದ್ದೆ) ಜಮೀನಿಗೆ ಹೊಂದಿಕೊಂಡು ಇದ್ದದ್ದು ಬಾಣೆಯಾಗಿತ್ತು, ಅದಕ್ಕೆ ಪ್ರತ್ಯೇಕವಾದ ನಿಬಂಧನೆ ಇರಲಿಲ್ಲ, ಇದರಲ್ಲಿ ಜಮ್ಮಾ ಎಂಬುದು ಪ್ರಮುಖವಾಗಿತ್ತು, ಜಮ್ಮಾ ಜಮೀನು ಹೊಂದಿರುವವರು ಒಂದಷ್ಟು ವಿನಾಯಿತಿಗಳನ್ನು ಹೊಂದಿದ್ದರು. ಹಾಗಾಗಿ ಜಮ್ಮಾ ಎನ್ನುವುದು ಪ್ರತಿಷ್ಠೆಯ ಸಂಕೇತ ಎಂಬ ವಾದ ಜಿಲ್ಲೆಯಲ್ಲಿ ಇತ್ತು, ಈಗಲೂ ಹಲವರಲ್ಲಿ ಇದೆ. ಈ ಎಲ್ಲಾ ಬಾಣೆ ಜಮೀನು ಕೃಷಿಗೆ ಒಳಪಟ್ಟದ್ದು ಬ್ರಿಟಿಷರ ಮತ್ತು ರಾಜರುಗಳ ಕಾಲದಲ್ಲಿಯೇ ಇದಕ್ಕೆ ಅಧಿಕೃತವಾದ ಅನುಮತಿಯು ದೊರೆತಿತ್ತು, ಒಂದು ಕಾಲದಲ್ಲಿ ಈ ಬಾಣೆಗಳು ಅರಣ್ಯದ ಹೋಲಿಕೆ ಇದ್ದ ಕಾರಣ ಇದನ್ನು ಅರಣ್ಯ ಪ್ರದೇಶ ಎಂದು ಕರೆಯಲಾಗುತ್ತಿತ್ತು, ವಾಸ್ತವದಲ್ಲಿ ಇದು ಅರಣ್ಯವಾಗಿರಲಿಲ್ಲ, ಅರಣ್ಯ ಇಲಾಖೆಯ ಹೆಸರಿನಲ್ಲಿಯೂ ಈ ಜಮೀನು ಇಲ್ಲ, ಎಲ್ಲವೂ ಕಂದಾಯ ಜಮೀನು ಆಗಿತ್ತು, ಆದರೆ "ಅರಣ್ಯ" ಎಂಬ ಹೆಸರು ಇದೆ ಎನ್ನುವ ಕಾರಣಕ್ಕಾಗಿ ಇದನ್ನು ಅರಣ್ಯ ಪ್ರದೇಶ ಎಂದು ಪರಿಸರವಾದಿಗಳು ಎನಿಸಿಕೊಂಡವರು ಮತ್ತು ಅರಣ್ಯ ಇಲಾಖೆಯವರು ಹೇಳುತ್ತಾ ಬಂದಿದ್ದಾರೆ. ಆದರೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯವು ಚೆಕ್ಕೇರ ಪೂವಯ್ಯ ಪ್ರಕರಣದಲ್ಲಿ ಈ ಜಮೀನಿನ ಹಿಡುವಳಿಯ ಹಕ್ಕು ಹಿಡುವಳಿದಾರನದ್ದು ಎಂದು ಘೋಷಿಸಿದೆ. ಅಲ್ಲಿಯವರೆಗೆ ಈ ಜಮೀನಿನ ಮೇಲೆ ಇದ್ದಂತಹ ನಿಯಂತ್ರಣಗಳು ರದ್ದಾಗಿದ್ದವು. ಖಾತೆ ವರ್ಗಾವಣೆಯಿಂದ ಮೊದಲ್ಗೊಂಡು ಮಾರಾಟ, ಪಾಲು ಪಾರಿಕತ್ತು ಎಲ್ಲವೂ ಈಗ ನಡೆಯುತ್ತಿದೆ. ಕಾರಣ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ರಾಜ್ಯ ಸರಕಾರವು ಸ್ಥಿರೀಕರಿಸಿದ್ದು, ಇದಾದ ನಂತರವೂ ಇದನ್ನು ಒಪ್ಪಿಕೊಳ್ಳಲು ಇವರುಗಳು ಸಿದ್ಧರಿಲ್ಲ.


ಹಾಗಾಗಿ ಸರ್ವೋಚ್ಚನ್ಯಾಯಾಲಯದ ಆದೇಶದಂತೆ ರಚನೆಯಾದ ತಜ್ಞರ ಸಮಿತಿ ಸಿದ್ಧಪಡಿಸಿದ ವರದಿಯಲ್ಲಿ ಹಿಡುವಳಿದಾರರ ವಶದಲ್ಲಿರುವ ಬಾಣೆ ಜಮೀನನ್ನು "ಡೀಮ್ಡ್ ಫಾರೆಸ್ಟ್" ಎಂದು ಉಲ್ಲೇಖಿಸಿದೆ. ಇದು ಸುಮಾರು 2.50 ಲಕ್ಷ ಏಕರೆಯಷ್ಟು ಆಗಿದ್ದು ಒಂದು ವೇಳೆ ಈ ವರದಿಯನ್ನು ಸರ್ವೋಚ್ಚನ್ಯಾಯಾಲಯಕ್ಕೆ ಸಲ್ಲಿಸಿ, ಸರ್ವೋಚ್ಚ ನ್ಯಾಯಾಲಯವು ಇದನ್ನು ಒಪ್ಪಿಕೊಂಡರೆ, ಕೊಡಗಿನ ಬಹುತೇಕ ಕೃಷಿಕರು ನಿರ್ಗತಿಕರಾಗುತ್ತಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ, ಈ ಬಗ್ಗೆ ರಾಜ್ಯ ಸರಕಾರವು ಇತ್ತೀಚೆಗೆ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿಯನ್ನು ತಂದು, ಕೊಡಗಿನ ಬಾಣೆ ಜಮೀನಿಗೆ ಹಿಡುವಳಿದಾರನ ಹಕ್ಕು ಕುರಿತು ನ್ಯಾಯಾಲಯ ನೀಡಿದ ತೀರ್ಪಿಗೆ ಕಾನೂನಿನ ಮುದ್ರೆ ಒತ್ತಲು ಪ್ರಯತ್ನಿಸಿದಾಗ ಮತ್ತೊಮ್ಮೆ ಇದೇ ಪರಿಸರವಾದಿಗಳು ಈ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕದಂತೆ ತಡೆಯುವಲ್ಲಿ ಯಶಸ್ವಿಯಾಗಿದ್ದರು.

ಇದಲ್ಲದೆ ಡೀಮ್ಡ್ ಫಾರೆಸ್ಟ್ ಎನ್ನುವುದಕ್ಕೆ ಮತ್ತಷ್ಟು ವ್ಯಾಖ್ಯಾನಗಳನ್ನು ನೀಡಲಾಗಿದೆ. ಯಾವುದೇ ಪ್ರದೇಶವು ಅರಣ್ಯದ ಲಕ್ಷಣಗಳನ್ನು ಹೊಂದಿದ್ದರೆ ಅದನ್ನು ಕೂಡ "ಡೀಮ್ಡ್ ಫಾರೆಸ್ಟ್" ಎಂದು ತಿಳಿಯಬೇಕೆಂದು ತಜ್ಞರ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಡೀಮ್ಡ್ ಫಾರೆಸ್ಟ್ ಎನ್ನುವ ಪದಕ್ಕೆ ಸರ್ವೋಚ್ಚನ್ಯಾಯಾಲಯವು 2010ರಲ್ಲಿ ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮತ್ತೊಂದು ಮಧ್ಯಂತರ ತೀರ್ಪನ್ನು ನೀಡಿದೆ. ಇದರ ಪ್ರಕಾರ ಖಾಸಗಿ ಜಮೀನಿನಲ್ಲಿ ಮರಗಳು ಬೆಳೆದಿದ್ದರೆ ಅದನ್ನು ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದೆ. ನೋಯಿಡಾದ ಒಂದು ಕಾಮಗಾರಿಗೆ ಸಂಬಂಧಪಟ್ಟಂತೆ ಈ ಆದೇಶ ಬಂದಿದ್ದು ಇದನ್ನು ಅರಣ್ಯ ಇಲಾಖೆ ಮತ್ತು ಪರಿಸರವಾದಿಗಳು ಉದ್ದೇಶ ಪೂರ್ವಕವಾಗಿ ಮುಚ್ಚಿಡುತ್ತಿದ್ದಾರೆ.

ಈ ಎಲ್ಲಾ ಪ್ರದೇಶಗಳನ್ನು ಅಂದರೆ ಕೊಡಗಿನ ಮೀಸಲು ಅರಣ್ಯಗಳು, ರಕ್ಷಿತಾರಣ್ಯಗಳು, ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನದ 10 ಕಿ.ಮೀ. ವ್ಯಾಪ್ತಿಯಲ್ಲಿ ಇರುವ ಎಲ್ಲಾ ಪ್ರದೇಶಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿದರೆ ಕೊಡಗಿನ ಜನತೆ ತಮ್ಮ ಬದುಕಿಗೆ ಏನು ಮಾಡಬೇಕು ಎಂಬುದು ತಿಳಿದಿಲ್ಲ, ಈಗಾಗಲೇ ಕೊಡಗಿನ ಜನತೆ ಪಡಬಾರದ ಬವಣೆಯನ್ನು ಪಡುತ್ತಿದ್ದಾರೆ. ಜಿಲ್ಲೆಯ ಎಲ್ಲಾ ರಸ್ತೆಗಳು ಅರಣ್ಯದ ಮೂಲಕವೇ ಹಾದುಹೋಗಬೇಕಾಗಿದೆ. ರಸ್ತೆ ಅಭಿವೃದ್ಧಿಗೆ ಅರಣ್ಯ ಇಲಾಖೆ ನಿರಂತರವಾಗಿ ಅಡ್ಡಿಪಡಿಸುತ್ತಿದೆ. ಈಗಾಗಲೇ ಜನತೆಗೆ ತಿಳಿದಿರುವಂತೆ ಕೊಡಗಿನ ಕಡಮಕಲ್ ರಸ್ತೆಯನ್ನು ದುರಸ್ತಿಪಡಿಸಿದ ವಿಚಾರದಲ್ಲಿ ವಿಧಾನಸಭಾಧ್ಯಕ್ಷ ಕೆ.ಜಿ.ಬೋಪಯ್ಯ ಹಾಗೂ ಯುವಜನ ಸೇವಾ ಸಚಿವ ಅಪ್ಪಚ್ಚು ರಂಜನ್ ಸರ್ವೋಚ್ಚನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಎದುರಿಸುತ್ತಿದ್ದಾರೆ. ಕಡಮಕಲ್ ರಸ್ತೆ ನಿರ್ಮಾಣವಾದರೆ, ಅಲ್ಲಿಯ ಜನತೆ ತಮ್ಮ ಜಿಲ್ಲೆಯ ಮುಖ್ಯ ಪಟ್ಟಣವಾದ ಮಡಿಕೇರಿಗೆ ಬರಲು ಕೇವಲ 20 ಕಿ.ಮೀ. ಸಂಚರಿಸಿದರೆ ಸಾಕು. ಇಲ್ಲದಿದ್ದರೆ ಅವರು 120 ಕಿ.ಮೀ. ಸಂಚರಿಸಬೇಕು. 1904ರಿಂದಲೂ ಈ ರಸ್ತೆ ಅಸ್ತಿತ್ವದಲ್ಲಿದ್ದರೂ, ಅರಣ್ಯ ಇಲಾಖೆ ಮತ್ತು ಪರಿಸರವಾದಿಗಳು ಸರ್ವೋಚ್ಚನ್ಯಾಯಾಲಯಕ್ಕೆ ದಿಕ್ಕುತಪ್ಪಿಸಿ ವರದಿ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಇದೇ ರೀತಿ ಕೂಟಿಯಾಲ ಎಂಬಲ್ಲಿ ಸೇತುವೆಯೊಂದು 70 ಲಕ್ಷ ರೂಪಾಯಿ ವೆಚ್ಚದಲ್ಲಿ ದಶಕದ ಹಿಂದೆ ನಿರ್ಮಾಣವಾಗಿದ್ದು 600 ಮೀಟರಿನಷ್ಟು ಸಂಪರ್ಕ ರಸ್ತೆ ಮಾಡಲು ಅರಣ್ಯ ಮತ್ತು ಲೋಕೋಪಯೋಗಿ ಇಲಾಖೆಯ ನಡುವೆ ಎಂ.ಓ.ಯು. ಆಗಿದ್ದರೂ, ಅರಣ್ಯ ಇಲಾಖೆ ಅಡ್ಡಿಪಡಿಸಿ ರುವುದು ಮಾತ್ರವಲ್ಲ, ಈ ಸಂಬಂಧವೂ ಈ ಜನಪ್ರತಿ ನಿಧಿಗಳ ಮೇಲೆ ಸರ್ವೋಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಈ ರಸ್ತೆ ಆದರೆ ಸುಮಾರು 20 ಕಿ.ಮೀ. ಸಂಚಾರ ಕಡಿಮೆಯಾಗುತ್ತದೆ. ಇದರಿಂದ ಹೆಚ್ಚು ವಾಹನ ಒತ್ತಡ ಇರುವ ಪ್ರದೇಶಗಳಲ್ಲಿ ವಾಹನದ ಒತ್ತಡ ಕಡಿಮೆಯಾಗುವುದಲ್ಲದೆ, ಇಂಧನದ ಬಳಕೆಯು ಕಡಿಮೆಯಾಗಿ ಪರಿಸರಕ್ಕೆ ಕೊಡುಗೆ ನೀಡುತ್ತದೆ ಎಂಬುದು ತಿಳಿದಿದ್ದರೂ, ವಿರೋಧಕ್ಕಾಗಿ ವಿರೋಧ ಎನ್ನುವ ರೀತಿಯಲ್ಲಿ ಅಡ್ಡಿಪಡಿಸುತ್ತಿದ್ದಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ ಜಾರಿಯಲ್ಲಿದ್ದರೂ, ಕೊಡಗಿನಲ್ಲಿ ಮಾತ್ರ ಭೂ ಹಿಡುವಳಿದಾರನಿಗೆ ಮರದ ಮಾಲಿಕತ್ವ ಇಲ್ಲ. ಕರ್ನಾಟಕದಲ್ಲಿ ಬೇರೆ ಎಲ್ಲಾ ಜಿಲ್ಲೆಯಲ್ಲಿಯೂ ಮರದ ಮಾಲಿಕತ್ವ ಭೂ ಹಿಡುವಳಿದಾರನದು ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಅಗತ್ಯವಾಗಿದೆ. ಈ ಹಕ್ಕನ್ನು ಕೊಡಗಿನ ಜನತೆಗೆ ನೀಡಲು ಅರಣ್ಯ ಇಲಾಖೆ ನಿರಂತರವಾಗಿ ಅಡ್ಡಿಪಡಿಸುತ್ತಾ ಬಂದಿದೆ. ಅರಣ್ಯ ಪ್ರದೇಶದಲ್ಲಿರುವ ಮರದ ಹಕ್ಕನ್ನು ಕೇಳುತ್ತಿದ್ದಾರೆ ಎನ್ನುವ ರೀತಿಯಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಪರಿಸರವಾದಿಗಳು ವರ್ತಿಸುತ್ತಿದ್ದಾರೆ.

ಕೊಡಗಿನಲ್ಲಿರುವ ಅರಣ್ಯ ಪ್ರದೇಶಗಳಲ್ಲಿ ಆನೆಗಳಿಗೆ ಆಹಾರ ಸಿಗುತ್ತಿಲ್ಲ, ಹಾಗಾಗಿ ಆನೆಗಳು ಪಕ್ಕದ ಖಾಸಗಿ ತೋಟಗಳಿಗೆ ನುಗ್ಗುತ್ತಿದ್ದು ಈಗ ಆನೆಗಳು ಕಾಡಿಗಿಂತಲೂ ನಾಡೇ ವಾಸಿಸಲು ಯೋಗ್ಯ ಎಂದು ಭಾವಿಸಿದಂತಿದೆ. ಅರಣ್ಯ ಇಲಾಖೆಯವರು ಆನೆಗಳನ್ನು ಕಾಡಿನತ್ತ ಆಕರ್ಷಿಸಲು ಕಾರ್ಯಕ್ರಮವನ್ನು ರೂಪಿಸದೆ, ಒಂದಾನೊಂದು ಕಾಲದಲ್ಲಿ ಈ ಪ್ರದೇಶವೆಲ್ಲವೂ "ಗಜ ಪಥ" ಎಂದು ಹೇಳುತ್ತಿದ್ದು ಅದರಿಂದಾಗಿ ಆನೆಗಳು ಆ ಪ್ರದೇಶದಲ್ಲಿ ಸಂಚರಿಸುತ್ತಿವೆ ಎಂಬ ವ್ಯಾಖ್ಯಾನವನ್ನು ನೀಡುತ್ತಿದ್ದಾರೆ.



ಕಾಫಿ ತೋಟ

ಇದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಲಯವೇ ಸ್ವಯಂಪ್ರೇರಿತರಾಗಿ "ಆನೆ ಮಾನವ ಸಂಘರ್ಷ"ದ ಕುರಿತು ಒಂದು ವರದಿಯನ್ನು ನೀಡಲು ಕೋರಿತ್ತು. ಉಚ್ಚ ನ್ಯಾಯಾಲಯವು ನಂಜನಗೂಡು ತಾಲೂಕಿನ ಕಪ್ಪೋಗೆಯಲ್ಲಿ ಆನೆ

▶12



ಪಶ್ಚಿಮ ಘಟ್ಟದ 39 ತಾಣಗಳನ್ನು ಯುನೆಸ್ಕೊ ವಿಶ್ವ ಪಾರಂಪರಿಕ ನೈಸರ್ಗಿಕ ತಾಣಗಳ ಪಟ್ಟಿಗೆ ಸೇರಿಸಿರುವ ಬಗ್ಗೆ ಈಗ ಎಲ್ಲ ಕಡೆ ಚರ್ಚೆ ನಡೆಯುತ್ತಿದೆ. ನಮ್ಮ ಕಡೆ ಒಂದು ಗಾದೆ ಇದೆ: 'ಅತ್ತೆನ ಮಾವಂಗೇ ದಾನ ಮಾಡಿದಂಗೆ' ಅಂತ. ಹಾಗೆ ಮಾಧ್ಯಮಗಳಲ್ಲಿ ಇವತ್ತು ವಿದೇಶದ ದುಡ್ಡಿನ ಆಸೆಗೆ ಪರಿಸರ ಬಗ್ಗೆ ಮಾತನಾಡುವವರು, ಸರ್ಕಾರದ ಪ್ರತಿನಿಧಿಗಳು ಎಲ್ಲರೂ ತಮ್ಮಷ್ಟಕ್ಕೆ ತಾವೇ ಇದು ಸರಿಯೋ, ತಪ್ಪೋ ಅಂತ ಚರ್ಚೆ ಮಾಡುತ್ತಿದ್ದಾರೆ. ಯಾರೂ ಇದರ ಬಗ್ಗೆ ಸ್ಥಳೀಯರು ಏನೆನ್ನುತ್ತಾರೆ, ಅವರ ಅಭಿಪ್ರಾಯ ಏನು ಎಂದು ಕೇಳುತ್ತಿಲ್ಲ.

ರಾಜ್ಯದ ಹತ್ತು ತಾಣಗಳನ್ನು ಯುನೆಸ್ಕೊ ಪಟ್ಟಿಗೆ ಸೇರಿಸಿದ್ದು ಇದ್ದಕ್ಕಿದ್ದ ಹಾಗೆ ನಡೆದ ಪ್ರಕ್ರಿಯೆಯೇನೂ ಅಲ್ಲ. ಹೋದವರ್ಷವೇ ಈ ಬಗ್ಗೆ ಸಾಕಷ್ಟು ಚರ್ಚೆ ನಡೆದಿತ್ತು. ಸ್ಥಳೀಯರು ಇದನ್ನು ವಿರೋಧಿಸಿದ್ದೂ ಆಗಿತ್ತು. ಆದರೆ ಅವತ್ತು ನಾವು ಎತ್ತಿದ ಯಾವ ಪ್ರಶ್ನೆಗೂ ಉತ್ತರ ನೀಡದೇ ಕೇಂದ್ರ ಸರ್ಕಾರ ಮತ್ತೊಮ್ಮೆ ಈ ಬಗ್ಗೆ ವಿಶ್ವಸಂಸ್ಥೆಗೆ ಪ್ರಸ್ತಾಪವನ್ನು ಕಳಿಸಿ, ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸಿದೆ. ಹೋಗಲಿ ಈಗಲಾದರೂ ಸ್ಪಷ್ಟವಾಗಿ ಮತ್ತು ಪಾರದರ್ಶಕವಾಗಿ ಎಲ್ಲ ವಿಷಯಗಳನ್ನು ಜನರ ಮುಂದಿಡುತ್ತಿದೆಯೇ ಎಂದು ನೋಡಿದರೆ ಅದೂ ಆಗುತ್ತಿಲ್ಲ. (ಮಾಧವ್ ಗಾಡ್ಗೀಳ್ ನೇತೃತ್ವದ ತಂಡ ಪಶ್ಚಿಮ ಘಟ್ಟದ ಬಗ್ಗೆ ನೀಡಿರುವ ವರದಿಯನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆಯಲು ಎಷ್ಟೆಲ್ಲಾ ಹೋರಾಟ ಮಾಡಬೇಕಾಗಿ ಬಂದಿತು ಎಂಬುದು ಎಲ್ಲರಿಗೂ ಗೊತ್ತಿದೆ ಎಂದುಕೊಳ್ಳುತ್ತೇನೆ.)

ತುಂಬಿದ ಕುಟುಂಬದಲ್ಲಿ ಏನಾದರೂ ವಿಶೇಷವಾದ ಕೆಲಸವನ್ನು ಹೇಳಿದಾಗ ಕಿರಿಮಗ ಕೊಸರಾಡುತ್ತಾನಲ್ಲ, "ಅದು ನಂಗಾಗಲ್ಲ ಇದನ್ನು ಕೊಟ್ರೆ ಅದನ್ನ ಮಾಡ್ತೀನಿ, ಅದನಂತೂ ಮಾಡೋಲ್ಲ" ಅಂತ, ಹಾಗೆ ನಮ್ಮ ರಾಜ್ಯ ಸರ್ಕಾರ ಈಗ ವಿರೋಧವೇನೋ ಮಾಡುತ್ತಿದೆ. ಯಜಮಾನ ಗದರಿಸುವವರೆಗೂ ಈ ಕೊಸರಾಟ ನಡಿಯಬಹುದು. ಹಾಗಾಗಿ ಸರ್ಕಾರದ ಈ ವಿರೋಧ ಎಲ್ಲಿಯವರೆಗೆ, ಎಷ್ಟು ದಿನ ನಡೆಯುತ್ತೆ ಎಂದು ಹೇಳುವುದಕ್ಕಾಗುವುದಿಲ್ಲ, ಅಲ್ಲದೆ

ಯುನೆಸ್ಕೊ ಸ್ಥಾನಮಾನದ ಸುತ್ತ....

ಈಗ ವಿರೋಧ ಮಾಡುತ್ತಿರುವ ರಾಜ್ಯ ಸರ್ಕಾರವೇ ನಮ್ಮಲ್ಲಿ (ಕುದುರೆಮುಖ ಅಭಯಾರಣ್ಯದಲ್ಲಿ) ತಲೆ-ಬುಡವಿಲ್ಲದ ಹುಲಿ ಯೋಜನೆಯನ್ನು ಜಾರಿಗೆ ತಂದಿದೆ. ಹೀಗಾಗಿ ಕೊನೆಗೆ ಎಲ್ಲದಕ್ಕೂ ತಲೆಕೊಡಬೇಕಾದವರು ನಾವೇ... ಅಂದರೆ ಸ್ಥಳೀಯರೇ.


ಯುನೆಸ್ಕೊ ನೀಡಿರುವ ಈ ಮಾನ್ಯತೆಯನ್ನು ಮುಂದಿಟ್ಟು ಕೊಂಡು ವಿದೇಶಿ ಹಣದಲ್ಲಿ ನಡೆಯುವ ಎನ್‌ಜಿಓಗಳು ಮಾತ್ರ ಜನತೆಯನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಮಾಡುತ್ತಲೇ ಇದ್ದಾರೆ. ಯಾವ ಪತ್ರಿಕೆ ನೋಡಿದರೂ ಅವರದ್ದೇ ಅಭಿಪ್ರಾಯ. ಸ್ಥಳೀಯರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಇಂಗ್ಲಿಷ್ ಪತ್ರಿಕೆಗಳು ಪರಿಸರದ ಬಗ್ಗೆ ಏನಾದರೂ ಚರ್ಚೆ ನಡೆಸುವಾಗ ಎನ್‌ಜಿಓಗಳ ಅಭಿಪ್ರಾಯವನ್ನಷ್ಟೇ ಪ್ರಕಟಿಸುತ್ತವೆ. ಈ ರೋಗ ಈಗ ಕನ್ನಡದ ರಾಜ್ಯಮಟ್ಟದ ಪತ್ರಿಕೆಗಳಿಗೂ ಬಂದಂತಿದೆ.

ಯುನೆಸ್ಕೊ ಈ ರೀತಿಯ ಮಾನ್ಯತೆ ನೀಡುತ್ತಿರುವುದು ಹೊಸದೇನೂ ಅಲ್ಲ. ನಮ್ಮ ಹಂಪೆಗೇ ಈ ಮಾನ್ಯತೆ ದೊರಕಿದೆ. ಈಗಾಗಲೇ ನಮ್ಮ ದೇಶದಲ್ಲಿ ಐದು ನೈಸರ್ಗಿಕ ತಾಣಗಳೂ ಈ ಮಾನ್ಯತೆ ಪಡೆದಿವೆ. ಹೀಗಿರುವಾಗ ಇದರಿಂದ ಒಳ್ಳೆಯದಾಗುತ್ತದೋ ಅಥವಾ ಕೆಟ್ಟದ್ದಾಗುತ್ತದೋ ಎಂಬುದನ್ನು ತಿಳಿಯಲು ಕಷ್ಟಪಡಬೇಕಾಗಿಲ್ಲ. ಹಾಗೆಯೇ ಈ ವಿದೇಶಿ ಏಜೆಂಟರಾದ ಎನ್‌ಜಿಓಗಳು ಹೇಳುವ ಮಾತನ್ನು ಸಂಪೂರ್ಣವಾಗಿ ನಂಬಬೇಕಾಗಿಯೂ ಇಲ್ಲ, ಅಲ್ಲವೇ?

ಹಂಪೆಯ ಕತೆ ನೋಡೋಣ, 1986ರಲ್ಲಿಯೇ ಇದನ್ನು ಪಾರಂಪರಿಕ ಪಟ್ಟಿಗೆ ಸೇರಿಸಲಾಗಿತ್ತು, 1999ರಲ್ಲಿ ಸ್ಥಳೀಯ ಜನರು ಓಡಾಡಲೆಂದು ಆನೆಗುಂದಿ ಸೇರಿದಂತೆ ಎರಡು ಸೇತುವೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸುತ್ತಿದ್ದಂತೆಯೇ ಯುನೆಸ್ಕೊ ಏನು ಮಾಡಿತು? ಹಂಪೆಯನ್ನು ಡೇಂಜರ್ ಲಿಸ್ಟ್‌ಗೆ ಸೇರಿಸಿತು. ಆಮೇಲೆ ಸರ್ಕಾರ ಹಂಪೆಯನ್ನು ಈ ಪಟ್ಟಿಯಿಂದ ಹೊರಗಿಡುವಂತೆ ಮಾಡಲು ಏನೆಲ್ಲಾ ಸರ್ಕಸ್ ಮಾಡಿತು ಎಂಬುದು ಎಲ್ಲರಿಗೂ ಗೊತ್ತೇ ಇದೆ. ಆನೆಗುಂದಿ ಸೇತುವೆ ನಿರ್ಮಾಣದಲ್ಲಿ ಕಳಪೆ ಕಾಮಗಾರಿ ಏಕೆ ನಡೆಯಿತು? ಅದು ಬಿದ್ದಿದ್ದೇಕೆ? ಈ ನಾಟಕ ನೋಡಿದವರಿಗೆ ಇವೆಲ್ಲ ಅರ್ಥವಾಗುವಂತದ್ದೇ. 2006ರಲ್ಲಿ ಹಂಪೆಯನ್ನು ಡೇಂಜರ್ ಪಟ್ಟಿಯಿಂದ ಹೊರಗಿಡಲಾಯಿತು. 2009ರಲ್ಲಿ ಆನೆಗುಂದಿ ಸೇತುವೆಯೂ ಬಿದ್ದು ಹೋಯಿತು. ಆಮೇಲೆ ನಿರಂತರವಾಗಿ ಈ ಸೇತುವೆಯ ಅವಶೇಷಗಳನ್ನು ಕಿತ್ತೆಗೆದುಹಾಕುವಂತೆ ಯುನೆಸ್ಕೊ ಸೂಚಿಸುತ್ತಲೇ ಬಂದಿದೆ. ಈ ಬಗ್ಗೆ ಅನುಮಾನವಿದ್ದವರು ಯುನೆಸ್ಕೊದ ವೆಬ್‌ಸೈಟ್ ನಲ್ಲಿರುವ 2010 ಮತ್ತು 2011ರ ಡಿಸಿಷನ್‌ಗಳನ್ನು ನೋಡಬಹುದು.

ಇಷ್ಟೇ ಅಲ್ಲ, ಹಂಪೆಯಲ್ಲಿನ ವಸತಿಹೀನರಿಗೆ ಮನೆ ನಿರ್ಮಿಸಿಕೊಡುವ ಯೋಜನೆಗಳನ್ನು ಜಾರಿಗೆ ತರಲು ನಮ್ಮ ಸರ್ಕಾರ ಹೊರಟಾಗ ಅದನ್ನು ಯುನೆಸ್ಕೊ ಕಾನೂನುಬಾಹಿರ (ಇಲ್ಲೀಗಲ್) ಕ್ರಮಗಳು ಎಂದು ಅದನ್ನು ಜಾರಿಗೆ ತರದಂತೆ ಸೂಚನೆ ನೀಡಿದೆ. (ನೋಡಿ: **Stop illegal constructions within the property and the buffer zone area (namely in Hampi Village and Virupapura Gada Island), and control and manage other planned developments, such as social housing projects, to ensure that they do not have a negative impact on the integrity of the landscape;- Decision - 34COM 7B.67 - Group of Monuments at Hampi (India) (C 241)**). ಸಾಮಾಜಿಕ ವಸತಿ ಯೋಜನೆಗಳನ್ನು ಜಾರಿಗೆ ತರಬೇಡಿ ಎಂದರೆ ಅಲ್ಲಿರುವವರ ಗತಿ ಏನು? ಈ ಸೂಚನೆ ಪಾಲಿಸದೇ ಇದ್ದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಮರ್ಯಾದೆ ಹೋಗುತ್ತದೆಯೆಂದೂ ಒತ್ತಡ ಬಾರದೇ ಇರುತ್ತದೆಯೇ? ಹಂಪೆಯ ಅವಶೇಷಗಳು ಉಳಿಯಬೇಕು ನಿಜ, ಆದೇರೀತಿಯಾಗಿ ಅಲ್ಲಿಯೇ ತಲತಲಾಂತರಗಳಿಂದ ಅವುಗಳೊಂದಿಗೇ ಬಾಳಿ ಬದುಕಿದವರಿಗೆ ಬದುಕುವ ಹಕ್ಕೂ ಕೂಡ ಇರಬೇಕು ತಾನೆ?

ಹಂಪೆಯಂತೆ ಅಸ್ಸಾಂನ ಕಾಜಿರಂಗ ರಾಷ್ಟ್ರೀಯ ಉದ್ಯಾನವನವೂ ಪಾರಂಪರಿಕ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಆದರ ದಕ್ಷಿಣ ತುದಿಗೆ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 37ನ್ನು ಅಪ್‌ಗ್ರೇಡ್ ಮಾಡುವುದು ಸ್ಥಳೀಯರ ಹಿತದೃಷ್ಟಿಯಿಂದ ಅನಿವಾರ್ಯವಾಗಿತ್ತು. ಅದಕ್ಕೂ ಯುನೆಸ್ಕೊ ಕಲ್ಲು ಹಾಕಿದೆ. ಕೊನೆಗೆ ಅಸ್ಸಾಂ ಸರ್ಕಾರ ಈ ಒತ್ತಡಕ್ಕೆ ಮಣಿದು ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿ



ಪಡಿಸಲು ಹಾಕಿಕೊಂಡ ಯೋಜನೆಗಳನ್ನೆಲ್ಲಾ ಕೈಬಿಟ್ಟಿತು. ಈಗ ಈ ಉದ್ಯಾನವನದ ಸಮೀಪವಿರುವ ಕರ್ಬಿ ಪರ್ವತಶ್ರೇಣಿಯನ್ನು ಹೇಗೆ ಕಾಪಾಡಬೇಕು, ಸುತ್ತಮುತ್ತಾ ಏನೆಲ್ಲಾ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತಿದೆ.


ಈ ಉದ್ಯಾನವನವನ್ನು ಯುನೆಸ್ಕೊ ಪಟ್ಟಿಗೆ ಸೇರಿಸಿದ್ದರಿಂದ ಪ್ರವಾಸೋದ್ಯಮ ಮಾತ್ರ ಜೋರಾಗಿ ಬೆಳೆಯುತ್ತಿದೆ. 2004-05ನೇ ಸಾಲಿನಲ್ಲಿ 74 ಸಾವಿರ ಪ್ರವಾಸಿಗರು ಕಾಜಿರಂಗಕ್ಕೆ ಭೇಟಿ ನೀಡಿದ್ದಾರೆ. 2009-10ನೇ ಸಾಲಿನಲ್ಲಿ ಈ ಸಂಖ್ಯೆ 1.15 ಲಕ್ಷಕ್ಕೆ ಏರಿದೆ. ಇವರ ಅನುಕೂಲಕ್ಕಾಗಿ 32 ಹೋಟೇಲ್‌ಗಳಾಗಿವೆ. ಸ್ಥಳೀಯರು ಅವರ ಸೇವೆಯನ್ನೇ ಉದ್ಯೋಗವಾಗಿ ಮಾಡಿಕೊಂಡಿದ್ದಾರೆ. ಒಟ್ಟಾರೆ ಥೈಲೆಂಡ್‌ನ ಸ್ಥಿತಿ ಅಲ್ಲಿ ನಿರ್ಮಾಣವಾಗುತ್ತಿದೆ.

1974ರಲ್ಲಿ ನಡೆದ ಚಿಪ್ಕೋ (ಅಪ್ಪಿಕೋ) ಚಳವಳಿ ಬಗ್ಗೆ ನಿಮಗೆ ಗೊತ್ತೇ ಇದೆ. ಉತ್ತರಾಂಚಲದ ರೇನಿ ಮತ್ತು ಲಾಟಾ ಹಳ್ಳಿಗಳ ಜನರು ಅರಣ್ಯ ಕಡಿಯಲು ಬಂದ ಸರ್ಕಾರವನ್ನು ಹಿಮ್ಮೆಟ್ಟಿಸಿದ್ದರು. ಗೌರಿದೇವಿ ಎಂಬಾಕೆಯ ನೇತೃತ್ವದಲ್ಲಿ ನಡೆದ ಈ ಚಳವಳಿಯಲ್ಲಿ ಸ್ಥಳೀಯರು ಮರವನ್ನು ಬಿಗಿಯಾಗಿ ಅಪ್ಪಿಕೊಂಡು ಕಡಿಯಲು ಬಂದ ಸರ್ಕಾರಿ ಪಡೆಯನ್ನು ಓಡಿಸಿದ್ದರು. ಈ ಪ್ರದೇಶ ನಂದಾದೇವಿ ರಾಷ್ಟ್ರೀಯ ಉದ್ಯಾನವನಕ್ಕೆ ಸೇರುತ್ತದೆ. ಇದೂ ಕೂಡ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿದೆ. ಇದರಿಂದಾಗಿ ಅಲ್ಲಿ ಅಂದು ಯಾರು ಕಾಡನ್ನು ಉಳಿಸಿದ್ದರೋ ಅವರೇ ಕಾಡಿಗೆ ಹೋಗುವಂತಿಲ್ಲ ಎಂಬ ಕಾನೂನನ್ನು ನಮ್ಮ ಸರ್ಕಾರ ಜಾರಿಗೆ ತಂದಿತ್ತು, ಕೊನೆಗೆ ಸುಪ್ರೀಂಕೋರ್ಟ್ ತೀರ್ಪು ನೀಡಿ ಅವರ ಕಾಡಿನ ಮೇಲಿನ ಹಕ್ಕನ್ನು ಎತ್ತಿಹಿಡಿಯಬೇಕಾಯಿತು. ಈಗ ಅಲ್ಲಿಗೆ ಪ್ರವಾಸಿಗರ ದಂಡೇ ಬರುತ್ತಿದೆ. ಅಂದು ಕಾಡು ಉಳಿಸಿದವರು ಇಂದು ಪ್ರವಾಸಿಗರಿಗೆ ಕಾಡು ತೋರಿಸುವ ಕೆಲಸ ಮಾಡಿ ಜೀವನ ಸಾಗಿಸಬೇಕಾದ ಪರಿಸ್ಥಿತಿ ಇದೆ. ಇದನ್ನು ಯುನೆಸ್ಕೊ ಉತ್ತೇಜಿಸುತ್ತಿದ್ದು, ಸ್ಥಳೀಯರಿಗೆ ಇಕೋ ಟೂರಿಸಂ ಬಗ್ಗೆ, ರಾಕ್ ಕ್ಲೈಂಬಿಂಗ್ ಬಗ್ಗೆ ಮಾಹಿತಿ ಕೊಡಿ ಅಂತ ಉತ್ತರಾಂಚಲ ಸರ್ಕಾರಕ್ಕೆ ಸಲಹೆ ಸೂಚನೆ ನೀಡುತ್ತಿದೆ!

ಇವನ್ನೆಲ್ಲಾ ಇಲ್ಲಿ ಏಕೆ ಪ್ರಸ್ತಾಪ ಮಾಡಿದ್ದೇನೆ ಎಂದರೆ ಯುನೆಸ್ಕೊ ಪಟ್ಟಿಗೆ ಸೇರ್ಪಡೆಯಾದರೆ ಅನುಕೂಲವೂ ಇಲ್ಲ, ಅನಾನುಕೂಲವೂ ಇಲ್ಲ, ಇದು ಬರೀ ಮಾನ್ಯತೆ ಮಾತ್ರ ಎಂದು ಎನ್‌ಜಿಓಗಳು ವಾದಿಸುತ್ತಿರುವುದು ಹುಸಿಹುಸಿ ಸುಳ್ಳು ಎಂಬುದನ್ನು ಎತ್ತಿ ತೋರಿಸಲು.

ಯುನೆಸ್ಕೊ ಎಂದರೆ ಹಣ ಕೊಡುವ, ಆಡಳಿತ ನಡೆಸುವ ಸಂಸ್ಥೆ ಅಲ್ಲ ಎಂಬುದು ನಮಗೂ ಗೊತ್ತಿದೆ. ಆದರೆ ಪಾರಂಪರಿಕ ಪಟ್ಟಿಯಲ್ಲಿರುವ ಸ್ಥಳಗಳ ರಕ್ಷಣೆಗೆ ಅದು ದೇಣಿಗೆ ನೀಡುತ್ತದೆ. ನಮ್ಮ ಹಂಪೆಗೇ ಇದುವರೆಗೆ ಒಟ್ಟು 109.740 ಅಮೆರಿಕನ್ ಡಾಲರ್ ನೀಡಿದೆ. ಇದು ಹೇಗೆ, ಯಾವುದಕ್ಕೆ ಬಳಕೆಯಾಗಿದೆಯೋ ವಿರೂಪಾಕ್ಷನಿಗೇ ಗೊತ್ತು.

ವಿದೇಶಿ ದುಡ್ಡಿನಾಸೆಗಾಗಿ ಪರಿಸರದ ಮೇಲೆ ಪ್ರೀತಿ ಬೆಳೆಸಿಕೊಂಡಿರುವ ಎನ್‌ಜಿಓಗಳು ಇದರ ಪರ ವಕಾಲತ್ತು ಮಾಡುತ್ತಿರುವುದಕ್ಕೆ ಕಾರಣವೂ ಇದೆ. ಇದರಿಂದ ನೇರವಾಗಿ ದುಡ್ಡು ಬಾರದೇ ಇರಬಹುದು. ಆದರೆ ಯುನೆಸ್ಕೊ ಪರಿಸರ ರಕ್ಷಣೆಗೆ ಹಣ ಕೊಡುವ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಪರಿಸರ ರಕ್ಷಣೆಯ ನಾಟಕವಾಡುವ ಈ ಎನ್‌ಜಿಓಗಳ ನಡುವಿನ



ದಲ್ಲಾಳಿಯಂತೆ ಕೆಲಸ ಮಾಡುತ್ತದೆ.

ಉದಾಹರಣೆಗೆ 2008ರಲ್ಲಿ ಯುನೆಸ್ಕೊ 'ವರ್ಲ್ಡ್ ಹೆರಿಟೇಜ್ ಬಯೋಡೈವರ್ಸಿಟಿ ಪ್ರೋಗ್ರಾಮ್ ಫಾರ್ ಇಂಡಿಯಾ' (WHBPI) ಎಂಬ ಯೋಜನೆ ಜಾರಿಗೆ ತಂದಿತ್ತು, ಇದರಡಿ ಅಸ್ಸಾಂನ ಮಾನಸ ಮತ್ತು ಕಾಜಿರಂಗ ರಾಷ್ಟ್ರೀಯ ಉದ್ಯಾನವನ್ನು ಬಹುಕಾಲ ನಿರ್ವಹಿಸುವ ಹಾಗೂ ರಕ್ಷಿಸುವ ತಂತ್ರಗಾರಿಕೆ ರೂಪಿಸಲು ಬೆಂಗಳೂರಿನ ಏಟ್ರಿ ಎಂಬ ಎನ್‌ಜಿಓಗೆ 6,42,180 ಅಮೆರಿಕನ್ ಡಾಲರ್ ನೀಡಿದೆ. ಈ ಹಣ ಎಲ್ಲಿಂದ ಬಂತು ಗೊತ್ತೇ, ಫೋರ್ಡ್ ಫೌಂಡೇಷನ್ ಮತ್ತು ಎಸ್.ಎಂ.ಸೆಹಗಲ್ ನೀಡಿದ್ದು! ಎಲ್ಲಿಂದ ಎಲ್ಲಿಗೆ ಸಂಬಂಧ ನೋಡಿ.

ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕುವ ಕಾಜಿರಂಗ ನ್ಯಾಷನಲ್ ಪಾರ್ಕ್ ರಕ್ಷಿಸಲು ಬೆಂಗಳೂರಿನ ಎನ್‌ಜಿಓಗೆ ಜವಾಬ್ದಾರಿ ವಹಿಸಲಾಗುತ್ತದೆ. ಸ್ಥಳೀಯರಿಗೆ ಇಲ್ಲದ ತಿಳಿವಳಿಕೆ ಈ ಎನ್‌ಜಿಓ ತಜ್ಞರಿಗೆ ಅದೇನಿದೆಯೋ... ಈ ವರ್ಷವೂ ಅಲ್ಲಿ ಪ್ರವಾಹಕ್ಕೆ ಸಿಲುಕಿ 560 ಪ್ರಾಣಿಗಳು ಸತ್ತಿವೆ. ಇದಕ್ಕೆ ಫೋರ್ಡ್ ಫೌಂಡೇಷನ್ ದುಡ್ಡು ನೀಡುತ್ತದೆ. ಈ ಯೋಜನೆ ಜಾರಿಗೆ ಬರುವುದು ಯುನೆಸ್ಕೊದಿಂದ!

ಇದೇ ಏಟ್ರಿ ಸಂಸ್ಥೆ ನೀಡಿರುವ ವರದಿಯನ್ನು ಆಧರಿಸಿಯೇ ಈಗ ನಮ್ಮ ಪಶ್ಚಿಮ ಘಟ್ಟಕ್ಕೂ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ದೊರಕಿರುವುದು. ಬಹುಶಃ ಅವರಿಗೇ ಹೆಚ್ಚಿನ ಪ್ರಾಜೆಕ್ಟ್‌ಗಳು ದೊರೆಯುವಂತೆ ಕಾಣುತ್ತಿದೆ. ಇದಕ್ಕೆ ಮಾನ್ಯ ಸಂಜಯ್ ಗುಬ್ಬಿ ಅವರು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ಈ ಎನ್‌ಜಿಓ ವಿರುದ್ಧ ಕೆಂಡಕಾರಿಕೊಂಡಿರುವುದು!

ಕುದುರೆಮುಖ ರಾಷ್ಟ್ರೀಯ ಉದ್ಯಾನವನ್ನು ವಿರೋಧಿಸುವ ಸಂದರ್ಭದಲ್ಲಿ ಇದರ ಹಿಂದಿರುವ ಸಾಮ್ರಾಜ್ಯಶಾಹಿಗಳ ಕುತಂತ್ರವನ್ನು ಹೇಳಿಕೊಂಡೇ ಬಂದಿದ್ದೇವೆ. ಆದರೂ ಉದ್ಯಾನವನ ಆಯಿತು. ಈಗ ಅದರ ಮುಂದುವರೆದ ಭಾಗವಾಗಿ ಈ ವಿಶ್ವಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ನೀಡಲಾಗಿದೆ.

ಗಿರಿಜನರನ್ನು ಎತ್ತಂಗಡಿ ಮಾಡಲಾಗುತ್ತದೆ, ಜೀವ ವೈವಿಧ್ಯತೆಯ ಲೂಟಿಯಾಗುತ್ತದೆ, ಪ್ರವಾಸೋದ್ಯಮಕ್ಕೆ ಆದ್ಯತೆ ದೊರೆಯುತ್ತದೆ, ಔಷಧಿ ಸಸ್ಯಗಳ ಮತ್ತು ಅರಣ್ಯ ಉತ್ಪನ್ನಗಳ ಮೇಲಿನ ಹಕ್ಕನ್ನು ಸ್ಥಳೀಯರು ಕಳೆದುಕೊಳ್ಳಬೇಕಾಗುತ್ತದೆ ಎಂಬ ನಾಲ್ಕು ಕಾರಣಗಳಿಂದ ನಾವು ಮುಖ್ಯವಾಗಿ ರಾಷ್ಟ್ರೀಯ ಉದ್ಯಾನವನವನ್ನು ವಿರೋಧಿಸಿದ್ದೆವು. ಅವೇ ಕಾರಣಗಳನ್ನು ಮುಂದಿಟ್ಟುಕೊಂಡು ಈಗಲೂ ಈ ಮಾನ್ಯತೆಯನ್ನು ಪ್ರಶ್ನಿಸುತ್ತಿದ್ದೇವೆ.

ಪರಿಸರವಾದಿ ಶ್ರೀಯುತ ಪಾಂಡುರಂಗ ಹೆಗಡೆಯವರು ತಮ್ಮ ಲೇಖನವೊಂದರಲ್ಲಿ ಈ ಮಾನ್ಯತೆಯನ್ನು 'ಭಾರತರತ್ನ'ಕ್ಕೆ ಹೋಲಿಸಿದ್ದಾರೆ. ಭಾರತರತ್ನ ಕೊಡಲಿ ಸಂತೋಷ. ಆದರೆ ನಿಮಗೆ ಈ ಪ್ರಶಸ್ತಿ ದೊರೆತಿರುವುದರಿಂದ ನೀವು ಹೀಗೇ ಮಾತಾಡಬೇಕು, ಇಷ್ಟೇ ತಿನ್ನಬೇಕು, ನಾವು ಹೇಳಿದ ಕಾರ್ಯಕ್ರಮಗಳಿಗೆ ಮಾತ್ರ ಹೋಗಬೇಕು, ಅಲ್ಲಿ ಹೀಗೆಯೇ ವರ್ತಿಸಬೇಕು ಎಂದೆಲ್ಲಾ ಕಟ್ಟು-ಪಾಡು ವಿಧಿಸುವುದು ಎಷ್ಟು ಸರಿ ಎಂಬುದು ನಮ್ಮ ಪ್ರಶ್ನೆ.

ರಾಜ್ಯದ ಹತ್ತು ತಾಣಗಳು ಪಾರಂಪರಿಕ ಪಟ್ಟಿಗೆ ಸೇರ್ಪಡೆಯಾಗಿರುವುದರಿಂದ ಯಾವುದಕ್ಕೆಲ್ಲಾ ಅಡ್ಡಿಯಾಗುತ್ತದೆ, ಸ್ಥಳೀಯರು ಯಾವ ರೀತಿ ಕಷ್ಟ ಅನುಭವಿಸಬೇಕಾಗುತ್ತದೆ ಎಂದು ವಿವರಿಸುತ್ತಾ ಹೋದರೆ ಅದೇ ದೊಡ್ಡ ಲೇಖನವಾದೀತು. ಸರಳವಾಗಿ ಒಂದೇ ಉದಾಹರಣೆ ನೀಡುತ್ತೇನೆ. ಕರಾವಳಿಗೂ ಕರ್ನಾಟಕದ ಇತರ ಭಾಗಕ್ಕೂ ಸಂಪರ್ಕ ಕಲ್ಪಿಸಲು ಘಾಟಿಗಳಿವೆ. ಇಲ್ಲಿಯ ರಸ್ತೆಗಳೆಲ್ಲಾ ಅಂಕು-ಡೊಂಕಾಗಿವೆ. ಇದರಿಂದ ಅಪಘಾತ ಸರ್ವೇಸಾಮಾನ್ಯ. ಮುಂದೊಮ್ಮೆ ವೈಜ್ಞಾನಿಕವಾಗಿ ಈ ರಸ್ತೆಯನ್ನು ನೇರವಾಗಿ ಮಾಡಲು ಸಾಧ್ಯವಾದರೂ ಆ ಯೋಜನೆಯನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲ. ಘಾಟಿ ರಸ್ತೆಗಳೆಲ್ಲಾ ಹಾಗೇ ಇರಬೇಕು! ಹಾಗೆಯೇ ಈ ತಾಣಗಳ ವ್ಯಾಪ್ತಿಯಲ್ಲಿ ಬರುವ ಮನೆಗಳು, ರಸ್ತೆಗಳು ಎಲ್ಲ... ಯಥಾಸ್ಥಿತಿ ಕಾಪಾಡುವುದು ಎಂದರೆ ಇದೇ.


ಯುನೆಸ್ಕೊ ಪಟ್ಟಿಗೆ ಸೇರಿರುವ ಪಶ್ಚಿಮಘಟ್ಟವನ್ನು ಜೋಪಾನವಾಗಿ ಕಾಪಾಡಲು ಅಂತಾರಾಷ್ಟ್ರೀಯ ಮಟ್ಟದ ಉಸ್ತುವಾರಿ ಅಗತ್ಯ ಎಂದು ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಸಂಸ್ಥೆ (ಐಯುಸಿಎನ್) ಸಲಹೆ ನೀಡಿದೆ. ಈ ಸಲಹೆ ಜಾರಿಗೆ ಬಂದಲ್ಲಿ ರಾಜ್ಯ ಸರ್ಕಾರ ಅದರ ಕೈಗೊಂಬೆಯಾಗಬೇಕಾಗುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ.

ಹಿಂದೆ ಬ್ರಿಟಿಷರು ಕಾಫಿ, ಏಲಕ್ಕಿ ಎಸ್ಟೇಟ್ ಮಾಡಿದ ಹಾಗೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿ ಶ್ರೀಗಂಧದ ಎಸ್ಟೇಟ್ ಮಾಡಲು ಹೊರಟಿದ್ದರು. ಸ್ಥಳೀಯ ಗಿರಿಜನರಿಗೆ ಶ್ರೀಗಂಧದ ಬೀಜ ನೀಡಿ ಬಿತ್ತುವಂತೆ ಸೂಚಿಸಿದ್ದರು. ಬೀಜ ಬಿತ್ತದಿದ್ದರೆ ದೊರೆಗಳ ಆಜ್ಞೆ ಉಲ್ಲಂಘಿಸಿದಂತಾಗುತ್ತದೆ, ಬಿತ್ತಿದರೆ ಕಾಡು ನಮ್ಮದಾಗಿ ಉಳಿಯುವುದಿಲ್ಲ ಎಂದು ಲೆಕ್ಕಹಾಕಿದ ಗಿರಿಜನರು ಕೊನೆಗೆ ಉಪಾಯ ಮಾಡಿ ಬ್ರಿಟಿಷ್ ಅಧಿಕಾರಿಗಳು ನೀಡಿದ ಗಂಧದ ಬೀಜವನ್ನು ರಾತ್ರೋರಾತ್ರಿ ಹುರಿದು, ಹಗಲಿನಲ್ಲಿ ಬ್ರಿಟಿಷ್ ಅಧಿಕಾರಿಗಳ ಎದುರಿಗೇ ಬಿತ್ತಿ ಅವು ಹುಟ್ಟದಂತೆ ನೋಡಿಕೊಂಡಿದ್ದರು, ಜೀವ ವೈವಿಧ್ಯತೆಯ ಆಗರವನ್ನು ಉಳಿಸಿಕೊಂಡಿದ್ದರು.

ನಾವು ಹೇಳುತ್ತಿರುವುದು ಗಿರಿಜನರ ಈ ಪರಂಪರೆಯನ್ನು ಉಳಿಸೋಣ ಎಂದು. ಯುನೆಸ್ಕೊ ಪಶ್ಚಿಮಘಟ್ಟವನ್ನು ಪಾರಂಪರಿಕ ಪಟ್ಟಿಗೆ ಸೇರಿಸಿ ನೀಡುವ ಮಾನ್ಯತೆಗಿಂತ ನಮ್ಮ ಈ ಪರಂಪರೆ ದೊಡ್ಡದು. ಪಶ್ಚಿಮ ಘಟ್ಟ ಎಷ್ಟು ಸೂಕ್ಷ್ಮ ಪ್ರದೇಶ ಮತ್ತು ಇದನ್ನು ಕಾಪಾಡುವುದು ಎಷ್ಟು ಅಗತ್ಯ ಎಂಬುದು ನಮಗೆ ಗೊತ್ತಿದೆ. ಯುನೆಸ್ಕೊ 'ಔಟ್ ಸ್ಟ್ಯಾಂಡಿಂಗ್ ಯುನಿವರ್ಸಲ್ ವ್ಯಾಲ್ಯೂ' ಎಂದು ದೊಡ್ಡ ದೊಡ್ಡ ಶಬ್ದಗಳಲ್ಲಿ ವರ್ಣಿಸಿದ ಮಾತ್ರಕ್ಕೆ ಇದರ ಪ್ರಾಮುಖ್ಯತೆಯೇನೂ ಹೆಚ್ಚುವುದಿಲ್ಲ. ಪರಿಸರ ಎಂದರೆ ಪ್ರತಿಯೊಬ್ಬರಿಗೂ ಸೇರಿದ್ದು, ಎಲ್ಲರೂ ಕೂಡಿ ಉಳಿಸಬೇಕು. ಪರಿಸರ ಸ್ನೇಹಿ ಜೀವನ ಶೈಲಿ ರೂಢಿಸಿಕೊಳ್ಳಬೇಕೇ ಹೊರತು, ಶೋಕೇಸ್‌ನಲ್ಲಿ ಇಡುವ ಅಲಂಕಾರಿಕ ವಸ್ತುವಂತೆ ಎಲ್ಲೋ ಒಂದಿಷ್ಟು ಭಾಗವನ್ನು ಉಳಿಸುತ್ತೇವೆ ಎಂದರೆ ಭೂಲೋಕ ಉಳಿಯದು.


• ಕಲ್ಕುಳಿ ವಿಠ್ಠಲ ಹೆಗಡೆ

ಮಂತ್ರಿಯಾಗದ ಹಾಲಾಡಿ; ಕಂತ್ರಿಯೆಂದು ಖಾತ್ರಿಯಾದ ಕಲ್ಲಡ್ಕ!



ಹಾಲಾಡಿ

● ನಹುಷ

ಕರಾವಳಿಯ ಆರೆಸ್ಸೆಸ್ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟನಿಗೆ ಪ್ರಾಯಶಃ ಸಾರ್ವಜನಿಕವಾಗೇ ಬಿದ್ದಿರುವ ಮೊಟ್ಟ ಮೊದಲು 'ಏಟು' ಇದು! ಸದಾ ತೆರೆಮರೆಯಲ್ಲೇ ಅಡಗಿ ಕುಳಿತು ಊರೂರಿಗೆ ಬೆಂಕಿ ಹಾಕುತ್ತ ಬಿಜೆಪಿಯ ಎಮ್ಮೆಲ್ಲೆ ಎಂಪಿ, ಮಂತ್ರಿಗಳ ಮೇಲೆ ಸವಾರಿ ಮಾಡುತ್ತ ಬೇಳೆ ಬೇಯಿಸಿಕೊಳ್ಳುವ ಕಂತ್ರಿ ಭಟ್ಟನ ಬಣ್ಣವನ್ನು ಬಿಜೆಪಿ-ಸಂಘಪರಿವಾರದ ಶನಿಸಂತಾನವೇ ಬಯಲಾಗಿಸಿದೆ! "ಕೆಸರಿನ ಕಮಲ" ಎಂದೇ ಕುಂದಾಪುರದಲ್ಲಿ ಜನ ಜನಿತವಾಗಿರುವ ಹಾಲಾಡಿ ಶ್ರೀನಿವಾಸ್ ಶೆಟ್ಟಿಗೆ ಮಂತ್ರಿಗಿರಿ ತಪ್ಪಿಸಿದ್ದೇ ಈ ಶೂದ್ರ ವಿರೋಧಿ ಭಟ್ಟನೆಂದು ಬಿಜೆಪಿಗರೇ ಈಗ ಬೀದಿಗಿಳಿದು ಬೊಬ್ಬೆ ಹೊಡೆಯುತ್ತಿದ್ದಾರೆ; ಭಟ್ಟನಿಗೆ ಬಾಯ್ತುಂಬ ಬೈಯ್ಯುತ್ತಿದ್ದಾರೆ, ಉಗುಳುತ್ತಿದ್ದಾರೆ, ಪ್ರತಿಕೃತಿಗೆ ಚಪ್ಪಲಿ ಹಾರಹಾಕಿ ಕೊನೆಗೆ ಹಿಂದೂ ಪದ್ಧತಿಯಂತೆಯೇ ಬೆಂಕಿ ಹಾಕಿ 'ಸಂಸ್ಕಾರ' ಮಾಡುತ್ತಿದ್ದಾರೆ!!


ಪೂಜಾರಿ


ಕಾಲಚಕ್ರ ಅದೆಷ್ಟು ಬೇಗ ಉರುಳಿತು ನೋಡಿ. ಇದೇ ಸಂಘಪರಿವಾರ ರಿಂಗ್‌ಮಾಸ್ಟರ್‌ನ ಚಿತಾವಣೆಗೆ ಮರುಳಾಗಿ ಕೋಮು ಕಿಚ್ಚು ಹಚ್ಚಿದವರು, ಕೇಸರಿ ಬಾವುಟ ಹಿಡಿದು ಕ್ರಿಶ್ಚಿಯನ್-ಮುಸ್ಲಿಮರನ್ನು ಅಟ್ಟಾಡಿಸಿ ಹಿಂಸೋನ್ಮಾದದಿಂದ ಹಾರಾಡಿದವರು, ಹಿಂದೂ ಹೆಣ್ಣಿನ ಮಾನ-ಗೋ ಪ್ರಾಣವೆಂದು ಅನೈತಿಕ ಪೊಲೀಸ್‌ಗಿರಿ ಪ್ರದರ್ಶಿಸಿದವರೇ ಇವತ್ತು ಕುಂದಾಪುರದಲ್ಲಿ ಬಿಜೆಪಿ ಧ್ವಜ ಸುಡುತ್ತಿದ್ದಾರೆ; ಬಿಜೆಪಿಯ ಸಂವಿಧಾನೇತರ ಸುಪ್ರಿಮೋ ಕಲ್ಲಡ್ಕ ಭಟ್ಟನಿಗೆ ನಡುಬೀದಿಯಲ್ಲೇ ನಿಂತು ಧಿಕ್ಕಾರ ಹಾಕುತ್ತಿದ್ದಾರೆ; ದೇವಭಾಷೆ 'ಸಂಸ್ಕೃತದಲ್ಲೇ "ಮಂತ್ರಾಕ್ಷತೆ" ಹಾಕುತ್ತಿದ್ದಾರೆ! ಮಾಡಿದ್ದುಣ್ಣೋ ಮಾರಾಯಾ! ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ "ಚೆಡ್ಡಿ ರಿಪಬ್ಲಿಕ್" ನಡೆಸುತ್ತಿದ್ದ ಭಟ್ಟನ ಅಸಲಿಯತ್ತೀಗ ಜನರಿಗೆ ಅರಿವಾಗುತ್ತಿದೆ.


ಕಟೀಲ್


ಕಲ್ಲಡ್ಕ ಭಟ್ಟನ ಪಾಪದ ಕೊಡ ತುಂಬುವುದಕ್ಕೂ ಕುಂದಾಪುರದ ಸರಳ ಸಂಭಾವಿತ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಮಂತ್ರಿಯಾಗುವ ಭರವಸೆಯಿಂದ ಬೆಂಗಳೂರಿಗೆ ಹೋಗಿ ವಂಚಿತನಾಗಿ ಎರಡು ಹನಿ ಕಣ್ಣೀರು ಸುರಿಸುವುದಕ್ಕೂ ಸರಿಯಾಗಿದೆ. ಈ ಹಾಲಾಡಿ ಶೆಟ್ಟಿ ಒಂದಲ್ಲ ಎರಡಲ್ಲ ಮೂರು ಸಲ ಗೆದ್ದಿರುವ ಜನಪ್ರಿಯ ಶಾಸಕ. ಬಿಜೆಪಿಯ "ಮೂಲಗುಣಧರ್ಮ" ಇಲ್ಲದವ. ಭ್ರಷ್ಟನಲ್ಲ. ಜೊತೆಗೆ ಅಂಥ ಕೆಲಸಗಾರನೂ ಅಲ್ಲ. ಅತೀ ಒಳ್ಳೆಯವ. ಕೆಲಸಕ್ಕೆ ಬಾರದ ಒಳ್ಳೆಯತನದಿಂದ ಕುಂದಾಪುರಕ್ಕೆ ಒಳ್ಳೆಯದಾಗದಿದ್ದರೂ ಕೆಟ್ಟದ್ದು ಆಗಿಲ್ಲ. ಸಂಘಪರಿವಾರಕ್ಕೆ ತನ್ನ ಕ್ಷೇತ್ರದಲ್ಲಿ ಕೆಟ್ಟದು ಮಾಡಲು ಈತ ಬಿಡಲಿಲ್ಲ. ಹಾಗಾಗಿ ಈತನ ಸುತ್ತ ಸಾಬಿಗಳ ದೊಡ್ಡ ದಂಡೇ ನೆರೆದಿರುತ್ತದೆ. ಜಾನುವಾರು, ಸಾಗಾಟಗಾರ ಈಶ್ಯೂನೇ ಇರಲಿ, ಅದು ಕೋಮುಕಲಹವೇ ಇರಲಿ ಅಥವಾ ನೈತಿಕ ಪೊಲೀಸ್‌ಗಿರಿಯೇ ಇರಲಿ ಈ ಅಖಂಡ ಬ್ರಹ್ಮಚಾರಿ ಎಂದೂ ಹಿಂದೂತ್ವದ ನಂಜಿನಿಂದ ಅತೀಕದ ವರ್ತನೆ ತೋರಿಸಿದವರಲ್ಲ.

ಹಾಲಾಡಿ ಕೆಲಸಗಾರನಲ್ಲ, ಧಾಡಸಿಯೂ ಅಲ್ಲ, ತನ್ನ ಕ್ಷೇತ್ರಕ್ಕೆ ಏನು ಬೇಕು-ಏನು ಬೇಡ ಎಂಬುದೂ ಈತನಿಗೆ ಅರ್ಥವಾಗುವುದಿಲ್ಲ. ಹೀಗಾಗಿ ಈ "ಗುಡ್‌ಫಾರ್ ನಥಿಂಗ್" ಮನುಷ್ಯ ಮೂರ್ಮೂರು ಬಾರಿ ಶಾಸಕನಾಗಿದ್ದರೂ ಕುಂದಾಪುರ ಅಂಥ ಅಭಿವೃದ್ಧಿ ಕಾಣಲಿಲ್ಲ. ಹಾಲಾಡಿಯ "ಒಳ್ಳೆಯತನ"ವೇ ಕುಂದಾಪುರಕ್ಕೆ ಶಾಪವಾಗಿತ್ತು, ಯಾರೊಂದಿಗೂ ಆತ ನಿಷ್ಠೂರ ಕಟ್ಟಿಕೊಳ್ಳಲು ಸಿದ್ಧರಿರಲಿಲ್ಲ, ತಪ್ಪು ಮಾಡಿದವರನ್ನೂ ಕ್ಷಮಿಸುತ್ತಿದ್ದರು. ಹೀಗಾಗಿ ಸರ್ಕಾರಿ ಕಚೇರಿಗಳಲ್ಲಿ ಲಂಚಾವತಾರ ಜೋರಾಗಿತ್ತು. ಕಾಮಗಾರಿಗಳಲ್ಲಿ ಪರ್ಸೆಂಟೇಜ್-ಮಾಮೂಲಿಗೆಂದೂ ಕೈಯೊಡ್ಡದ ಹಾಲಾಡಿ ಯಾವ ಕಾಮಗಾರಿ ಉದ್ಘಾಟನೆಗೂ ಹೋಗುತ್ತಿರಲಿಲ್ಲ, ಶಾಸಕನೆಂಬ ಹಮ್ಮು-ಬಿಮ್ಮುಗಳಿಲ್ಲದ ಈತ ಜನಸಾಮಾನ್ಯರೊಂದಿಗೆ ಸದಾ ಬೆರೆತಿರುತ್ತಿದ್ದರು. ಅವರ ತಂಟೆ-ತಕರಾರು ಸರ್ಕಾರಿ ಕಚೇರಿ-ಪೊಲೀಸ್ ಸ್ಟೇಷನ್‌ಗೆ ಹೋಗದಂತೆ ತಾನೇ ರಾಜಿಸಂಧಾನ ನಿಖಾಲಿ ಮಾಡಲು ಪ್ರಯತ್ನಿಸುತ್ತಿದ್ದರು. ಒಟ್ಟನಲ್ಲಿ ಕ್ಷೇತ್ರದಲ್ಲಿ ಈ ಶಾಸಕ "ಪಾಪದ ಪುಢಾರಿ"ಯಂತಿದ್ದರು.

ಹಾಗಂತ ಸ್ವಾಭಿಮಾನ ಬಿಟ್ಟು ಎಂದೂ ಬಿಜೆಪಿ ಅಥವಾ ಸಂಘಪರಿವಾರದ ಸರದಾರರಿಗೆ ಶರಣಾದವರಲ್ಲ ಹಾಲಾಡಿ ಶೆಟ್ರು! ಕರಾವಳಿ ಬಿಜೆಪಿಯ ಸುಪ್ರಿಮೋಗಳಾದ ಕಲ್ಲಡ್ಕ, ಎ.ಜಿ. ಕೊಡ್ಗಿ ಮತ್ತು ದಿವಂಗತ ವಿ.ಎಸ್. ಆಚಾರ್ಯರಿಗೆ ಡೊಗ್ಗುಸಲಾಮು ಹಾಲಾಡಿ ಹಾಕುತ್ತಿರಲಿಲ್ಲ, ಕಾಂಗ್ರೆಸ್‌ನ ಪ್ರತಾಪ್‌ಚಂದ್ರ ಶೆಟ್ಟಿಯನ್ನು ಹಣಿಯಲೆಂದೇ ಆತನದೇ ಜಾತಿ (ಬಂಟ) ಹಾಲಾಡಿಯನ್ನು ರಾಜಕಾರಣಕ್ಕೆ ತಂದಿದ್ದು ಹಿಕಮತ್ತುದಾರ ಕೊಡ್ಗಿ. ಈ ಕೊಡ್ಗಿ ಕಾಂಗ್ರೆಸ್‌ನಲ್ಲಿದ್ದ. ಅಲ್ಲಿ ಬ್ರಾಹ್ಮಣಿಕೆ ಆಟ ಶುರುಹಚ್ಚಿದಾಗ-ಅಧಿಕಾರಕ್ಕಾಗಿ ಯುವಕರೊಂದಿಗೆ ಜಿದ್ದಿಗೆ ಬಿದ್ದಾಗ ಕಿಮ್ಮತ್ತು ಕಳಕೊಂಡು ಬಿಜೆಪಿ ಸೇರಿದ್ದರು. ಕಾಂಗ್ರೆಸ್ ಶಾಸಕ ಪ್ರತಾಪ್ ಮೇಲಿನ ಸೇಡು ತೀರಿಕೆಗೆ ದಾಳವಾಗಿ ಆತ ಬಳಸಿಕೊಂಡಿದ್ದು ಹಾಲಾಡಿಯನ್ನು. ಕೊಡ್ಗಿ ಶಾಸಕ ಹಾಲಾಡಿಯನ್ನು ಪಳಗಿಸಲು ನೋಡಿದರು. ಯಾವುದೇ ಅಧಿಕಾರ-ಸ್ಥಾನ-ಮಾನಕ್ಕೆ ಹಾತೊರೆಯದ ಹಾಲಾಡಿ ಕೊಡ್ಗಿ-ಆಚಾರ್ಯ-ಕಲ್ಲಡ್ಕರೆಂಬ ಸಂಘಪರಿವಾರದ ತ್ರಿಮೂರ್ತಿಗಳಿಗೆ ಸೊಪ್ಪು ಹಾಕಲಿಲ್ಲ.


ಕಲ್ಲಡ್ಕ

ಕೋಮು ವಿದ್ವೇಷದ ಸಂದರ್ಭ, ಜಾನುವಾರು ಸಾಗಾಣಿಕೆ, ಚರ್ಚ್‌ಗಳ ಮೇಲಿನ ದಾಳಿ, ಅನೈತಿಕ ಪೊಲೀಸ್‌ಗಿರಿಯನ್ನೆಲ್ಲ ಪಾರ್ಟಿ ಬೆಳೆಸಲು ಹಾಲಾಡಿ ಸರಿಯಾಗಿ ಬಳಸಿಕೊಳ್ಳುತ್ತಿಲ್ಲ; ಆತ ಪಾರ್ಟಿ ಮೀರಿ ಬೆಳೆಯುತ್ತಿದ್ದಾನೆಂಬ ಅಸಮಾಧಾನ ಕಲ್ಲಡ್ಕರ ಟೀಮಿಗೆ 2002 ರಲ್ಲಿ ಕುಂದಾಪುರದಲ್ಲಿ ನಡೆದ 'ಸೂಜಿ ಪ್ರಕರಣ'ದ ನಂತರ ಶುರುವಾಗಿತ್ತು, ಕೋಮುಗಲಭೆ ದೊಡ್ಡದು ಮಾಡದೆ ಹಾಲಾಡಿ "ಬೆಂಕಿ" ಆರಿಸುತ್ತಿರುವುದು ಅನಾಹುತಕಾರಿ ಕಲ್ಲಡ್ಕ ಭಟ್ಟನಿಗೆ ಸಹಿಸಲು ಸಾಧ್ಯವಾಗಲಿಲ್ಲ, ಅದರಲ್ಲೂ ಶೂದ್ರ (ಬಂಟ)ನೊಬ್ಬ ಬ್ರಾಹ್ಮಣ "ಹೈಕಮಾಂಡ್"ಗೆ ಕೇರ್ ಮಾಡದೇ ಜನನಾಯಕನಾಗುತ್ತಾನೆಂದರೆ ಕಲ್ಲಡ್ಕ-ಕೊಡ್ಗಿ-ಆಚಾರ್ಯ ಹೊಟ್ಟೆಯಲ್ಲಿ ಕಿಚ್ಚು ಬೀಳದೇ ಇನ್ನೇನಾದೀತು? ಹಾಲಾಡಿಯನ್ನು ಹಣಿಯಲು ಕಲ್ಲಡ್ಕ ಹವಣಿಸತೊಡಗಿದ.


ಪ್ರತಿಭಟನಾನಿರತರು...

ಹಿಂದೆ ಮಾಜಿ ಸಂಸದ ಐ.ಎಂ. ಜಯರಾಮ್ ಶೆಟ್ಟಿ, ಶಕುಂತಲಾ ಶೆಟ್ಟಿ, ಮನೋರಮಾ ಮಧ್ವರಾಜ್, ಸದಾನಂದ ಗೌಡರನ್ನು ಒಂದಲ್ಲ ಒಂದು ರೀತಿಯಲ್ಲಿ ಕಾಡಿ ಬಲಿ ಪಡೆದಿದ್ದ ಕಲ್ಲಡ್ಕ-ಕೊಡ್ಗಿ ಹಾಲಾಡಿಯನ್ನು ಮೂಲೆಗುಂಪು ಮಾಡುವುದೇನೂ ದೊಡ್ಡ ಕೆಲಸವಲ್ಲ ಎಂದೇ ಬಗೆದಿದ್ದರು. ಸದಾನಂದ ಗೌಡ ದಿಲ್ಲಿಯಲ್ಲೂ ಆಶ್ರಯದಾತರನ್ನು ಪಡೆದುಕೊಂಡಿರುವುದರಿಂದ ಬಿಜೆಪಿಯಲ್ಲಿ ಬಚಾವಾಗಿ ಉಳಿದಿದ್ದಾರೆ. ಐಎಂಜೆ, ಮನೋರಮಾ, ಶಕುಂತಲಾ ಶೆಟ್ಟಿ ಎಂಬ ಶೂದ್ರರು ಸಾಲು-ಸಾಲಾಗಿ ಕಲ್ಲಡ್ಕನ ಬಲಿಪೀಠಕ್ಕೇರಿ ಹತರಾಗಿ ಹೋಗಿದ್ದಾರೆ. ಇವರನ್ನೆಲ್ಲ ಈ ಚೆಡ್ಡಿ ಚತುರರು ಸುಲಿದ

▶12

ಕಲ್ಲಡ್ಕನ ಜಾತಿ ಕಿತಾಪತಿ!

ಕರಾವಳಿ ಬಿಜೆಪಿಗೆ ಕಂಟಕಕಾರಿಯಾಗಿ ಪರಿಣಮಿಸಿರುವ ಆರೆಸ್ಸೆಸ್ ಅಡ್ನಾಡಿ ಕಲ್ಲಡ್ಕ ಪ್ರಭಾಕರ ಭಟ್ಟನಿಂದ ಸಮಾಜದಲ್ಲಷ್ಟೇ ಅಲ್ಲ ಬಿಜೆಪಿಯಲ್ಲೂ ಜಾತಿ ಸಾಮರಸ್ಯ ಹಾಳಾಗಿಹೋಗಿದೆ. ಒಂದು ಜಾತಿಯ ವಿರುದ್ಧ ಇನ್ನೊಂದು ಜಾತಿ ಎತ್ತಿಕಟ್ಟಿ ಶೂದ್ರರ ಒಡೆದಾಳುವ ಭಟ್ಟನಿಂದಾಗಿ ಬಿಜೆಪಿಯಲ್ಲಿ ಸಾಮಾಜಿಕ ನ್ಯಾಯ ಎಂಬುದೇ ಉಳಿದಿಲ್ಲ. ತನ್ನ ಗುಲಾಮರನ್ನಷ್ಟೇ ಗ್ರಾಪಂ ಸದಸ್ಯರಿಂದ ಪಾರ್ಲಿಮೆಂಟ್ ಮೆಂಬರ್‌ತನಕ ಆಯ್ಕೆ ಮಾಡುವ ಕಲ್ಲಡ್ಕ ತನ್ನ ಪುರೋಹಿತಶಾಹಿ ಪಾಳೆಗಾರಿಕೆ ವಿರುದ್ಧ ಯಾರಾದರೂ ಮಾತಾಡಿದರೆ ಅಂಥವರ ಹೊಸಕಿಹಾಕಿ ಬಿಡುತ್ತಾನೆ. ರಾಜ್ಯ ಬಿಜೆಪಿ ಸೂತ್ರಧಾರರಲ್ಲಿ ಒಬ್ಬನಾಗಿರುವ ಈ ಭಟ್ಟ ತನ್ನ ಪರಮಶತ್ರು ಹಾಲಾಡಿ ಶ್ರೀನಿವಾಸ್ ಶೆಟ್ಟಿಗೆ ಮಂತ್ರಿಗಿರಿ ತಪ್ಪಿಸಿ ವಿಕೃತಾನಂದ ಹೊಂದುತ್ತಿರುವಾಗಲೇ ಬಂಟರ ಪ್ರತಿರೋಧದ ಭಯದಿಂದ ಡ್ಯಾಮೇಜ್ ಕಂಟ್ರೋಲ್‌ಗೆ ಸ್ಕೆಚ್ ಹಾಕಿಬಿಟ್ಟಿದ್ದಾನೆ.

ಹಾಲಾಡಿ ಕರಾವಳಿಯ ಪ್ರಬಲ 'ಬಂಟ' ಜಾತಿಯವರು. ಈ ಸಮುದಾಯ ಲಾಗಾಯ್ತಿನಿಂದಲೂ ಅದ್ಯಾಕೋ ಬಿಜೆಪಿಗೆ ಓಟು ಒತ್ತುತ್ತಲೇ ಬಂದಿದೆ. ಹಾಲಾಡಿ ಎಂಬ ಅಜಾತಶತ್ರುವಾದ "ಜಾತಿವಾನ್"ನನ್ನು ಬ್ರಾಹ್ಮಣ ಕಲ್ಲಡ್ಕ ವಿನಾಕಾರಣ ಬಲಿ ಪಡೆದನೆಂಬ ಭಾವನೆ ಈ ಬಂಟರಲ್ಲಿ ಈಗಾಗಲೇ ನೆಲೆನಿಂತಿದೆ. ದಕ್ಷಿಣ ಕನ್ನಡದ ರಾಜಕೀಯ ನೋಡಿದರೆ ಬಂಟರು-ಬ್ರಾಹ್ಮಣರು ವಿರೋಧಿಗಳೇ. ಹೀಗಿರುವಾಗ ಬಂಟರ ಒಲಿಸಿಕೊಳ್ಳಲು ಕಲ್ಲಡ್ಕ ಭಟ್ಟ ತಿಪ್ಪರಲಾಗ ಹಾಕಬೇಕಾಗಿದೆ. ಅದಕ್ಕೆಂದೇ ಆತ ಒಂದು ಸೂತ್ರ ರೆಡಿ ಮಾಡಿಕೊಂಡಿದ್ದಾನೆ. ಹಾಲಾಡಿಗೆ ಮಾಡಿದ ವಂಚನೆ ಮರೆಮಾಚಲು ತಾನು ಬಂಟ ಶತ್ರು ಅಲ್ಲವೆಂದು ತೋರಿಸಿಕೊಳ್ಳಲು ತನ್ನ ಗುಲಾಮನಂತಿರುವ ಮಂಗಳೂರು ಸಂಸದ ನಳಿನ್‌ಕುಮಾರ್ ಕಟೀಲ್‌ನನ್ನು ರಾಜ್ಯ ಬಿಜೆಪಿ ಅಧ್ಯಕ್ಷನಾಗಿಸಲು ತಂತ್ರಗಾರಿಕೆ ಹೆಣೆದಿದ್ದಾನೆ.

ಅರೆ ಶಿಕ್ಷಿತನಾದ ಈ ನಳಿನ್ ಗ್ರಾಪಂ ಸದಸ್ಯತ್ವಕ್ಕೂ ಅನರ್ಹನಾದ ಆಸಾಮಿ. ಹಿಂದೂ ಸಮಾಜೋತ್ಸವ, ಬ್ರಹ್ಮಕಲಶೋತ್ಸವಗಳನ್ನೆ ಜೀವನೋಪಾಯ-ರಾಜಕೀಯೋಪಾಯ ಮಾಡಿಕೊಂಡು ಧರ್ಮಕಾರಣದ ಮೇಲೆ ಬಂದಾತ. ಹಿಂದೂತ್ವದ ಹೆಸರಲ್ಲಿ ಸಂಗ್ರಹಿಸಿದ ಕಾಣಿಕೆಯ ದೊಡ್ಡಪಾಲು ಗುರು ಭಟ್ಟನ ಪಾದ ಕಮಲಕ್ಕೆ ಭಕ್ತಿಯಿಂದ ಸಮರ್ಪಿಸುವ ಕಟೀಲ್‌ಗೆ ಬಿಜೆಪಿ ಟಿಕೆಟ್ ಒಲಿದಿದ್ದೇ ಈ ಜೀತದಾಳಿನ ಸೇವೆಯಿಂದಾಗಿತ್ತು, ಇಡೀ ದಕ್ಷಿಣ ಕನ್ನಡವನ್ನು ಧರ್ಮ-ಕರ್ಮದ ಆಧಾರದಲ್ಲಿ ಒಡೆದುಹಾಕಿರುವ ಕಲ್ಲಡ್ಕ ಕಟೀಲನಂಥ ಎಂಪಿ-ಎಮ್ಮೆಲ್ಲೆಗಿರಿ ಬೆಳೆ ಬೆಳೆಯುತ್ತಲೇ ಇದ್ದಾರೆ. ಜನಾರ್ದನ ಪೂಜಾರಿಯಂಥ ನಿಷ್ಠೂರ-ನಿಯತ್ತಿನ ಜನಪರ ರಾಜಕಾರಣಿಯನ್ನು ಸೋಲಿಸಿ ಕಟೀಲನಂಥ ಪಡಪೋಸಿ ಗೆಲ್ಲಿಸಿಕೊಂಡಿದ್ದೇ ದಕ್ಷಿಣ ಕನ್ನಡದ ದೊಡ್ಡ ದುರಂತ.

ಈ ಕಟೀಲ್‌ಗೆ ಆರೆಸ್ಸೆಸ್ ವಲಯದಲ್ಲಿ ಬೆಂಬಲ ಕ್ರೋಢೀಕರಿಸಿ ರಾಜ್ಯಾಧ್ಯಕ್ಷನಾಗಿಸಿಕೊಂಡರೆ ಪಾರ್ಟಿ ಮೇಲೂ ಹಿಡಿತವಿರುತ್ತದೆ; ಬಂಟರ ಬೆಂಬಲವೂ ಸಿಗುತ್ತೆ ಎಂಬ ಲೆಕ್ಕಾಚಾರ ಕಂತ್ರಿ ಭಟ್ಟನದು. ಅಕಸ್ಮಾತ್ ಇದಾಗದಿದ್ದರೆ ಬಂಟರ ಸಿಟ್ಟಿಗೆ ಗುರಿಯಾಗಬೇಕಾಗುತ್ತದೆಂದು ಭಟ್ಟ ಇನ್ನೊಂದು ದಾಳ ಉರುಳಿಸಿದ್ದಾನೆ. ವಿ.ಎಸ್. ಆಚಾರ್ಯರ ನಿಧನದಿಂದ ತೆರವಾದ ಎಮ್ಮೆಲ್ಸಿಗಿರಿಗೆ ಮೋನಪ್ಪ ಭಂಡಾರಿ ಎಂಬ ಪಕ್ಕಾ ಚೆಡ್ಡಿ ಪುಢಾರಿಯನ್ನು ಆಯ್ಕೆ ಮಾಡಿದ್ದಾನೆ. ಈತನೂ ಬಂಟ ಭಂಡ.

ಇಂಥ ಜಾತಿ ಕಿತಾಪತಿಯಲ್ಲಿ ನಿಸ್ಸೀಮನಾದ ಭಟ್ಟ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಪ್ರಬಲರಾಗಿರುವ ಬಿಲ್ಲವರ ಮೋಡಿ ಮಾಡಿ ಮಾಜಿ ಫೋಟೋಗ್ರಾಫರ್ ಕೋಟ ಶ್ರೀನಿವಾಸ್ ಪೂಜಾರಿ ಎಂಬ ಮೊದ್ದಣಿಯನ್ನು ಮಂತ್ರಿ ಮಾಡಿಸಿದ್ದಾರೆ. ಈತನಿಗಿಂತ ಸಮರ್ಥರಾದ ಜಿ. ನರಸಿಂಹ ಸ್ವಾಮಿಯಂಥ ಈಡಿಗರನ್ನೆಲ್ಲ ಕಡೆಗಣಿಸಲು ಭಟ್ಟ ಭಂಡವೇ ಕಾರಣ. ಒಟ್ಟನಲ್ಲಿ ಭಟ್ಟ ಅವ್ಯವಹಾರ-ಅವಾಂತರ-ಅನ್ಯಾಯಕ್ಕೆ ಬಿಜೆಪಿ ಶೂದ್ರರು ಒಬ್ಬೊಬ್ಬರಾಗಿ ಬಲಿಯಾಗುತ್ತಿದ್ದಾರೆ.


ಎಮ್ಮೆಲ್ಲೇಸ್ ಜೋಕ್!!

ಅಧಿಕಾರ-ಅಂತಸ್ತು-ಆಸ್ತಿಗಾಗಿ ಸದಾ ಹಪಹಪಿಸುವ ಬಿಜೆಪಿ ಶಾಸಕರು ದುರಾಶೆ ಈಡೇರದಿದ್ದಾಗ ಅಸೆಂಬ್ಲಿ ಸದಸ್ಯತ್ವಕ್ಕೇ ರಾಜೀನಾಮೆ ಕೊಡುವುದಾಗಿ ಬೋಂಗು ಬಿಟ್ಟು ಹಾಸ್ಯಾಸ್ಪದರಾಗೋದು ಮಾಮೂಲಾಗಿ ಹೋಗಿದೆ ಅಲ್ಲವಾ? ಅಂಥದೊಂದು ಜೋಕ್ ಮೊನ್ನೆ ಕಟ್ ಮಾಡಿರುವ ಕರಾವಳಿಯ ಚೆಡ್ಡಿ ಶಾಸಕ-ಶಾಸಕಿಯರು ಜನರನ್ನು ನಗಬಾರದ ಕಡೆಯಿಂದೆಲ್ಲ ನಗಿಸಿಬಿಟ್ಟಿದ್ದಾರೆ.


ಅತ್ತ ಗಾಜಿನ ಮನೆಯಲ್ಲಿ ಸಿಎಂ ಜಗದೀಶ್ ಶೆಟ್ಟರ್ ಮತ್ತವರ ಸಂಪುಟದ ಸದಸ್ಯರು ಮಂತ್ರಿಯಾಗಿ ಪ್ರಮಾಣ ಸ್ವೀಕರಿಸುತ್ತಿದ್ದರು. ಇತ್ತ ಶಾಸಕರ ಭವನದಲ್ಲಿ ಹತಾಶ ಶಾಸಕ ಹಾಲಾಡಿ ಕೊಠಡಿಯಲ್ಲಿ ಸಚಿವ ಸ್ಥಾನ ಸಿಗದ ಕರಾವಳಿಯ ಅತೃಪ್ತ ಪ್ರೇತಾತ್ಮಗಳು ಸಭೆ ಸೇರಿದ್ದವು. "ಸೀನಿಯರ್ ಶಾಸಕ ಹಾಲಾಡಿಗೆ ಮಂತ್ರಿ ಮಾಡದ್ದಕ್ಕೆ ನಮಗೆ ಭಯಂಕರ ಸಿಟ್ಟು ಪಾರ್ಟಿ ಹೈಕಮಾಂಡ್ ಮೇಲೆ ಬಂದಿದೆ. ಹಾಗಾಗಿ ನಾವೆಲ್ಲ ಶಾಸಕಗಿರಿಗೆ ರಾಜೀನಾಮೆ ಕೊಡ್ತೇವೆ...." ಎಂದುಬಿಟ್ಟರು ಈ ಆಸೆಬುರುಕ ಶಾಸಕರು.

ಅಲ್ಲಿ ಸೇರಿದ್ದ ಬೈಂದೂರಿನ ಸಿಡಿಮಿಡಿ ಮುದುಕ ಲಕ್ಷ್ಮೀನಾರಾಯಣ, ಉಡುಪಿಯ ರಂಗೀಲಾ ರಘುಪತಿ ಭಟ್ಟ, ಕಾಪು ಕ್ಷೇತ್ರದ ಹ್ಯಾಪ ಲಾಲಾಜಿ ಮೆಂಡನ್, ಪುತ್ತೂರಿನ ಲೇಡಿ ಚೆಡ್ಡಿ ಮಲ್ಲಿಕಾ ಪ್ರಸಾದ್ ವಗೈರೆಗಳಿಗೆ ಹಾಲಾಡಿ ಬಗ್ಗೆ ಸಿಂಪಥಿಯಾಗಲಿ, ಗೌರವವಾಗಲಿ, ಆತನನ್ನು ಮಂತ್ರಿ ಮಾಡಿ ನ್ಯಾಯ ಒದಗಿಸಬೇಕೆಂಬ ಪ್ರಾಮಾಣಿಕತೆಯಾಗಲೀ ಒಂದೂ ಇರಲಿಲ್ಲ, ಇವರಲ್ಲಿ ಪ್ರತಿಯೊಬ್ಬರೂ ತಾವೇ ಮಂತ್ರಿಯಾಗುವ ಉಮೇದಿಯಲ್ಲಿ ಲೂಟಿಗೆ ಅಣಿಯಾದವರಾಗಿದ್ದರು. ಅಥವಾ ಹಾಲಾಡಿ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿದರೆ ಕನಿಷ್ಠ ಯಾವುದಾದರೂ ಕಾರ್ಪೋರೇಷನ್ ಗೂಟದ ಕಾರಿನ ಭಾಗ್ಯವಾದರೂ ಸಿಗಬಹುದೆಂದು ದೂ(ದು)ರಾಲೋಚನೆ ಹಾಕಿಕೊಂಡ ಕಂತ್ರಿ ಪಿಂಡಗಳಿವು.

ಇವರ ಜೊತೆ ಶೋ ಮಾಡಲಷ್ಟೇ ಸೇರಿಕೊಂಡಿದ್ದ ಕುಂದಾಪುರದವರೇ ಆದ ಹಣಕಾಸು ಆಯೋಗದ ಅಧ್ಯಕ್ಷ ಎ.ಜಿ. ಕೊಡ್ಗಿ ಎಂಬ ಬಿಜೆಪಿ ಭೀಷ್ಮನಿಗೆ ಹಾಲಾಡಿ ಹೊರಹೋದರೆ ಹೋಗಲಿ ಎಂಬ ಇರಾದೆಯೇ ಇತ್ತು, ಆತ ಬಿಜೆಪಿ ಬಿಟ್ಟರೆ ತನ್ನ ಕುಲಪುತ್ರ ಕಿರಣನನ್ನು ಎಮ್ಮೆಲ್ಲೆ ಮಾಡಬಹುದೆಂಬ ಕೊನೆಗಾಲದ ಆಸೆ ಆ ವೃದ್ಧನಿಗೆ! ಇದೆಲ್ಲ ಗೊತ್ತಿದ್ದ ಕರಾವಳಿಯ ಜನ ತಮ್ಮ ಶಾಸಕರು ರಾಜೀನಾಮೆ ಕೊಡುವುದಾಗಿ ಹೇಳಿದಾಗ ಯಾರೂ ನಂಬಲಿಲ್ಲ; ಇದೊಂದು ಕೊಳಕು ಜೋಕ್ ಎಂದು ಜನರು ನಕ್ಕು ಸುಮ್ಮನಾದರು. ಜನ ಈ ಶಾಸಕರ ಯೋಗ್ಯತೆ ಅಳೆದಂತೆಯೇ ಆಗಿದೆ. ಹಾಲಾಡಿ ಬಲಿ ಹಾಕಿದ ಕರಾವಳಿಯ ಬಿಜೆಪಿ ಎಮ್ಮೆಲ್ಲೆಗಳು ಉಳಿದ ಅವಧಿಯಲ್ಲಿ ಸಿಕ್ಕಷ್ಟು ಮೇವು ಜಗಿಯಲು ಹಲ್ಲು ಮಸೆಯುತ್ತಿದ್ದಾರೆ. ಎಂಥ ಬುರ್ನಾಸ್ ಶಾಸಕರಲ್ಲವಾ?



ರಾಜಕೀಯದಲ್ಲೂ ಸುದೀಪ್ ಝಲಕ್?




ಶ್ರೀರಾಮುಲು ನಿರ್ಗಮನದ ನಂತರ ಬಿಜೆಪಿಯಲ್ಲಿ 'ನಾಯಕ ಜನಾಂಗದ' ನಾಯಕನ ಕೊರತೆ ಕಾಣಲಾರಂಭಿಸಿತು. ಆಗ ಬಿಜೆಪಿಯ ವಕ್ರ ಜಾತಿ ಕಣ್ಣಿಗೆ ಬಿದ್ದದ್ದು ಸುದೀಪ್.ಸುದೀಪ್ ಅದೇ ನಾಯಕ ಜನಾಂಗಕ್ಕೆ ಸೇರಿದವರು. ಆದ್ದರಿಂದ ಶ್ರೀರಾಮುಲು ಬದಲಾಗಿ ಸುದೀಪ್‌ನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡರೆ ನಾಯಕ ಜನಾಂಗದವರೆಲ್ಲ ಖುಷ್ ಆಗುತ್ತಾರೆ ಮತ್ತು ತಮ್ಮ ಪಕ್ಷವನ್ನು ಬೆಂಬಲಿಸುತ್ತಾರೆ; ಸುದೀಪ್ ಜೊತೆಗೆ ಕನ್ನಡ ಚಿತ್ರರಂಗದ ಇತರರೂ ಬಿಜೆಪಿಯನ್ನು ಸೇರುತ್ತಾರೆ, ಅವರ ಮೂಲಕವೂ ಪಕ್ಷಕ್ಕೆ ಲಾಭವಾಗುತ್ತದೆ... ಇಂತಹ ದುರಾ ಲೋಚನೆ ಚೆಡ್ಡಿ ನಾಯಕರದ್ದಾಗಿತ್ತು. ಆಗ ಬಿಜೆಪಿಯ ಹಿರಿಯರು ಸುದೀಪ್ ಅವರ ನಾಯಕ ಜನಾಂಗದವರಾದ ಮತ್ತು ಸುದೀಪ್ ಅವರ ಸ್ನೇಹಿತರೂ ಆದ ಮಂತ್ರಿ ರಾಜು ಗೌಡರ ಮುಖಾಂತರ ಸುದೀಪ್‌ನನ್ನು ಬಿಜೆಪಿ ಸೇರುವಂತೆ ಒಲೈಸಲು ಪ್ರಯತ್ನಿಸಿದರು.

"ಸುದೀಪ್ ರಾಜಕೀಯಕ್ಕೆ ಧುಮುಕುತ್ತಾರಂತೆ ...?" ಎಂಬ ಪ್ರಶ್ನೆ ಗಾಂಧಿನಗರದಿಂದ ಕೇಳಿಬರುತ್ತಿದೆ. ...ನ್ನಡ ಚಿತ್ರರಂಗದ ಯಶಸ್ವೀ ಹೀರೋ ಮತ್ತು ...ಶಕರಲ್ಲಿ ಒಬ್ಬರಾದ ಸುದೀಪ್ ರಾಜಕೀಯ ರಂಗವನ್ನು ...ತ್ತಾರೆಂಬ ಗಾಳಿ ಸುದ್ದಿ ಕೇಳಿಬರುತ್ತಿರುವುದು ಇದೇ ...ಲನೇ ಬಾರಿ ಅಲ್ಲ. ಈ ಹಿಂದೆ ಸುದೀಪ್ ನಟಿಸಿದ್ದ ...ಗೌಡ ಚಿತ್ರ ಬಿಡುಗಡೆಯಾಗಿ ಅದು ಬಾಕ್ಸಾಫೀಸ್‌ನಲ್ಲಿ ...ಯಾಗಿ ಪ್ರದರ್ಶನಗೊಳ್ಳುತ್ತಿದ್ದಾಗಲೂ ಇಂತಹದ್ದೇ ...ಗಳು ಕೇಳಿಬಂದಿದ್ದವು. ಇತ್ತೀಚೆಗೆ ಸುದೀಪ್ ...ಮುಸಿರುವ ತೆಲುಗು ಚಿತ್ರ 'ಈಗ' ಬಾಕ್ಸಾಫೀಸ್‌ನಲ್ಲಿ ...ರ್ ಹಿಟ್ ಆಗಿರುವುದರಿಂದ ಮತ್ತೊಮ್ಮೆ ಇಂತಹ ...ಸುಂಟರಗಾಳಿಯಂತೆ ಎಲ್ಲೆಡೆ ಹಬ್ಬುತ್ತಿದೆ. ಆದರೆ ...ಬಾರಿಯೂ ಇಂತಹ ಸುದ್ದಿಗಳನ್ನು ನಯವಾಗಿ ...ಸುತ್ತಾ ಬಂದಿರುವ ಸುದೀಪ್ ಈ ಬಾರಿಯೂ ...ೀತಿ ಪ್ರತಿಕ್ರಿಯಿಸಿದ್ದಾರೆ.

...ದರೆ ಸುದೀಪ್‌ನನ್ನು ಅತ್ಯಂತ ಹತ್ತಿರದಿಂದ ಬಲ್ಲ ... ಸ್ನೇಹಿತರು ಹೇಳುವ ಮಾತೇ ಬೇರೆ.

"ಸುದೀಪ್ ರಾಜಕೀಯಕ್ಕೆ ಇಳಿಯುವುದು ಅಥವಾ ...ವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದು ದೊಡ್ಡ ...ಷಯವೇನಲ್ಲ. ಖಂಡಿತವಾಗಿಯೂ ಆತ ...ನಿಂತರೂ ಗೆದ್ದೇ ಗೆಲ್ಲುತ್ತಾನೆ. ಆದರೆ ...ಪ್ ತಾನೊಬ್ಬನೇ ನಿಂತು ಗೆಲ್ಲುವ ... ತನ್ನ ಜೊತೆ ತನ್ನ ಸ್ನೇಹಿತರನ್ನೂ ...ನಾವಣೆಯಲ್ಲಿ ನಿಲ್ಲಿಸಿ ಅವರನ್ನೆಲ್ಲ ...ಬೇಕೆಂಬ ಆಶೆ ಹೊಂದಿದ್ದಾನೆ. ...ಪ್ ಎಂದೂ ತನ್ನ ವೈಯಕ್ತಿಕ ಹಿತಾಸಕ್ತಿ ... ಮಾತ್ರ ನೋಡುವವನಲ್ಲ. ...ನಿದ್ದರೂ ಸಂಘಜೀವಿ, ಸ್ನೇಹಜೀವಿ. ...ಸ್ನೇಹಿತರನ್ನೆಲ್ಲ ಕಟ್ಟಿಕೊಂಡು ಹೇಗೆ ... ಕ್ರಿಕೆಟ್ ತಂಡವನ್ನು ಕಟ್ಟಿದ್ದಾನೋ, ...ೀತಿ ರಾಜಕೀಯದಲ್ಲೂ ಏಕೆ ಪ್ರಯತ್ನಿಸಬಾರದು ... ಯೋಚನೆ ಸುದೀಪ್‌ನದ್ದು" ಎಂದು ಆತನ ...ರು ಹೇಳುತ್ತಾರೆ.



...ನಿಮಾರಂಗದವರನ್ನು ರಾಜಕಾರಣಿಗಳು ಮತ್ತು ...ೀಯ ಪಕ್ಷಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ...ಯೋಗಿಸಿಕೊಳ್ಳುವುದು, ಚಿತ್ರರಂಗದವರೂ ತಮ್ಮ ...ೀಯ ಸಂಪರ್ಕದಿಂದ ಅಲ್ಪಸ್ವಲ್ಪ ಲಾಭ ಮಾಡಿ ...ವುದು ಹೊಸ ವಿಷಯವೇನಲ್ಲ. ಆದರೆ ಇಂತಹ ...ೀಯ ಆಟಕ್ಕೆ ಸೇರುವವರು ಬಣ್ಣದ ಲೋಕದಲ್ಲಿ ... ಇನ್ನಿಂಗ್ಸ್‌ಅನ್ನು ಮುಗಿಸಿದ ನಟನಟಿಯರು. ಈ ...ಯಲ್ಲಿ ನೋಡಿದರೆ ಸುದೀಪ್ ಸಿನಿಮಾ ಲೋಕದಿಂದ ... ಆಗುವುದಕ್ಕೆ ಇನ್ನೂ ಹಲವಾರು ವರ್ಷಗಳೇ ಬೇಕು. ... ಆತನನ್ನು ಕುರಿತು ಈಗಲೇ ಇಂತಹ ಮಾತುಗಳು ...ಕೇಳಿಬರುತ್ತಿರುವುದಕ್ಕೆ ಕಾರಣ ಇದೆ.


...ದು ಜಾತಿಯನ್ನೇ ಆಧರಿಸಿ ರಾಜಕಾರಣ ಮಾಡುವ ...ಾರಣಿಗಳ ಜಾತಿ ಲೆಕ್ಕಾಚಾರ!

...ಾರತೀಯ ಜನತಾ ಪಕ್ಷದ ಮುಖ್ಯ ಆಧಾರ ...ವಾಗಿದ್ದ 'ಆಪರೇಷನ್ ಕಮಲ' ಎಂಬ ಅನೈತಿಕ ...ೀಯಕ್ಕೆ ಅಕ್ರಮವಾಗಿ ಸಂಪಾದಿಸಿದ್ದ ಹಣವನ್ನು ...ಯೋಗಿಸಿ ಚೆಡ್ಡಿ ಸರ್ಕಾರಕ್ಕೆ 'ಸ್ಥಿರತೆ'ಯನ್ನು ತಂದು ...ದ್ದ ಬಳ್ಳಾರಿಯ ಗಣಿ ಮಾಫಿಯಾದ ಮುಖವಾಡವಾದ ...ರಾಮುಲು ಈಗ ಬಿಜೆಪಿಯನ್ನು ತೊರೆದಿದ್ದಾನೆ. ...ವಲ್ಲ, ಆತ ಈಗ ಹೊಸಪಕ್ಷವನ್ನು ಕಟ್ಟಿದ್ದಾನೆ ಮತ್ತು ...ನ ಚುನಾವಣೆಯಲ್ಲಿ ನಾಲ್ಕೈದು ಜಿಲ್ಲೆಗಳಲ್ಲಿ ಬಿಜೆಪಿ ...ರ್ಥಿಗಳನ್ನೇ ತನ್ನ ಜಾತಿ ಮತ್ತು ಹಣಬಲದಿಂದ ...ಲಿಸಲು ಸಜ್ಜಾಗಿದ್ದಾನೆ. ಹೀಗೆ ಶ್ರೀರಾಮುಲು ...ಮನದ ನಂತರ ಬಿಜೆಪಿಯಲ್ಲಿ 'ನಾಯಕ ಜನಾಂಗದ' ...ಕನ ಕೊರತೆ ಕಾಣಲಾರಂಭಿಸಿತು. ಆಗ ಬಿಜೆಪಿಯ ...ಜಾತಿ ಕಣ್ಣಿಗೆ ಬಿದ್ದದ್ದು ಸುದೀಪ್.

...ಸುದೀಪ್ ಅದೇ ನಾಯಕ ಜನಾಂಗಕ್ಕೆ ಸೇರಿದವರು. ...ರಿಂದ ಶ್ರೀರಾಮುಲು ಬದಲಾಗಿ ಸುದೀಪ್‌ನನ್ನು ... ಪಕ್ಷಕ್ಕೆ ಸೇರಿಸಿಕೊಂಡರೆ ನಾಯಕ ಜನಾಂಗದವರೆಲ್ಲ ಖುಷ್ ಆಗುತ್ತಾರೆ ಮತ್ತು ತಮ್ಮ ಪಕ್ಷವನ್ನು ಬೆಂಬಲಿಸುತ್ತಾರೆ; ಸುದೀಪ್ ಮೂಲಕ ನಾಯಕ ಸಮುದಾಯದ ಜಾತಿಯ ಬಲ, ಶ್ರೀರಾಮುಲುನ ಹಣ ಬಲಕ್ಕೆ ಪರ್ಯಾಯವಾಗಿ ಸುದೀಪನ ಸ್ಟಾರ್ ಬಲ - ಎರಡೂ ಸಿಗುತ್ತದೆ; ಸುದೀಪ್ ಜೊತೆಗೆ ಕನ್ನಡ ಚಿತ್ರರಂಗದ ಇತರರೂ ಬಿಜೆಪಿಯನ್ನು ಸೇರುತ್ತಾರೆ, ಅವರ ಮೂಲಕವೂ ಪಕ್ಷಕ್ಕೆ ಲಾಭವಾಗುತ್ತದೆ... ಇಂತಹ ದುರಾ ಲೋಚನೆ ಚೆಡ್ಡಿ ನಾಯಕರದ್ದಾಗಿತ್ತು. ಆಗ ಬಿಜೆಪಿಯ ಹಿರಿಯರು ಸುದೀಪ್ ಅವರ ನಾಯಕ ಜನಾಂಗದವರಾದ ಮತ್ತು ಸುದೀಪ್ ಅವರ ಸ್ನೇಹಿತರೂ ಆದ ಮಂತ್ರಿ ರಾಜು ಗೌಡರ ಮುಖಾಂತರ ಸುದೀಪ್‌ನನ್ನು ಬಿಜೆಪಿ ಸೇರುವಂತೆ ಒಲೈಸಲು ಪ್ರಯತ್ನಿಸಿದರು.


ಸುಮಾರು ಒಂದು ವರ್ಷದ ಹಿಂದೆ ಬಿಜೆಪಿ ನಾಯಕರು ಸುದೀಪ್‌ಗೆ ಎಂಎಲ್‌ಸಿ ಸ್ಥಾನಮಾನವನ್ನು ನೀಡುವ ಆಮಿಷವನ್ನು ತೋರಿಸಿದರು. ಅದಕ್ಕೆ ಸುದೀಪ್ ಒಪ್ಪಿಕೊಂಡರೆ ಮುಂದಿನ ಚುನಾವಣೆಯಲ್ಲಿ ಆತ ಬಿಜೆಪಿ ಪಕ್ಷದ ಅಭ್ಯರ್ಥಿಗಳ ಪರ ರಾಜ್ಯಾದ್ಯಂತ ಪ್ರಚಾರ ಮಾಡಲು ಬರುತ್ತಾರೆ, ಆಗ ಆತನ ಮೂಲಕ ಯುವಕರ ಮತಗಳನ್ನೂ ಪಡೆಯಬಹುದು ಎಂದು ಲೆಕ್ಕಹಾಕಿದ್ದರು.

ಅದೇ ಸಂದರ್ಭದಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ ಉಪ ಚುನಾವಣೆಗಳು ಎದುರಾದವು. ಕಾಂಗ್ರೆಸ್ ಟಿಕೆಟ್ ಮೇಲೆ ಗೆದ್ದಿದ್ದ ಎಸ್.ವಿ.ರಾಮಚಂದ್ರ ಬಿಜೆಪಿಯ 'ಆಪರೇಶನ್ ಕಮಲ'ಕ್ಕೆ ಬಲಿಯಾಗಿ ಕೈ ಪಕ್ಷಕ್ಕೆ ಕೈಕೊಟ್ಟು ಬಿಜೆಪಿ ಸೇರಿದ್ದ. ಹಿಂದಿನ ಚುನಾವಣೆಯಲ್ಲಿ ರಾಮಚಂದ್ರನ ವಿರುದ್ಧ ಬಿಜೆಪಿಯಿಂದ ಸ್ಪರ್ಧಿಸಿ ಕೇವಲ ಮೂರು ಸಾವಿರ ಓಟುಗಳ ಅಂತರದಿಂದ ಸೋತಿದ್ದ ಎಚ್.ಪಿ.ರಾಜೇಶ್ ಎಂಬಾತ ರೆಬೆಲ್ ಅಭ್ಯರ್ಥಿಯಾಗಿ ಉಪಚುನಾವಣೆಯಲ್ಲಿ ಇದೇ ರಾಮಚಂದ್ರನ ವಿರುದ್ಧ ನಿಂತಿದ್ದ. ಆಗ ರಾಮಚಂದ್ರ ಗೆಲ್ಲುವುದು ಕಷ್ಟ ಎನ್ನುವ ಸನ್ನಿವೇಶ ಎದುರಾಗಿತ್ತು. ಆಗ ಇದೇ ಸುದೀಪ್ ರಾಮಚಂದ್ರನ ಪರವಾಗಿ ಜಗಳೂರಿನ ತುಂಬಾ ಪ್ರಚಾರ ಕೈಗೊಂಡಿದ್ದರು. ಮಾತ್ರವಲ್ಲ, ಸುದೀಪ್‌ನಿಂದಾಗಿ ಅಲ್ಲಿನ ಯುವಕರು ರಾಮಚಂದ್ರನ ಪರವಾಗಿ ವಾಲಿದ್ದು ನಿಜ.



ಆಗ ಸಹಜವಾಗಿಯೇ "ಸದ್ಯದಲ್ಲೇ ಸುದೀಪ್ ಬಿಜೆಪಿ ಸೇರುತ್ತಾರೆ" ಎಂಬ ಮಾತು ಕೇಳಿಬಂದಿತ್ತು. ಇದರ ಬಗ್ಗೆ ಪತ್ರಕರ್ತರು ಸುದೀಪ್‌ನನ್ನು ಕೇಳಿದಾಗ "ನಾನು ಈ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಪರವಾಗಿ ಪ್ರಚಾರ ಮಾಡುತ್ತಿಲ್ಲ, ಬದಲಾಗಿ ನನ್ನ ಸ್ನೇಹಿತರ ಪರವಾಗಿ ಪ್ರಚಾರ ಮಾಡುತ್ತಿದ್ದೇನೆ" ಎಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಉತ್ತರ ಕೊಟ್ಟಿದ್ದರು. "ಅರೆ, ಸುದೀಪ್ ಮತ್ತು ರಾಮಚಂದ್ರ ಯಾವಾಗಿನಿಂದ, ಯಾವ ರೀತಿಯ ಸ್ನೇಹಿತರು?" ಎಂದು ರಾಜಕೀಯ ಮತ್ತು ಸಿನಿಮಾರಂಗದಲ್ಲಿ ಚರ್ಚೆಯಾಗಿದ್ದು ನಿಜ. ಆ ಉಪಚುನಾವಣೆ ಮುಗಿದನಂತರ ರಾಜಕೀಯದತ್ತ ತಿರುಗಿಯೂ ನೋಡದ ಸುದೀಪ್ ಅನಂತರ ತನ್ನ ಸಿನಿಮಾ ಚಟುವಟಿಕೆಗಳಲ್ಲಿ ಮಗ್ನರಾದರು.

ಸಿನಿಮಾರಂಗದಲ್ಲಿ ಯಾವುದೇ ಗಾಡ್ ಫಾದರ್‌ನ ನೆರವಿಲ್ಲದೇ ಚಿತ್ರರಂಗಕ್ಕೆ ಕಾಲಿಟ್ಟ ಸುದೀಪ್ ಇಂದು ತನ್ನ ಪ್ರತಿಭೆಯ ಬಲದಿಂದಲೇ ಹಲವಾರು ಭಾಷೆಯ ಸಿನಿಮಾಗಳಲ್ಲಿ ಹೆಸರು ಗಳಿಸಿದ್ದಾರೆ. ಮಾತ್ರವಲ್ಲ ಇವತ್ತು ಅವರ ವೃತ್ತಿಬದುಕು ಹಿಂದಿಗಿಂತಲೂ ಪ್ರಜ್ವಲಿಸುತ್ತಿದೆ. ಕನ್ನಡ ಮಾತ್ರವಲ್ಲದೆ, ತೆಲುಗು, ತಮಿಳು ಮತ್ತು ಹಿಂದಿ ಚಿತ್ರರಂಗಗಳಲ್ಲೂ ಆತನಿಗೆ ಇವತ್ತು ಬೇಡಿಕೆ ಇದೆ. ಇಂತಹ ಸಂದರ್ಭದಲ್ಲಿ ಸುದೀಪ್ ಯಾಕೆ ಇದನ್ನೆಲ್ಲ ಬಿಟ್ಟು ರಾಜಕೀಯಕ್ಕೆ ಎಂಟ್ರಿ ಕೊಡುತ್ತಾರೆ ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟಿಕೊಳ್ಳುತ್ತದೆ.



ಆದರೆ ಸುದೀಪ್‌ನನ್ನು ಮತ್ತು ರಾಜಕೀಯವನ್ನು ಬಲ್ಲವರ ಲೆಕ್ಕಾಚಾರಗಳೇ ಬೇರೆ. ಅವರು ಹೇಳುವಂತೆ "ನೋಡಿ ಸರ್, ಸುದೀಪ್ 'ಕೆಂಪೇಗೌಡ' ಚಿತ್ರದಲ್ಲಿ ನಟಿಸಿದಾಗಲೇ ಆತನನ್ನು ಒಕ್ಕಲಿಗರು ಮನಸಾರೆ ಕೊಂಡಾಡಿದರು. ಈಗ ಅದೇ ಸುದೀಪ್ "ವರದನಾಯಕ" ಚಿತ್ರದಲ್ಲಿ ನಟಿಸುವ ಮುಖಾಂತರ ತನ್ನ ನಾಯಕ ಜನಾಂಗದವರನ್ನು ಖುಷಿಗೊಳಿಸುತ್ತಿದ್ದಾರೆ. ಅದೇರೀತಿ 'ವೀರ ಮದಕರಿ' ಚಿತ್ರ ಕೂಡ ಸುದೀಪ್‌ಗೆ ಆ ಪ್ರದೇಶದಲ್ಲೆಲ್ಲ ಭಾರೀ ಜನಪ್ರಿಯತೆಯನ್ನು ತಂದುಕೊಟ್ಟಿದೆ. ಸುದೀಪ್ ಪಾಲಿಗೆ ಸದ್ಯಕ್ಕೆ ಇಬ್ಬರು ಗಾಡ್‌ಫಾದರ್‌ಗಳಿದ್ದಾರೆ. ಇಬ್ಬರು ರೆಬೆಲ್ ಸ್ಟಾರ್ ಅಂಬರೀಷ್, ಮತ್ತೊಬ್ಬರು ಕರ್ನಾಟಕ ಬುಲ್ಡೋಜರ್ ಕ್ರಿಕೆಟ್ ತಂಡದ ಮಾಲಿಕ ಅಶೋಕ್ ಖೇಣಿ. ಅಂದರೆ, ಒಂದು ಕಡೆ ಒಕ್ಕಲಿಗ, ಮತ್ತೊಂದು ಕಡೆ ಲಿಂಗಾಯತ, ಇವರಿಬ್ಬರನ್ನು ತನ್ನ ಅಕ್ಕಪಕ್ಕದಲ್ಲಿ ಇಟ್ಟುಕೊಂಡಿರುವ ಸುದೀಪ್ ಸಮಸ್ತ ಕರ್ನಾಟಕಕ್ಕೆ ಸ್ಪಂದಿಸುವ ರೀತಿಯಲ್ಲಿ ರಾಜಕೀಯ ತಂತ್ರಗಾರಿಕೆಯನ್ನು ಹೆಣೆಯುತ್ತಿದ್ದಾರೆ."

ಇದೆಲ್ಲ ಖಂಡಿತವಾಗಿಯೂ ಊಹಾಪೋಹವಾಗಿ ಕಾಣಿಸುತ್ತದೆ, ನಿಜ. ಆದರೆ ಒಂದು ಮಾತಂತೂ ನಿಜ. ಸಿನಿಮಾ ರಂಗದಲ್ಲಿ ಸುದೀಪ್ ಒಂದು ಯುವಕರ ತಂಡವನ್ನು ಕಟ್ಟಿಕೊಂಡು ತನ್ನದೇ ಆದ ಸಾಮ್ರಾಜ್ಯವನ್ನು ಈಗ ಸ್ಥಾಪಿಸಿದ್ದಾರೆ. ಈ ತಂಡದಲ್ಲಿ ಚಿತ್ರರಂಗದ ಅರ್ಧದಷ್ಟು ಯುವ ಕಲಾವಿದರು ಇದ್ದಾರೆ ಎಂಬುದೇ ವಿಶೇಷ. ಈ ಯುವ ಕಲಾವಿದರ ಪಾಲಿಗೆ ಸುದೀಪ್ ಈಗ ಬರೀ ಸ್ನೇಹಿತ ಮಾತ್ರವಲ್ಲ, ಮಾರ್ಗದರ್ಶಕ ಮತ್ತು ಗಾಡ್‌ಫಾದರ್ ಕೂಡ. ತನ್ನ ಸ್ನೇಹಿತರ ಚಿತ್ರದ ಮುಹೂರ್ತಕ್ಕೆ ವಿಶ್ ಮಾಡುವ ಸುದೀಪ್ ಅನಂತರ ಅವರ ಚಿತ್ರದ ಆಡಿಯೋ ಬಿಡುಗಡೆಗೆ ಸಮಾರಂಭದಲ್ಲೂ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರನ್ನು ಬೆಂಬಲಿಸುತ್ತಾರೆ. ಅಷ್ಟೇ ಅಲ್ಲ, ಚಿತ್ರದ ಪ್ರೀಮಿಯರ್ ಷೋಗಳಿಗೆ ಹೋಗುವ ಮುಖಾಂತರ ಸುದೀಪ್ ತನ್ನ ಸ್ನೇಹದ ಸರಪಳಿಯನ್ನು ಗಟ್ಟಿಯಾಗಿಸಿಕೊಂಡಿದ್ದಾರೆ.

ಸುದೀಪ್ ಅವರ ಈ ಸ್ನೇಹಲೋಕ ಕುರಿತು ಒಂದು ಉದಾಹರಣೆಯನ್ನು ಕೊಡಬಹುದು. ಇತ್ತೀಚೆಗೆ ಹಲವು ಯುವನಟರನ್ನು ಒಟ್ಟು ಸೇರಿಸಿ ಬೈಕ್‌ನಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಸುದೀಪ್ ರೇಸ್ ಮಾಡಿದ್ದರು. ಗಂಟೆಗೆ ಸುಮಾರು 100 ಕಿ.ಮೀ ವೇಗದಲ್ಲಿ ಇವರೆಲ್ಲ ರೇಸ್ ಮಾಡಿಕೊಂಡು ಮಡಿಕೇರಿ ತಲುಪಿದ್ದು ಅವರಲ್ಲಿರುವ ಜೀವನೋತ್ಸಾಹ, ಸ್ನೇಹ ಮತ್ತು ಒಗ್ಗಟ್ಟನ್ನು ತೋರಿಸುತ್ತದೆ. ಯಾವುದೇ ಸೆಕ್ಯೂರಿಟಿ ಇಲ್ಲದೆ ಇವರೆಲ್ಲ ಮಾಮೂಲಿ ಮನುಷ್ಯರಂತೆ ರಸ್ತೆಯಲ್ಲಿ ಬೈಕ್ ಓಡಿಸಿ ಮಜಾ ಪಡೆದದ್ದು ಸುದ್ದಿಯೇ ಆಗಲಿಲ್ಲ. ಈ ರೀತಿ ತನ್ನ ಸಹೋದ್ಯೋಗಿಗಳಾದ ದರ್ಶನ್, ತರುಣ್, ಪ್ರವೀಣ್, ತರುಣ್‌ಸುದೀಪ್, ದಿಗಂತ್, ಚಿರಂಜೀವಿ ಸರ್ಜ, ಪ್ರದೀಪ್ ಮೊದಲಾದವರ ಜೊತೆ ಬೈಕ್‌ನಲ್ಲಿ ಹೋಗಿ ರೆಸಾರ್ಟ್‌ಗಳಲ್ಲಿ ವಿಶ್ರಮಿಸುವುದು ಸುದೀಪ್‌ನ ಇತ್ತೀಚಿನ ಹವ್ಯಾಸವಾಗಿದೆ.

ಹಾಗೆಯೇ ತಾನು ಖಳನಾಯಕನಾಗಿ ನಟಿಸಿರುವ 'ಈಗ' ಚಿತ್ರದ ಪ್ರೀಮಿಯರ್ ಷೋಗೆ ತನ್ನ ಎಲ್ಲ ಕ್ರಿಕೆಟ್ ಸ್ನೇಹಿತರನ್ನು ಸುದೀಪ್ ವಿಶೇಷ ವಿಮಾನದಲ್ಲಿ ಹೈದರಾಬಾದ್‌ಗೆ ಕರೆದುಕೊಂಡು ಹೋಗಿ ಆತಿಥ್ಯವನ್ನು ನೀಡಿದ್ದರು. ಹೀಗೆ ತನ್ನದೇ ಆದ ತಂಡ ಕಟ್ಟಿಕೊಂಡು ಎಲ್ಲರ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಪಡೆದಿರುವ ಸುದೀಪ್ ಮುಂದಿನ ಚುನಾವಣೆ ಸಂದರ್ಭದಲ್ಲಿ ರಾಜಕೀಯಕ್ಕೆ ಧುಮುಕಬಹುದು ಎಂಬುದು ಕೆಲವರ ಲೆಕ್ಕಾಚಾರ.

ಅದೆಲ್ಲ ಆಗುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಒಂದು ಮಾತಂತೂ ನಿಜ. ಬಿಜೆಪಿ ಸಮೇತ ಎಲ್ಲ ರಾಜಕೀಯ ಪಕ್ಷಗಳ ನೇತಾರರು ಸುದೀಪ್ ಎಂಬ ಗೆಲ್ಲುವ ಕುದುರೆಯನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ತೆರೆಮರೆಯಲ್ಲಿ ಭಗೀರಥ ಪ್ರಯತ್ನವನ್ನು ಮಾಡುತ್ತಲೇ ಇದ್ದಾರೆ. ಸಿನಿಮಾದಲ್ಲಿ ಹಣ, ಖ್ಯಾತಿ, ಜನಪ್ರಿಯತೆಯನ್ನು ಗಳಿಸಿದ ನಂತರ ಹೆಚ್ಚಿನ ನಟ-ನಟಿಯರು ರಾಜಕೀಯದತ್ತ ಮುಖಮಾಡುವುದು ಸರ್ವೇಸಾಮಾನ್ಯ. ಅದರಲ್ಲೂ ರಾಜಕೀಯ ಕುಟುಂಬದ ಹಿನ್ನೆಲೆಯಿರುವ ಸುದೀಪ್ ಖಂಡಿತವಾಗಿಯೂ ಯಾವುದೇ ರಾಜಕೀಯ ಪಕ್ಷ ಇಷ್ಟಪಡುವ ವ್ಯಕ್ತಿ ಮತ್ತು ನಟನಾಗಿ ಬೆಳೆದು ನಿಂತಿದ್ದಾರೆ.

ಸುದೀಪ್ ಅವರ ಅಂಕಲ್ ಸರೋವರ ಶ್ರೀನಿವಾಸ್ ಈಗಾಗಲೇ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿರುವವರು. ಹಾಗೆಯೇ ಸುದೀಪ್‌ರವರ ತಂದೆ ಸರೋವರ್ ಸಂಜೀವ್ ಕೂಡ ಒಂದು ಕಾಲದಲ್ಲಿ ಎಲ್ಲ ರಾಜಕಾರಣಿಗಳನ್ನು ಅತ್ಯಂತ ಹತ್ತಿರದಿಂದ ಬಲ್ಲವರಾಗಿದ್ದರು. ಶ್ರೀನಿವಾಸ್ ಮತ್ತು ಸಂಜೀವ್ ಮಾಲೀಕತ್ವದ ಹೋಟೆಲ್ 'ಸರೋವರ್' ಬಹುತೇಕ ರಾಜಕಾರಣಿಗಳ ಅಡ್ಡೆ ಆಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಎಲ್ಲ ಕಾರಣಗಳಿಂದಾಗಿ ಬಹುತೇಕ ಎಲ್ಲ ರಾಜಕೀಯ ಪಕ್ಷಗಳಲ್ಲೂ ಸುದೀಪ್‌ಗೆ ಸ್ನೇಹಿತರಿದ್ದಾರೆ, ಹಿತೈಷಿಗಳಿದ್ದಾರೆ.

ಸಿನಿಮಾ ಲೋಕ ಮನರಂಜನೆಗೆ ಸೀಮಿತವಾಗಿರುವ ಜಗತ್ತು. ಆದರೆ ರಾಜಕೀಯ ಎಂಬುದು ಅಧಿಕಾರವನ್ನು ತಂದುಕೊಡುವ ಲೋಕ. ಆದ್ದರಿಂದಲೇ ಅದರ ಆಕರ್ಷಣೆಗೆ ಬಲಿಯಾಗದಿರುವವರು ತುಂಬಾ ವಿರಳ. ಸುದೀಪ್ ಸದ್ಯಕ್ಕೆ ರಾಜಕೀಯದಿಂದ ದೂರ ಇರುವಂತೆ ವರ್ತಿಸುತ್ತಿದ್ದರೂ ಮುಂದೆಯೂ ಅವರು ಹೀಗೆ ಇರುತ್ತಾರೆಂದು ಹೇಳಲಾಗುವುದಿಲ್ಲ. ಆದ್ದರಿಂದ ಚಿತ್ರರಂಗದ ಈ 'ಕೆಂಪೇಗೌಡ' ಮತ್ತು 'ವರದನಾಯಕ' ಬೆಳ್ಳಿತೆರೆಯಿಂದ ಹೊರಬಂದು ತನ್ನ ಸಾಮ್ರಾಜ್ಯವನ್ನು ರಾಜಕೀಯದತ್ತ ವಿಸ್ತರಿಸುತ್ತಾರೋ ಇಲ್ಲವೋ ನೋಡೋಣ.

ಸದಾಶಿವ ಶೆಣೈ



ಸುವರ್ಣ ಟಿವಿಯ ರಿಯಾಲಿಟಿ ಶೋ...



ರಾಜೇಶನ ಮನೆ... ಡಿಶ್‌ಟಿವಿ ಅಳವಡಿಸಿರುವುದು...



ಮನೆಯೊಳಗೆ ಹೊಸದಾಗಿ ಕೊಂಡ ಪಲ್ಸರ್ ಬೈಕ್, ಜನರೇಟರ್... ಇತ್ಯಾದಿ

ಹಳ್ಳಿ ಹೈದ ಪ್ಯಾಟೆಗೆ ಬಂದ.... ಆಮೇಲೆ ಹುಚ್ಚನಾದ



ಕಳೆದ ವಾರ ಮಾಧ್ಯಮದ ದೊರೆಗಳು ನಾಗರಹೊಳೆ ಅಭಯಾರಣ್ಯದ ವ್ಯಾಪ್ತಿಯ ಬಳ್ಳೆಹಾಡಿ ಎಂಬ ಜೇನುಕುರುಬರ ಹಾಡಿಗೆ ತಮ್ಮತಮ್ಮ ವರದಿಗಾರರನ್ನು ಕ್ಯಾಮರಾಗಳ ಸಮೇತ ಅಟ್ಟಿದರು. ಏನಾಶ್ಚರ್ಯ!!? ಸದಾ ಥಳುಕು ಬಳುಕುಗಳನ್ನೇ ಹಾಸಿಹೊದೆಯುವ ಮಂದಿಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿ ಆದಿವಾಸಿಗಳ ಹಾಡಿ ನೆನಪಾಗಿಬಿಟ್ಟಿದೆಯಲ್ಲಾ? ಜನಪರ ಪತ್ರಕರ್ತರಾದ ಸಾಯಿನಾಥ್ ಮೊನ್ನೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಮಾಧ್ಯಮಗಳ ಭ್ರಷ್ಟಾಚಾರ, ಪತ್ರಕರ್ತರ ಸೋಗಲಾಡಿತನದ ಬಗ್ಗೆ ಛೀಮಾರಿ ಹಾಕಿದ್ದರ ಪರಿಣಾಮವಾಗಿ ಈ ಕ್ಯಾಮರಾಗಳು ಕಾಡುಹಾದಿಯಲ್ಲಿ ಹೊರಟುಬಿಟ್ಟವೆ? ಈ ಗುಟ್ಟು ಏನಿರಬಹುದು?

ಆದರೆ ಅಂಥಾದ್ದೇನೂ ಇರಲಿಲ್ಲ. ಅವರೆಲ್ಲಾ ಒಬ್ಬ ಮಾನಸಿಕ ಅಸ್ವಸ್ಥನನ್ನು ಹುಡುಕಿ ಹೊರಟಿದ್ದರಷ್ಟೆ. ಅರೆ...! ಬೆಂಗಳೂರಿನಲ್ಲೇ ರಾಶಿರಾಶಿ ಹುಚ್ಚರು ಬಿದ್ದಿರುವಾಗ ಅಷ್ಟು ದೂರ ಹೋಗಲಿಕ್ಕೆ ಇವರಿಗೇನು ಹುಚ್ಚಾ? ಎಂದು ಯಾರಾದರೂ ಪ್ರಶ್ನಿಸಬಹುದು. ಆದರೆ ಇಲ್ಲೇ ಇರುವುದು ಒಳಗುಟ್ಟು. ಅವರು ಹುಡುಕಿ ಹೊರಟಿದ್ದು ಮಾಮೂಲಿ ಹುಚ್ಚನಿಗಾಗಿ ಅಲ್ಲ; ತಾವೇ ಸೃಷ್ಟಿಸಿದ ಒಬ್ಬ ವಿಶೇಷ ಹುಚ್ಚನಿಗಾಗಿ! ಆ ಅಮಾಯಕ ಬಲಿಪಶುವನ್ನು ಮತ್ತೆ ತಮ್ಮ ಚಾನೆಲ್‌ಗಳಲ್ಲಿ ತೋರಿಸಿ ಟಿಆರ್‌ಪಿ ಹೆಚ್ಚಿಸಿಕೊಳ್ಳಲಿಕ್ಕಾಗಿ!

ಹೌದು ನಿಜ. ಇದು ಸುವರ್ಣ ಚಾನೆಲ್‌ನಲ್ಲಿ ಪ್ರಸಾರ ವಾದ "ಹಳ್ಳಿ ಹೈದ ಪ್ಯಾಟೆಗ್ ಬಂದ" ಎಂಬ ರಿಯಾಲಿಟಿ ಶೋ ಒಂದರಲ್ಲಿ ಭಾಗವಹಿಸಿ ವಿಜಯಶಾಲಿಯಾದ ಆದಿವಾಸಿ ಜೇನು ಕುರುಬ ಜನಾಂಗಕ್ಕೆ ಸೇರಿದ ರಾಜೇಶ್ ಎಂಬ 23 ವರ್ಷ ವಯಸ್ಸಿನ ಅಮಾಯಕನ ಕತೆ. ನಾಗರಿಕತೆಯ 'ಪರಾಕಾಷ್ಠೆ'ಯನ್ನು ತಲುಪಿರುವ ಮಾಧ್ಯಮಗಳು ತಮ್ಮ ದುರ್ಲಾಭಕ್ಕಾಗಿ ಅತ್ಯಂತ ಮುಗ್ಧ ಯುವಕನನ್ನು ಮಾನಸಿಕ ಅಸ್ವಸ್ಥನನ್ನಾಗಿಸಿದ ದುರಂತ ಕತೆಯಿದು. ಈತ ರಿಯಾಲಿಟಿ ಶೋ ನಂತರ ಜಂಗಲ್ ಜಾಕಿ ಎಂಬ ಇನ್ನೂ ಬಿಡುಗಡೆಯಾಗದ ಚಿತ್ರವೊಂದರ ಹೀರೋ ಕೂಡ ಆಗಿದ್ದಾನೆ. ಈಗ ಹಾಲಿ ಮೈಸೂರಿನ ಕೆ.ಆರ್.ಆಸ್ಪತ್ರೆಯ ಮಾನಸಿಕ ರೋಗಿಗಳ ವಾರ್ಡ್‌ನ ಹಾಸಿಗೆಯ ಮೇಲೆ ಬಿದ್ದುಕೊಂಡು ಆಕಾಶ ದಿಟ್ಟಿಸುತ್ತಿದ್ದಾನೆ.

ಈ ದುರಂತ ಕತೆಯ ಹಿನ್ನೆಲೆ ಸಾಕಷ್ಟು ಕುತೂಹಲಕಾರಿಯಾದುದು.

"ಹಳ್ಳಿ ಹೈದ ಪ್ಯಾಟೆಗ್ ಬಂದ" ಕಾರ್ಯಕ್ರಮಕ್ಕೆ ಮೊದಲೇ ಇದೇ ಚಾನೆಲ್‌ನವರು ಸಿನಿಮಾಗಳ ಗುಂಪು ನೃತ್ಯಗಳಲ್ಲಿ ಅರೆಬೆತ್ತಲೆಯಾಗಿ ಕುಣಿಯುವ ಕೆಲವು ನಟಿಯರನ್ನು ಕರೆತಂದು ಅವರಿಗೆ ಮೊರಿಂಚು ಉದ್ದದ ಬಟ್ಟೆ ತೊಡಿಸಿ ಹಳ್ಳಿಗಳಿಗೆ ಕರೆದೊಯ್ದು "ಪ್ಯಾಟೆ ಹುಡ್ಗೀರ್ ಹಳ್ಳಿಗ್ ಬಂದ್ರು" ಎಂಬ ಶೋ ಒಂದನ್ನು ತಯಾರಿಸಿ ಲಾಭ ಬಾಚಿದ್ದರು. ಬಂದ ಲಾಭದಿಂದ ಉತ್ತೇಜಿತರಾದ ಸುವರ್ಣ ಚಾನೆಲ್‌ನವರು ಅಂಥದೇ ಮತ್ತೊಂದು ಕಾರ್ಯಕ್ರಮದ ತಲಾಷೆಯಲ್ಲಿದ್ದಾಗ ಹೊಳೆದದ್ದೇ ಈ "ಹಳ್ಳಿ ಹೈದ ಪ್ಯಾಟೆಗ್ ಬಂದ" ಎಂಬ ಕಾನ್ಸೆಪ್ಟ್. ಕಾಡಿನ ಮೂಲೆಯಲ್ಲಿರುವ ಅಮಾಯಕ ಗಿರಿಜನ ಹುಡುಗರನ್ನು ಕರೆತಂದು ಅವರಿಗೆ ಸಿಟಿ ಲೈಫನ್ನು ಕಲಿಸಿ "ನಾಗರಿಕರನ್ನಾಗಿಸುವುದು" ಕಾರ್ಯಕ್ರಮದ ತಿರುಳೆಂದು ಸಾರಲಾಯಿತು. ಆದರೆ ಥಳುಕಿನ ಪ್ರದರ್ಶನದ ಮೂಲಕ ಹಳ್ಳಿ ಹೈದರನ್ನು ಇಕ್ಕಟ್ಟಿಗೆ ಸಿಲುಕಿಸಿ, ಹೀಯಾಳಿಸಿ ಪ್ರಚಾರ ಗಿಟ್ಟಿಸುವುದು ಅಸಲೀ ಹಕೀಕತ್ತು!

ಸುವರ್ಣದ ಬುದ್ಧಿವಂತರಿಗೆ ಈ ಐಡಿಯಾ ಹೊಳೆದದ್ದೇ ತಡ, ಕರ್ನಾಟಕದ ಬುಡಕಟ್ಟು ಜನಾಂಗಗಳಾದ ಜೇನುಕುರುಬ, ಸೋಲಿಗ, ಸಿದ್ದಿ ಮುಂತಾದ ಜನಾಂಗಗಳಿಂದ ಯುವಕರನ್ನು ಹುಸಲಾಯಿಸಿ ಕರೆತಂದರು. ಈ ಹಳ್ಳಿ ಹೈದರಿಗೆ ನಾಗರಿಕತೆ ಕಲಿಸಲು ಪ್ರತಿಯೊಬ್ಬ ಆದಿವಾಸಿ ಹುಡುಗನಿಗೆ ಒಬ್ಬಳು ಪ್ಯಾಟೆ ಹುಡುಗಿಯನ್ನು ನೇಮಿಸಲಾಯಿತು.

ಆ ನಂತರ ನಡೆದದ್ದೆಲ್ಲಾ ನಾಗರಿಕತೆಯ ಹೆಸರಿನಲ್ಲಿ ವಿಕೃತಿಯ ಪ್ರದರ್ಶನ ಮಾತ್ರ. ಈ ಮುಗ್ಧ ಹುಡುಗರಿಗೆ ಏರ್ಪಡಿಸಿದ್ದ ಸ್ಪರ್ಧೆಯ ಕೆಲವು ಸ್ಯಾಂಪಲ್‌ಗಳನ್ನು ನೋಡಿ. ಥಳಕುಬಳುಕಿನ ಬ್ರಿಗೇಡ್ ರೋಡ್‌ಗೆ ಕರೆತಂದು ದಾರಿಯಲ್ಲಿ ಹೋಗುವ ಅಪರಿಚಿತ ಹುಡುಗಿಯರ ಮೊಬೈಲ್ ನಂಬರ್ ಕೇಳಿ ಪಡೆದು ಕೊಳ್ಳಲು ಹಚ್ಚಿದರು. ಈ ಅವಾಂತರದ ಪರಿಣಾಮ ಏನಾಯ್ತು ಗೊತ್ತೆ? ಇದ್ದಕ್ಕಿದ್ದಂತೆ ಮೊಬೈಲ್ ನಂಬರ್ ಕೇಳುವ ವಿಚಿತ್ರ ನಡವಳಿಕೆಯ ಆಗಂತುಕನನ್ನು ಕಂಡು ಕೆರಳಿದ ಹುಡುಗಿಯರು ಈ ಮುಗ್ಧರಿಗೆ ಬಾಯಿಗೆ ಬಂದಂತೆ ಬೈಯುತ್ತಾರೆ; ಕೆಲವರು ಕಾಲಿನಲ್ಲಿರುವ ಕೆರ ಕೈಗೆ ತೆಗೆದುಕೊಂಡಿದ್ದೂ ಆಯಿತು; ಇಂಥಾ ವಿಪರೀತಗಳನ್ನು ನಿರೀಕ್ಷಿಸಿರದಿದ್ದ ಹುಡುಗರು ಇಂಥಾ ಸ್ಪರ್ಧೆಯ ಸಹವಾಸವೇ ನಮಗೆ ಬೇಡ ಎಂದು ಕೈಮುಗಿದರೂ ಚಾನೆಲ್‌ನವರು ಹಚ್ಚಿಕೊಟ್ಟಿದ್ದ ನಾಗರಿಕ ಹುಡುಗಿ ಮಾತ್ರ ಎಳ್ಳಷ್ಟೂ ಜಗ್ಗುವುದಿಲ್ಲ, ಆ ಮುಗ್ಧನ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಲೇ ಹೋಗುತ್ತಾಳೆ. ಈ ಎಲ್ಲದರಿಂದ ಮಾನಸಿಕ ಸ್ಥಿಮಿತ ಕಳೆದುಕೊಳ್ಳುವ ಹಳ್ಳಿ ಹೈದ ಪ್ಯಾಟೆ ಹುಡ್ಗಿಯ ಮೇಲೆ ಕೈ ಮಾಡಲು ಮುಂದಾಗುತ್ತಾನೆ. ಈ ಎಲ್ಲಾ ಅವಾಂತರಗಳ ಹಸಿಹಸಿ ಪ್ರಸಾರವನ್ನು ನಾಡಿನಾದ್ಯಂತ ಲಕ್ಷಾಂತರ ಮಂದಿ ವೀಕ್ಷಿಸಿ ತಮ್ಮ ಮನರಂಜನೆಯ ತೆವಲು ತೀರಿಸಿಕೊಂಡರು.

ಇದು ಇಷ್ಟಕ್ಕೇ ಮುಗಿಯುವುದಿಲ್ಲ. ಮತ್ತೊಂದು ಸ್ಪರ್ಧೆ ಹೇಗಿದೆ ನೋಡಿ. ಇಲ್ಲಿ ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳಿಗೂ ಒತ್ತಾಯಪೂರ್ವಕವಾಗಿ ಹೊಟ್ಟೆಬಿರಿಯುವಂತೆ ತಿನ್ನಿಸಿಬಿಡುತ್ತಾರೆ. ಅದರ ಜೊತೆಗೆ ಭೇದಿ ಮಾತ್ರೆಯನ್ನೂ ಸೇರಿಸಿರುತ್ತಾರೆ. ಪರಿಣಾಮವಾಗಿ ಒತ್ತರಿಸಿ ಬರುವ ಶೌಚವನ್ನು ಯಾರು ಹೆಚ್ಚು ತಡೆದುಕೊಳ್ಳುತ್ತಾರೋ ಅವರು ಈ ಟಾಸ್ಕ್ ಗೆದ್ದಂತೆ. ಹಾಗೆ ಮತ್ತೊಂದು ಸ್ಪರ್ಧೆಯಲ್ಲಿ ಬಾಳೆಹಣ್ಣಿನ ಜ್ಯೂಸನ್ನು ಕಂಠಪೂರ್ತಿ ಕುಡಿಸಿ



'ಜಂಗಲ್ ಜಾಕಿ' ಸಿನಿಮಾದಲ್ಲಿ

ಜೇನುಕುರುಬರ ಹಾಡು

'ಜೇನು ಕುರುಬರು ನಾವು; ಕಾಡಿನ ಒಡೆಯರು ನಾವು' ಎಂಬ ಹಾಡೊಂದು ಜೇನುಕುರುಬರಲ್ಲಿ ಅತ್ಯಂತ ಪ್ರಚಲಿತವಾಗಿದೆ. ಆದರೆ ಅವರ ಪರಿಸ್ಥಿತಿ ಮಾತ್ರ ದಿನದಿಂದ ದಿನಕ್ಕೆ ಮತ್ತಷ್ಟು ಶೋಚನೀಯಸ್ಥಿತಿ ತಲುಪುತ್ತಿದೆ. ಹಾಗೆ ನೋಡಿದರೆ ಸ್ವಾತಂತ್ರ್ಯ ಬಂದ ನಂತರ ಈ ಜನರ ಬದುಕು ಪದೇಪದೇ ದಾಳಿಗೊಳಗಾಗುತ್ತಿರುವುದು ನಿಜಕ್ಕೂ ವಿಪರ್ಯಾಸ.

ಈ ಹಿಂದೆ ಯಥೇಚ್ಛವಾಗಿ ಕಾಡು ಇದ್ದುದರಿಂದ ಈ ಜನರಿಗೆ ಹೊರಜಗತ್ತಿನ ಅಗತ್ಯವೇ ಬೀಳುತ್ತಿರಲಿಲ್ಲ. ಅರಣ್ಯ ಇಲಾಖೆ ಯಾವಾಗ ಇಲ್ಲಿ ಪ್ರವೇಶವಾಯಿತೋ ಅಂದಿನಿಂದ ಒಂದುಕಡೆ ಅರಣ್ಯ ನಾಶ ಮತ್ತೊಂದು ಕಡೆ ಅರಣ್ಯವಾಸಿಗಳ ನಾಶ ಅರ್ಥಾತ್ ಜೇನುಕುರುಬರಂಥಾ ಬುಡಕಟ್ಟುಗಳ ನಾಶ ಅವ್ಯಾಹತವಾಗಿ ಸಾಗಿದೆ. ಟಿಂಬರ್ ಕಳ್ಳರು ಮಾತ್ರವಲ್ಲದೆ ನಾನಾ ಯೋಜನೆಗಳ ಹೆಸರಿನಲ್ಲಿ ಸಾವಿರಾರು ಎಕರೆ ಕಾಡನ್ನು ಬೋಳಿಸಿ ನುಣ್ಣಗೆ ಮಾಡಲಾಗಿದೆ. ಜೊತೆಗೆ ಕಬಿನಿ, ನುಗು ಮುಂತಾದ ಅಣೆಕಟ್ಟುಗಳಿಗಾಗಿಯೂ ಕಾಡು ಕಡಿದು, ಆದಿವಾಸಿಗಳನ್ನು ಕ್ರಮೇಣ ಕಾಡಿನಿಂದ ಹೊರಹಾಕಿದ್ದಾರೆ. ಹೀಗೆ ಪದೇಪದೇ ತಮ್ಮ ಪರಂಪರಾಗತ ನೆಲೆಗಳಿಂದ ಎತ್ತಂಗಡಿಯಾದ ಆದಿವಾಸಿಗಳು ಕಾಯಿಲೆಕಸಾಲೆಗಳಿಗೆ ತುತ್ತಾಗಿ ಅವರ ಜನಸಂಖ್ಯೆ ಕ್ಷೀಣಿಸುತ್ತಾ ಬಂದಿದೆ. ಈಗ ಹಾಲಿ ಬಂಡಿಪುರ ನಾಗರಹೊಳೆ ಅರಣ್ಯ ಪ್ರದೇಶದಲ್ಲಿ 119 ಹಾಡಿಗಳನ್ನು ಗುರುತಿಸಲಾಗಿದ್ದರೂ ಇದುವರೆಗೆ ಅವರಿಗೆ ಯಾವುದೇ ಸವಲತ್ತುಗಳನ್ನೂ ನೀಡಿಲ್ಲ. ಕನಿಷ್ಠ ರೇಷನ್ ಕಾರ್ಡ್ ಪಡೆದುಕೊಳ್ಳಲು ಹೋರಾಟ ಮಾಡಬೇಕಾದ ದುಸ್ಥಿತಿಯಲ್ಲಿದ್ದಾರೆ.



ಇಷ್ಟು ಸಾಲದೆಂಬಂತೆ ಅರಣ್ಯ ಇಲಾಖೆಯವರ ಕಿರುಕುಳ ಮತ್ತೊಂದು ದೊಡ್ಡ ಸಮಸ್ಯೆ. ಟಿಂಬರ್ ಕಳ್ಳರೊಂದಿಗೆ ಮೋಜಿನ ಪಾರ್ಟಿ ನಡೆಸುವ ಅಧಿಕಾರಿಗಳು ಕೇಸು ಹಾಕುವುದು ಮಾತ್ರ ಆದಿವಾಸಿಗಳ ಮೇಲೆ. ಕೋರ್ಟಿನಲ್ಲಿ ಜಾಮೀನು ಸಿಗಬೇಕಾದರೆ ಪಟ್ಟಾ ಇರುವ ಭೂಮಿಯಿರಬೇಕು ಇಲ್ಲವೇ ದೊಡ್ಡ ಮೊತ್ತವನ್ನು ಡಿಪಾಸಿಟ್ ಮಾಡಬೇಕು. ಇಷ್ಟು ವರ್ಷಗಳಾದರೂ ಅವರಿಗೆ ಇನ್ನೂ ಒಂದು ಗುಂಟೆ ಭೂಮಿಯ ಒಡೆತನ ಸಿಕ್ಕಿಲ್ಲ. ಹೀಗೆ ಅಡಕತ್ತರಿಯಲ್ಲಿ ಸಿಲುಕಿರುವ ಆದಿವಾಸಿಗಳು ವಿಧಿಯಿಲ್ಲದೆ ಸುತ್ತಮುತ್ತಲ ಗೌಡರನ್ನು ಆಶ್ರಯಿಸಬೇಕಾದ ಸ್ಥಿತಿ. ಜನಪರ ಕಾಳಜಿಯ ಕೆಲವು ಜಡ್ಜ್‌ಗಳು ಆದಿವಾಸಿಗಳ ಪರ ತೀರ್ಪು ನೀಡಿದ್ದರೂ ಅದನ್ನು ಜಾರಿಗೊಳಿಸದೆ ಅಧಿಕಾರಿಗಳು ಅಡ್ಡಗಾಲಾಕುತ್ತಿರುವುದು ಇಂದಿನ ವಾಸ್ತವ.

ಅಂದಹಾಗೆ ಆದಿವಾಸಿಗಳಿಗೆ ಅರಣ್ಯದ ಬಗ್ಗೆ ಅಪಾರವಾದ ಜ್ಞಾನವಿದೆ. ಅಷ್ಟು ಮಾತ್ರವಲ್ಲ, ಅರಣ್ಯಕ್ಕೂ ಇವರಿಗೂ ಇರುವ ಸಂಬಂಧ ನೀರು ಮತ್ತು ನೀರಿನಂತದ್ದು. ಉದಾಹರಣೆಗೆ ಆನೆಗಳನ್ನು ಪಳಗಿಸುವ ವಿದ್ಯೆ ಈ ಜನರಿಗೆ ಕರಗತವಾಗಿದೆ. ಈಗಲೂ ಇವರಲ್ಲಿ ನೂರಾರು ಮಂದಿ ಮಾವುತರಾಗಿ ದುಡಿಯುತ್ತಿದ್ದಾರೆ. ಆದರೆ ಈ ಭ್ರಷ್ಟ ಸರ್ಕಾರಗಳು ಅವರನ್ನು ಇದುವರೆಗೂ ಕಾಯಂ ಮಾಡಿಲ್ಲವೆಂಬುದು ಪರಿಸ್ಥಿತಿಗೆ ಹಿಡಿದ ಕನ್ನಡಿಯಷ್ಟೆ.

ಈ ಆದಿವಾಸಿಗಳು ಕ್ರೂರ ಕಾಡುಮೃಗಗಳ ಜೊತೆ ಬದುಕುವ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಅಷ್ಟೇ ಏಕೆ ಆನೆಯಂಥಾ ದೈತ್ಯ ಪ್ರಾಣಿಯನ್ನೇ ಪಳಗಿಸಿ ಅದರ ಮೇಲೆ ಸವಾರಿ ಮಾಡುತ್ತಾರೆ. ಆದರೆ ನಾನಾ ತಂತ್ರ-ಕುತಂತ್ರಗಳಲ್ಲಿ ತೇಲಿ ಮುಳುಗುತ್ತಿರುವ ನಾಗರಿಕ ಜೀವಿಗಳಿಗೆ ಮುಖಾಮುಖಿಯಾಗುವ ಸಾಮರ್ಥ್ಯ ಅವರಿಗಿಲ್ಲ, ಯಾಕೆಂದರೆ ಅವರು ಸುಸಂಸ್ಕೃತರಲ್ಲ; ಸಂಸ್ಕಾರ ಎಂದರೇನು ಎಂಬುದೇ ಅವರಿಗೆ ತಿಳಿದಿಲ್ಲ.

ಎಂಥಾ ಕ್ರೂರ ವ್ಯಂಗ್ಯ ಅಲ್ಲವೇ?










...ಯಾಗದಂತೆ ತಡೆದುಕೊಳ್ಳಬೇಕು. ಹಾಗೇನಾದರೂ ಒಂದುವೇಳೆ ವಾಂತಿ ...ಂಡರೆ ಟಾಸ್ಕ್ ಸೋತಹಾಗೆ. ಇಂತಹ ವಿಕೃತ ವಾಂತಿಗಳನ್ನೇ ಪ್ರಸಾರಪಡಿಸಿ ...ಚಾನೆಲ್‌ಗಳು ಟಿಆರ್‌ಪಿ ಏರಿಸಿಕೊಂಡು ಮೃಷ್ಟಾನ್ನ ಭೋಜನ ...ತ್ತಿರುವುದೊಂದು ದೊಡ್ಡ ದುರಂತ. ನಾಗರಿಕತೆ ಎಂದರೆ ಇದೇನಾ? ...ವಲ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಷಡ್ಯಂತ್ರ ರೂಪಿಸಿ, ... ಮುಗ್ಧ ಹುಡುಗ ರನ್ನು ಚಿತ್ರವಿಚಿತ್ರವಾದ ಹಿಂಸೆಗೆ ಗುರಿಮಾಡಿದವರು ...ಕಡೆ. ಮತ್ತೊಂದು ಕಡೆ ಈ ನಾಗರಿಕತೆಯ ...ಜಾಜುಗಳನ್ನು, ಷಡ್ಯಂತ್ರಗಳನ್ನು ಅರಿಯದ ಮುಗ್ದರು ...ಂದುಕಡೆ. ಇವರಲ್ಲಿ ನಿಜಕ್ಕೂ ಮಾನಸಿಕವಾಗಿ ...ಸಗಿರುವವರು ಯಾರು ಎಂಬುದನ್ನು ನೀವೇ ...ನಿಸಿ.



ರಿಯಾಲಿಟಿ ಶೋ ಎಂಬ ವಿಕೃತಿಯಲ್ಲಿ ...ರುಬರ ಹುಡುಗ ರಾಜೇಶನ ಜೊತೆಗಿದ್ದ ಹುಡುಗಿ ...ಳ ಒತ್ತಡ, ಬೈಗುಳಗಳನ್ನು ತಾಳಲಾರದೆ ಒಮ್ಮೆ ...ವಳ ಮೇಲೆ ಕೈ ಮಾಡಿದ್ದ. ಇವರಿಬ್ಬರ ಕಚ್ಚಾಟಗಳನ್ನೂ ಹಸಿಹಸಿಯಾಗಿ ...ಮಾಡಲಾಗಿತ್ತು. ಅಂತಿಮ ಹಂತದಲ್ಲಿ ವಿಜೇತರನ್ನು ಆಯ್ಕೆ ಮಾಡಬೇಕಾಗಿ ...ಗ ಪ್ರೇಕ್ಷಕರ ಓಟಿಂಗ್ ಪಡೆಯಲಾಗಿತ್ತು. ಅದರಲ್ಲಿ ರಾಜೇಶ್-ಐಶ್ವರ್ಯ ... ವಿಜೇತರಾಗಿದ್ದರು. ಹೀಗೆ ವಿಜೇತನಾದ ರಾಜೇಶ್‌ನಿಗೆ ಬಹುಮಾನದ ...ಬಕ್ಷದ ಬಾಬ್ತಿನಲ್ಲಿ ಐದು ಲಕ್ಷಗಳ ಹಣವೂ ಸಿಕ್ಕಿತು.

ಜಂಗಲ್ ಜಾಕಿ ಸಿನಿಮಾ ಹೀರೋ

...ಲ್ಲಿಗೆ ಈ ಮುಗ್ಧ ಹುಡುಗನಿಗೆ ನಾಗರಿಕರ ಅವಾಂತರಗಳಿಂದ ಮುಕ್ತಿ ...ಸಿಕ್ಕಾಗಿತ್ತು. ಆದರೆ ಆದದ್ದೇ ಬೇರೆ. ಈತ ಊರು ಸೇರಿ ಇನ್ನೂ ...ಗಿ ಒಂದು ವಾರವೂ ಕಳೆದಿರಲಿಲ್ಲ. ಆಗಲೇ ಮತ್ತೊಬ್ಬ ಪಾಕಡಾ ...ಕನೊಬ್ಬ ಬಳ್ಳೆ ಹಾಡಿ ಹುಡುಕಿ ಹೊರಟಿದ್ದ. ಆತನ ಹೆಸರು ರವಿ ...ರು. ಕೆಲವು ಸಿನೆಮಾಗಳಿಗೆ ಸಹ ನಿರ್ದೇಶಕನಾಗಿ ಕೆಲಸ ಮಾಡಿದ್ದವನು. ...ಶೋ ಮೂಲಕ ಸಾಕಷ್ಟು ಪ್ರಚಾರ ಪಡೆದುಕೊಂಡಿದ್ದ ಮುಗ್ಧ ಹುಡುಗನನ್ನು ...ಕೊಂಡು ತಾನೇ ಒಂದು ಸಿನೆಮಾ ಮಾಡಿದರೆ ಭರ್ಜರಿ ಹಿಟ್ ಆಗುತ್ತದೆ ...ದು ಆತನ ಲೆಕ್ಕಾಚಾರವಾಗಿತ್ತು.

...ಗೂಹೀಗೂ ರಾಜೇಶ್ ಹಾಗೂ ಆತನ ಮನೆಯವರಿಗೆ ಆಮಿಷವೊಡ್ಡಿ ...ಯಿಸಿ ರಾಜೇಶನನ್ನು ತನ್ನ ಕಬ್ಜಾಕ್ಕೆ ತೆಗೆದುಕೊಂಡು ಒಂದು ರೀತಿಯಲ್ಲಿ ... ಅರೆಸ್ಟ್ ಸ್ಥಿತಿಯಲ್ಲಿಟ್ಟುಕೊಂಡ ರವಿ ಕಡೂರು. ಹಾಗೆಯೇ ಈತನ ...ನಟಿಸಿದ್ದ ಐಶ್ವರ್ಯ ಎಂಬ ಬಿಳಿ ತೊಗಲಿನ ಹುಡುಗಿಯ ಜೊತೆಯೂ ... ಕುದುರಿಸಿಕೊಂಡಿದ್ದ. ಹೀಗೆ ಈ ರಿಯಾಲಿಟಿ ಜೋಡಿ ಹೀರೋ ...ಯಿನ್ ಆಗಿ 'ಜಂಗಲ್ ಜಾಕಿ' ಎಂಬ ಸಿನೆಮಾವೊಂದು ಸೆಟ್ಟೇರಿತು. ...ನೆಮಾದ ಚಿತ್ರೀಕರಣವೂ ಮುಗಿದಿದೆ. ಹೀಗೇ ಬಳ್ಳೆ ಹಾಡಿಯ ಮುಗ್ಧ ... ಸಿನಿಮಾವೊಂದರ ಹೀರೋ ಕೂಡ ಆಗಿಬಿಟ್ಟ. ಆತನಿಗೆ ಈಗಾಗಲೇ ... ಮಂದಿ ಅಭಿಮಾನಿಗಳೂ ಸೃಷ್ಟಿಯಾಗಿದ್ದರು.

...ತನಿಗೆ ಸಿನೆಮಾದವರಿಂದ ಮತ್ತೆ 5 ಲಕ್ಷ ರೂ. ಬಂತು. ಹೀಗೆ ...ಪತಿಯೂ ಆದ ರಾಜೇಶ ನಗರ ಜೀವನದಿಂದ ಸಾಕಷ್ಟು ಗಳಿಸಿಕೊಂಡಿದ್ದ. ... ವಿಪರ್ಯಾಸವೆಂದರೆ ಆತ ಈ ನಾಗರಿಕರಿಂದ ಗಳಿಸಿಕೊಂಡ ಕೆಲವು ...ಗಳು ಆತನ ಜೀವನವನ್ನು ಮೂರಾಬಟ್ಟೆಯಾಗಿಸಿ, ಕೊನೆಗೆ ಆತನನ್ನು ...ಸ್ಪತ್ರೆಗೆ ಸೇರಿಸಿವೆ ಎಂಬುದೇ ಒಂದು ದುರಂತ.

ಮತ್ತೆ ಹಾಡಿ ಸೇರಿದ ಹೀರೋ

...ನೆಗೆ ವಾಪಸಾದ ರಾಜೇಶನಿಗೆ ದೂರದ ಊರಿನ ಕಾವ್ಯ ಎಂಬ ...ಗಿಯ ಜೊತೆ ಮದುವೆಯಾಯಿತು. ಅದರಲ್ಲಿ ಅಂಥಾ ವಿಶೇಷವೇನಿಲ್ಲ. ...ಷವೇನೆಂದರೆ ಜೇನುಕುರುಬರ ರೀತಿರಿವಾಜಿನ ಪ್ರಕಾರ ಆ ಮದುವೆ ...ರಲಿಲ್ಲ, ಎಚ್.ಡಿ.ಕೋಟೆ ಹೈವೇಯಲ್ಲಿರುವ ಕಲ್ಯಾಣ ಮಂಟಪವೊಂದರಲ್ಲಿ ...ರಿಯಾಗಿ ನಡೆದಿತ್ತು. ಹಣ ಕೈಗೆ ಬಂದರೆ ಇದೆಲ್ಲಾ ಮಾಮೂಲಿ ಆ ... ಬೇರೆ. ಆದರೆ ಈ ಮದುವೆಗೆ ಸ್ವಂತ ಬಳ್ಳೆ ಹಾಡಿಯ ಹತ್ತಿರದ ...ಗಳನ್ನೂ ಕರೆದಿರಲಿಲ್ಲ! ಯಾಕೆಂದರೆ ರಾಜೇಶನಿಗೆ ಈಗಾಗಲೇ ಅಂಥಾ ...ರಿಯಾಲಿಟಿ ಕಾಂಪ್ಲೆಕ್ಸ್ ಅಂಟಿಕೊಂಡಿತ್ತು. ಈ ಕೊಳಕು ಹಾಡಿಯ ... ತನ್ನ ಲೆವೆಲ್‌ಗೆ ಸರಿಹೊಂದುವುದಿಲ್ಲ ಎಂದು ಆತ ಭಾವಿಸಿರಬೇಕು. ...ಂದಲೇ ಮದುವೆ ಛತ್ರದಲ್ಲಿ ಒಂದಷ್ಟು ...ಸಿನಿಮಾ ಮಂದಿ, ಮತ್ತೊಂದಷ್ಟು ...ನಾಗರಿಕರೇ ತುಂಬಿದ್ದರು.

...ಮದುವೆಯಾದ ನಂತರ ಆತ ಹೆಂಡತಿಯೊಂದಿಗೆ ಕೂಡ ಜಗಳ ಶುರು ...ಕೊಂಡ. ಸಣ್ಣಪುಟ್ಟ ವಿಚಾರಗಳಿಗೆ ಜಗಳ ಮಾಮೂಲಿಯಾಗಿ ಹೋಯಿತು. ... ಹೆಂಡತಿಯನ್ನು ಹೀಯಾಳಿಸುವುದಾಗಿ ಬಡಿಯಲು ಶುರುವಿಟ್ಟುಕೊಂಡ. ...ಬೇಸತ್ತ ಕಾವ್ಯ ತವರಿನ ಹಾದಿ ಹಿಡಿದಳು. ಬಿಳಿತೊಗಲಿನ ... ನಾಗರಿಕ ಹುಡುಗಿಯರ ಜೊತೆ ಕುಣಿದು ಕುಪ್ಪಳಿಸಿದ್ದ ರಾಜೇಶನಿಗೆ ... ಹುಡುಗಿ ತನಗೆ ಲಾಯಕ್ಕಾದವಳಲ್ಲ ಎನಿಸಿರಲೂ ಸಾಕು. ...ದಿನಗಳ ನಂತರ ಹೆಂಡತಿಯನ್ನು ಕರೆತರಲು ಅತ್ತೆಯ ಮನೆಗೆ ಹೋದ ...ನಿಗೆ ಅಲ್ಲಿ ಓರಿಯರು ಬುದ್ಧಿವಾದ ಹೇಳಿದರು. ಮತ್ತೊಮ್ಮೆ ಕಾವ್ಯಳಿಗೆ

ಇಂಥಾ ಕಿರುಕುಳ ಕೊಟ್ಟರೆ ಪೊಲೀಸ್ ಕೇಸು ಮಾಡುವುದಾಗಿ ಹೆದರಿಸಿದರು. ಈ ಘಟನೆಯ ನಂತರ ರಾತ್ರೋರಾತ್ರಿ ಅಲ್ಲಿಂದ ಕಂಬಿಕಿತ್ತು ಕಾಡಿನ ಹಾದಿ ಹಿಡಿದು ಮನೆ ಸೇರಿಕೊಂಡಿದ್ದ.

ಹೀಗೆ ಮದುವೆಯಾಗಿ ಒಂದೂವರೆ ತಿಂಗಳಿನಲ್ಲೇ ಮುರಿದುಬಿದ್ದ ಸಂಸಾರ ಒಂದು ಕಡೆಯಾದರೆ, ಆತ ದಿಢೀರ್ ರೂಢಿಸಿಕೊಂಡ ಜೀವನಶೈಲಿ ಮತ್ತೊಂದು ರೀತಿಯದ್ದು. ಬೆಂಗಳೂರಿನಿಂದ ವಾಪಸಾದ ಕೂಡಲೇ ಆತ ಮಾಡಿದ ಮೊದಲ ಕಾರ್ಯ ಒಂದು ಬೈಕ್ ಕೊಂಡುಕೊಂಡಿದ್ದು. ಅದೂ ಸಹ 150 ಸಿಸಿ ಪಲ್ಸರ್. ನಂತರ ಒಂದು ಟಿವಿ ಖರೀದಿಸಿದ. ಯಾವ ಕ್ಷಣದಲ್ಲಾದರೂ ಮುರಿದು ಬೀಳುವಂತಿರುವ ಆತನ ಮನೆಯ ಛಾವಣಿಯ ಮೇಲೆ ಒಂದು ಡಿಶ್ ಆಂಟೆನಾ ಕಟ್ಟಿದ. ಆದರೆ ಆ ಹಾಡಿಯ ಜನರು ಕರೆಂಟನ್ನು ಎಂದಿಗೂ ಕಂಡವರಲ್ಲ. ಅದಕ್ಕಾಗಿ ಸೋಲಾರ್ ಬ್ಯಾಟರಿಗಳನ್ನು ಅಳವಡಿಸಿದ. ಆದರೆ ಏನೂ ಪ್ರಯೋಜನವಾಗಲಿಲ್ಲ. ನಂತರ ಆತನ "ಹಿತೈಷಿಗಳ" ಸಲಹೆಯ ಮೇರೆಗೆ ಒಂದು ಜನರೇಟರ್ ಕೊಂಡು ತಂದ. ಸೀಮೆಎಣ್ಣೆ ಬಹಳ ತುಟ್ಟಿ, ಲೀಟರ್‌ಗೆ 40 ರೂಪಾಯಿ. ಆದರೇನಂತೆ? ಸಿನಿಮಾ ಹೀರೋನ ಲೆವೆಲ್‌ಗೆ ಮನೆಯಲ್ಲಿ ಟಿವಿ ಇಲ್ಲದಿದ್ದರೆ ಆಗುತ್ತದೆಯೆ? ಹೀಗೆ ರಾತ್ರಿಹಗಲೆನ್ನದೆ ಆ ಜನರೇಟರ್ ಬಡ್‌ಬಡ್ ಶಬ್ದ ಮಾಡುತ್ತಲೇ ಇತ್ತು. ಇದುವರೆಗೆ ಆತ ಸುಮಾರು 400-500 ಲೀಟರ್ ಸೀಮೆಎಣ್ಣೆ ಸುಟ್ಟಿರಬಹುದು ಎಂದು ಮನೆಯವರ ಅಂದಾಜು.

ಈ ಟಿವಿಯ ಕತೆ ಒಂದು ರೀತಿಯಾದರೆ ಇನ್ನೂ ಆತನ ಪಲ್ಸರ್ ಬೈಕಿನ ಕತೆ ಇನ್ನೂ ವಿಚಿತ್ರವಾದದ್ದು. ಆತನ ಪಲ್ಸರ್ ಬೈಕ್ ಹತ್ತಿ ಹೊರಟನೆಂದರೆ ಎಷ್ಟು ನೂರು ಕಿಲೋಮೀಟರ್ ಸುತ್ತುತ್ತಿದ್ದನೆಂಬುದು ಆತನಿಗೇ ಗೊತ್ತಿರಲಿಲ್ಲ. ಎಚ್.ಡಿ.ಕೋಟೆ, ಮೈಸೂರುಗಳಿಗೆ ಸುತ್ತುವುದು ಆತನ ನಿತ್ಯ ಕಾಯಕವಾಗಿ ಹೋಯ್ತು. ಅಷ್ಟು ಮಾತ್ರವಲ್ಲ, ಆತ ಬೆಂಗಳೂರಿಗೂ ಹಲವಾರು ಬಾರಿ ಬೈಕು ಓಡಿಸಿಕೊಂಡೇ ಬಂದಿದ್ದ ಎಂದರೆ ಆತನ ಬೈಕ್ ಹುಚ್ಚಿಗೆ ಏನು ಹೇಳಬೇಕು. ಇದೆಲ್ಲಾ ಹಾಳಾಗಲಿ ಎಂದರೆ ಇನ್ನೂ ಒಂದು ವಿಚಿತ್ರವಾದ ಅಭ್ಯಾಸ ಆತನಿಗಿತ್ತು. ಅದೇನೆಂದರೆ ಸುಮಾರು ಹತ್ತು ಲೀಟರ್‌ನ ಒಂದು ಕ್ಯಾನ್‌ನ, ತುಂಬಾ ಪೆಟ್ರೋಲ್ ತುಂಬಿಸಿ ಅದನ್ನು ಸದಾ ಬೈಕ್‌ನ ಹಿಂದೆ ಕಟ್ಟಿಕೊಂಡಿರುತ್ತಿದ್ದ. ಹೀಗೇಕೆ ಎಂಬ ಪ್ರಶ್ನೆ ಯಾರಿಗಾದರೂ ಉದ್ಭವಿಸುವುದು ಸಹಜ. ಬೇರೇನಿಲ್ಲ, ಪೆಟ್ರೋಲ್ ಖಾಲಿಯಾದರೆ ಮತ್ತೆ ತುಂಬಿಸಿಕೊಳ್ಳಲಿಕ್ಕಾಗಿ ಅಷ್ಟೆ. ಪಾಪ! ಯಾವ ರಸ್ತೆಗೆ ಹೋದರೂ ಅಡಿಗಡಿಗೂ ಪೆಟ್ರೋಲ್ ಬಂಕ್‌ಗಳು ಸಿಗುತ್ತವೆ ಎಂಬ ಕನಿಷ್ಠ ಜ್ಞಾನವೂ ನಮ್ಮ ಹೀರೋಗಿರಲಿಲ್ಲ. ಮುಗ್ಧತೆಯೆಂದರೆ ಅದೇ ತಾನೇ?

ಈತ ತಮ್ಮ ಹಾಡಿಯಲ್ಲಿರುವ ಪ್ರಾಥಮಿಕ ಶಾಲೆಯ ಮೆಟ್ಟಲು



ಹತ್ತಿದ್ದನಾದರೂ ಅಂಥಾ ವಿದ್ಯೆ ಆತನ ತಲೆಗೆ ಅಂಟಿರಲಿಲ್ಲ. ಹಾಗಾಗಿ ಎಲ್ಲ ಜೇನುಕುರುಬರಂತೆ ಕಾಡಿಗೆ ಹೋಗಿ ಉತ್ಪನ್ನಗಳನ್ನು ಸಂಗ್ರಹಿಸಿ ತರುವುದು ಇಲ್ಲವೇ ಕೂಲಿನಾಲಿ ಮಾಡುವುದು ಈತನ ಕಾಯಕವಾಗಿತ್ತು. ಆದರೆ ಯಾವಾಗ ಈತ ಗಾಂಧಿನಗರವೆಂಬ ಮಾಯಾನಗರಿಯಿಂದ ವಾಪಸ್ ಆದನೋ ಅಂದಿನಿಂದ ಆತ ಯಾವೊಂದು ಕೆಲಸವನ್ನೂ ಮಾಡುತ್ತಿರಲಿಲ್ಲ. ಅದಿರಲಿ, ಹಾಡಿಯ ಜನರೊಂದಿಗೆ ಮಾತಾಡುವುದನ್ನೂ ಕಡಿತಗೊಳಿಸಿಕೊಂಡಿದ್ದ ಟಿವಿ ನೋಡುವುದು, ಬೈಕ್ ಮೇಲೆ ಸುತ್ತುವುದಷ್ಟೇ ಆತ ಸೀಮಿತನಾದ.

ಹೀಗೆ ನಾಗರಿಕರೆನಿಸಿಕೊಂಡ ಜನರ ಬಹಳಷ್ಟು ದುಷ್ಟ ಗುಣಗಳನ್ನು, ನಾಲಾಯಕ್ಕು ಕಾಂಪ್ಲೆಕ್ಸ್‌ಗಳನ್ನು ಬೆಳೆಸಿಕೊಂಡ ರಾಜೇಶ ಹಣವನ್ನು ನೀರಿನಂತೆ ಖರ್ಚು ಮಾಡಿಬಿಟ್ಟ. ಕೊನೆಗೆ ಈಗ ಆತನಲ್ಲಿ ಉಳಿದಿರುವ ಹಣ ಬಹುಶಃ ಅಮ್ಮನ ಹೆಸರಿನಲ್ಲಿರುವ ಒಂದೆರಡು ಲಕ್ಷ ಡಿಪಾಸಿಟ್ ಮಾತ್ರ.

ಇಷ್ಟೆಲ್ಲಾ ಸಾಲದೆಂಬಂತೆ ಈತನಿಗೆ ಮತ್ತೊಂದು ಪ್ರೆಷರ್ ಶುರುವಾಯಿತು. ಅದೇನೆಂದರೆ ಆತ ಹೀರೋ ಆಗಿದ್ದ ಜಂಗಲ್ ಜಾಕಿ ಚಿತ್ರ ಬಿಡುಗಡೆಯೇ ಆಗಲಿಲ್ಲ. ಅದರ ಡೈರೆಕ್ಟರ್‌ನನ್ನು ಯಾವಾಗ ಕೇಳಿದರೂ ಆತ ಮುಂದಿನ ವಾರ ಅಂತ ಹೇಳುತ್ತಲೇ ಬಂದನಾದರೂ ಸಿನಿಮಾ ಮಾತ್ರ ಬಿಡುಗಡೆ ಆಗಲಿಲ್ಲ. ಮತ್ತೊಂದು ಕಡೆ ರಾಜೇಶ್ ಹೋದಲ್ಲೆಲ್ಲಾ ಆತನ ಅಭಿಮಾನಿಗಳು, ಪರಿಚಿತರು ಎಲ್ಲರೂ ಸಿನಿಮಾ ರಿಲೀಸ್ ಯಾವಾಗ ಎಂದು ಕೇಳಲಿಕ್ಕೆ ಶುರು ಮಾಡಿದ್ದರು.

ಹೀಗೆ ತನ್ನ ಪರಿಸರದಿಂದ ಬೇರೆಯಾಗಿ ಗುರುತಿಸಿಕೊಳ್ಳಲು ಹೆಣಗುತ್ತಿದ್ದ ರಾಜೇಶ ಹೀಗೆ ನಾನಾ ಮಾನಸಿಕ ಒತ್ತಡಗಳಲ್ಲಿ ನಲುಗಿಹೋದ. ಇದ್ದಕ್ಕಿದ್ದಂತೆ ಆತನ ನಡವಳಿಕೆಯಲ್ಲಿ ಬದಲಾವಣೆ ಪ್ರಾರಂಭವಾಯಿತು. ಇದ್ದಕ್ಕಿದ್ದಂತೆ ಜೋರಾಗಿ ಕಿರುಚುವುದು, ತನ್ನ ಹೆಂಡತಿಯನ್ನು ಕೊಲ್ಲುತ್ತೇನೆ, ಅಪ್ಪನನ್ನು ಕೊಲ್ಲುತ್ತೇನೆ ಎಂದು ಚೀರಾಡುವುದು ಅಥವಾ ಮೂಕನಂತೆ ನೆಲ ನೋಡುತ್ತಾ ಕೂತು ಬಿಡುವುದು ಹೀಗೆ ವಿಚಿತ್ರವಾಗಿ ವರ್ತಿಸತೊಡಗಿದ. ಗಾಬರಿಗೊಂಡ ತಂದೆ ತಾಯಿ ಮತ್ತು ಹಾಡಿಯ ಜನರು ದೇವರಿಗೆ ಹರಕೆ ಹೊತ್ತರು; ಕುಲದೈವಕ್ಕೆ ಪೂಜೆ ಮಾಡಿಸಿದರು. ಆದರು ಪ್ರಯೋಜನವಾಗಲಿಲ್ಲ. ಕೊನೆಗೆ ಫಾರೆಸ್ಟ್ ಗಾರ್ಡ್ ಒಬ್ಬರ ಸಲಹೆ ಮೇರೆಗೆ ಆತನನ್ನು ಆಸ್ಪತ್ರೆಗೆ ಸೇರಿಸಿದರು.

ಈಗ ಹಾಲಿ ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಅಕ್ಯೂಟ್ ಮೇನಿಯಾ ಅಟ್ಯಾಕ್ ಎಂಬುದಾಗಿ ವೈದ್ಯರು ಗುರುತಿಸಿದ್ದಾರೆ. ಅಂದರೆ ತೀವ್ರ ಮಾನಸಿಕ ಒತ್ತಡ ಅಥವಾ ಆಘಾತ ಎಂದು. ಸದ್ಯಕ್ಕೆ ಆತ ಚೇತರಿಸಿಕೊಳ್ಳುತ್ತಿದ್ದಾನೆ. ಸಿನಿಮಾ ನಟರಾದ ಪುನೀತ್, ದರ್ಶನ್ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆಯ ವೆಚ್ಚ ಭರಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆಂಬುದು ಒಂದು ಸಮಾಧಾನದ ಸಂಗತಿ.

ಮುಗ್ಧ ಹುಡುಗನೊಬ್ಬನ ಜೀವನದಲ್ಲಿ ತಮ್ಮ ತಮ್ಮ ತೆವಲು ತೀರಿಸಿಕೊಳ್ಳಲು ಬಣ್ಣ ಬಣ್ಣದ ವೇಷ ತೊಟ್ಟು ಪಂಚರಂಗಿ ಆಟ ಆಡಿದ ಖಾಯಿಂದಿಗಳು ಗೌರವಾನ್ವಿತ ನಾಗರಿಕರೆನಿಸಿಕೊಂಡಿದ್ದಾರೆ. ಮನುಷ್ಯತ್ವಕ್ಕೆ ಯಾವ ಘನತೆ ಗೌರವಗಳೂ ಇಲ್ಲದ ಜನರಿಂದ ಪೊಳ್ಳು ನಾಗರಿಕತೆಯ ಪಾಠ ಕಲಿತುಕೊಂಡ ಮುಗ್ಧ ರಾಜೇಶ ಹುಚ್ಚಾಸ್ಪತ್ರೆ ಸೇರಿದ್ದಾನೆ. ಈ ಎಲ್ಲಕ್ಕೂ ಮೂಲಕಾರಣರಾದ ಸುವರ್ಣ ಚಾನೆಲ್‌ನ ಮುಖ್ಯಸ್ಥ ಅನೂಪ್ ಚಂದ್ರಶೇಖರ್ ಮತ್ತು ರಿಯಾಲಿಟಿ ನಿರ್ದೇಶಕ ರಾಘವೇಂದ್ರ ಹುಣಸೂರು ಹಾಗು ಬಿಡುಗಡೆಯಾಗದ ಸಿನಿಮಾದ ಕಿಲಾಡಿ ಡೈರೆಕ್ಟರ್ ರವಿ ಕಡೂರು ಮುಂತಾದ ಎಲ್ಲಾ ನಾಗರಿಕರು ತಮ್ಮ ಚಾಣಾಕ್ಷತೆಯಿಂದ ಗಳಿಸಿಕೊಂಡ ಗಂಟುಗಳನ್ನು ಲೆಕ್ಕ ಹಾಕುತ್ತಿದ್ದಾರೆ. ಛೀ...! ಎಂಥಾ ನಾಟಕೀಯ!

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಖತರ್‌ನಾಕ್ ಡೈರೆಕ್ಟರ್ ರವಿ ಕಡೂರು

ಜಂಗಲ್ ಜಾಕಿ ಸಿನಿಮಾದ ಹೆಸರಿನಲ್ಲಿ ರಾಜೇಶನಿಗೆ ಗಂಟುಬಿದ್ದ ರವಿ ಕಡೂರು ಎಂಬ ಆಸಾಮಿಯ ವೃತ್ತಾಂತವನ್ನು ಬರೆದರೆ ಅದೇ ಒಂದು ಸಿನಿಮಾ ಕತೆಯಾಗುತ್ತದೆ. ತಾಜ್‌ಮಹಲ್, ಪ್ರೇಮ್‌ಕಹಾನಿ, ಮೈಲಾರಿ ಮುಂತಾದ ಸಿನಿಮಾಗಳ ನಿರ್ದೇಶಕರಾದ ಆರ್. ಚಂದ್ರು ಕೇಶಾವರ ಎಂಬುವವರ ರೂಮಿನಲ್ಲಿ ನಳಪಾಕ ಮಾಡಿಕೊಂಡಿದ್ದ ರವಿಗೂ ಸಿನಿಮಾ ಕ್ಷೇತ್ರಕ್ಕೂ ಅಂಥಾ ಯಾವ ನಂಟೂ ಇರಲಿಲ್ಲ. ಆದರೆ ಸಿಕ್ಕಸಿಕ್ಕವರನ್ನೆಲ್ಲಾ ಪರಿಚಯ ಮಾಡಿಕೊಂಡು ಅವರ ಫೋನ್ ನಂಬರ್ ಕಲೆಕ್ಟ್ ಮಾಡಿಕೊಳ್ಳುವುದು ಈತನ ಒಂದು ಹವ್ಯಾಸ. ಹಾಗೆ ಬರಿಗೈಯಲ್ಲೇ ರೀಲು ಸುತ್ತಿ ಜನರನ್ನು ಮರುಳು ಮಾಡುವ ವಿದ್ಯೆಯೂ ಈತನಿಗೆ ಕರಗತ.

ಹಾಗೂಹೀಗೂ ಅ... ಹೆಸರು ಹೇಳಿಕೊಂಡು ಚಲಾವಣೆಯಲ್ಲಿದ್ದ ರವಿ ಕಡೂರು ಇದ್ದಕ್ಕಿದ್ದಂತೆ ಗಾಂಧಿನಗರದಿಂದ ನಾಪತ್ತೆಯಾಗಿಬಿಟ್ಟ. ಮತ್ತೆ ನೋಡ ನೋಡುತ್ತಿದ್ದಂತೆ ಹಳ್ಳಿ ಹೈದ ಖ್ಯಾತಿಯ ರಾಜೇಶ್ ಐಶ್ವರ್ಯ ಜೋಡಿಯನ್ನು ಹಾಕಿಕೊಂಡು ಜಂಗಲ್ ಜಾಕಿ ಅಂತಾ ಒಂದು ಸಿನಿಮಾ ಮಾಡ್ತೀನಿ ಅಂತ ಪ್ರತ್ಯಕ್ಷನಾಗಿದ್ದ. ಅದು ಸರಿ, ಸಿನಿಮಾಕ್ಕೆ ಅಷ್ಟು ಹಣ ಹಾಕೋರು ಯಾರು ಅಂದ್ರೆ, ಅದಕ್ಕೂ ರವಿ ಸೂಕ್ತ ಏರ್ಪಾಟು ಮಾಡಿಕೊಂಡಿದ್ದ. ಏನೆಂದರೆ ಸಿನಿಮಾ ಗುಂಗಿನಲ್ಲಿದ್ದ ಮತ್ತೊಬ್ಬ ಅನಾಮಿಕನನ್ನು ಮರುಳು ಮಾಡಿ ಆತನನ್ನು ಪ್ರೊಡ್ಯೂಸರ್ ಮಾಡಿ ಜಮೀನು ಮಾರಿಸಿಬಿಟ್ಟಿದ್ದ. ಹೀಗೇ ಜಮೀನು ಮಾರಿ ಬಂದ ಹಣದಲ್ಲಿ ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ನಡೆಸಿರುವ ರವಿ ಕಡೂರು ಕಂಡಕಂಡ ಹುಡುಗಿಯರಿಗೆ ಹಣ ಸುರಿದು ಪ್ರೊಡ್ಯೂಸರ್‌ನ ತಲೆ ಬೋಳಿಸಿದ್ದಾನೆ ಎಂದು ಗಾಂಧಿನಗರದ ಮೂಲಗಳು ಹೇಳುತ್ತವೆ. ಅದೆಲ್ಲಾ ಒತ್ತಟ್ಟಿಗಿರಲಿ; ಈ ಗಾಂಧೀ ನಗರದ ಮಂದಿ ಹೇಳೋ ಪ್ರಕಾರ ಜಂಗಲ್ ಜಾಕಿ ಸಿನಿಮಾ ರಿಲೀಸ್ ಆಗೋದೇ ಡೌಟು ಅಂತಲ್ಲಾ, ಅದಕ್ಕೇನಂತೀರಿ?

ನೂರಾನಿ ಮಾರ್ಕೆಟ್ ಸೊಸೈಟಿ ಫಿನಿಶ್!

ಹುಬ್ಬಳ್ಳಿಯ ಕಿತ್ತೂರು ಚೆನ್ನಮ್ಮ ವೃತ್ತದಿಂದ ಕೂಗಳತೆ ದೂರದಲ್ಲಿರುವುದೇ ನೂರಾನಿ ಮಾರ್ಕೆಟ್. ಇಲ್ಲಿ 500 ಕ್ಕೂ ಹೆಚ್ಚು ಜನ ಹಳೇ ವಾಹನಗಳ ವಿವಿಧ ಬಿಡಿಭಾಗಗಳನ್ನು ಮಾರಾಟ ಮಾಡುವವರಿದ್ದಾರೆ. ಇವರ ಉದ್ಯೋಗ ಗುಜರಿಗೆ ವಾಹನಗಳನ್ನು ಖರೀದಿಸುವುದು. ಅದರಲ್ಲಿರುವ ಬಿಡಿಭಾಗಗಳನ್ನು ಬೇರ್ಪಡಿಸಿ ಅವುಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡುವುದು. ಬೆಂಗಳೂರು ಬಿಟ್ಟರೆ ಕರ್ನಾಟಕದಲ್ಲಿ ಹೀಗೆ ಹಳೇ ವಾಹನಗಳ ಬಿಡಿಭಾಗಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುತ್ತಿರುವುದು ಹುಬ್ಬಳ್ಳಿಯ ನೂರಾನಿ ಮಾರ್ಕೆಟ್. ಹಲವು ಬಾರಿ ಶೋರೂಮ್‌ನಲ್ಲಿ ಸಿಗದ, ಅಪರೂಪದ ಹಳೇ ವಾಹನಗಳ ಬಿಡಿಭಾಗಗಳೂ ಈ ಮಾರ್ಕೆಟ್‌ನಲ್ಲಿ ಸಿಗುತ್ತವೆ. ಬಹುತೇಕ ವಾಹನ ಮಾಲೀಕರು ವಾಹನಗಳ ರಿಪೇರಿ ಕಾಲಕ್ಕೆ ನೂರಾನಿ ಮಾರ್ಕೆಟನ್ನೆ ಅವಲಂಬಿಸಿದ್ದಾರೆ. ಶೋರೂಮ್‌ನಲ್ಲಿಯ ಬಿಡಿಭಾಗಗಳ ದರಕ್ಕಿಂತ ಇಲ್ಲಿ ಕಡಿಮೆ ದರದಲ್ಲಿ ದೊರೆಯುವುದರಿಂದ ಇಲ್ಲಿಗೆ ಗ್ರಾಹಕರು ಮುಗಿಬೀಳುವುದು ಸಹಜವಾಗಿದೆ.


ಈ ಮಾರ್ಕೆಟ್ ಇರುವುದು ಮಹಾನಗರ ಪಾಲಿಕೆಯ ಜಾಗೆಯಲ್ಲಿ. ಇದನ್ನು ಕಡಿಮೆ ಭೂಬಾಡಿಗೆ ಆಧಾರದ ಮೇಲೆ ಇಲ್ಲಿರುವ ಮಾರಾಟಗಾರರಿಗೆ ದೊರಕಿಸಿ ಕೊಟ್ಟದ್ದು ಪಾಲಿಕೆಯ ಸದಸ್ಯರಾಗಿದ್ದ ಡಿ.ಎ.ಜೆ.ಮುಧೋಳರು. ಈ ಮಾರ್ಕೆಟ್ಟನಲ್ಲಿರುವ ಬಹುತೇಕ ವ್ಯಾಪಾರಸ್ಥರು ಮುಸ್ಲಿಂ ಜನಾಂಗಕ್ಕೆ ಸೇರಿದವರಾಗಿದ್ದಾರೆ.

ಈ ನೂರಾನಿ ಮಾರ್ಕೆಟ್‌ಗೆ ಸುಮಾರು 30 ವರ್ಷಗಳ ಇತಿಹಾಸವಿದೆ. ಪ್ರತಿವರ್ಷ ಬಾಬರಿ ಮಸೀದಿಯನ್ನು ಕೆಡವಿದ ಡಿಸೆಂಬರ್ ಆರನೇ ತಾರೀಖಿನಂದು ಇಲ್ಲಿನ ಜನ ತಮ್ಮ ಅಂಗಡಿಗಳನ್ನು ಬಂದ್ ಮಾಡಿ ಕಪ್ಪು ಬಾವುಟ ಹಾರಿಸುವ ಮೂಲಕ ಪ್ರತಿಭಟನಾ ದಿನವನ್ನಾಗಿ ಆಚರಿಸುತ್ತಾರೆ. ಇತರೆ ವಾಣಿಜ್ಯ ಮಾರ್ಕೆಟ್‌ಗಳಿಗಿಂತ ವಿಭಿನ್ನವಾಗಿರುವ ನೂರಾನಿ ಮಾರ್ಕೆಟ್‌ನಲ್ಲಿ ಪ್ರತಿ ತಿಂಗಳು ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುತ್ತದೆ.


ಹುಬ್ಬಳ್ಳಿಯ ಮುಸ್ಲಿಂ ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಇಲ್ಲಿನ ಮುಸಲ್ಮಾನರಲ್ಲಿ ಉನ್ನತ ವಿದ್ಯಾಭ್ಯಾಸ ಮುಗಿಸಿ ಸರಕಾರಿ ಹುದ್ದೆಯಲ್ಲಿರುವವರ ಸಂಖ್ಯೆ ತೀರಾ ಕಡಿಮೆ. ಪ್ರಾಥಮಿಕ ಹಂತದಲ್ಲಿಯೇ ವಿದ್ಯಾಭ್ಯಾಸ ಮೊಟಕುಗೊಳಿಸಿದರು ತಮ್ಮ ಬದುಕು ಸಾಗಿಸಲು ಆಯ್ಕೆ ಮಾಡಿಕೊಳ್ಳುವುದು ಆಟೋರಿಕ್ಷಾ ಗ್ಯಾರೇಜ್‌ಗಳನ್ನು, ಕಟ್ಟಡ ಕಾಮಗಾರಿಯನ್ನು, ಮೀನು-ಮಾಂಸ ಮಾರಾಟವನ್ನು. ಇವರಲ್ಲಿ ಜಾಗೃತಿ ಮೂಡಿಸಿ ಈ ಸಮುದಾಯವನ್ನು ಶಿಕ್ಷಣದತ್ತ ತಳ್ಳಬೇಕಾದುದು ನಾಯಕರು ತಮ್ಮ ರಾಜಕೀಯ ತೆವಲಿಗಾಗಿ ತಮ್ಮ ಜನರನ್ನೇ ದಾರಿ ತಪ್ಪಿಸುತ್ತಿರುವುದು ಒಂದು ವಿಪರ್ಯಾಸ. ಈ ಸಮುದಾಯದ ಮಹಿಳೆಯರು ಕೂಡ ಬೀಡಿ ಕಟ್ಟುವುದರಲ್ಲಿ, ಅಗರಬತ್ತಿ ಹೊಸೆಯುವುದರಲ್ಲಿ, ಬೇರೆ ಮನೆಯವರ ಬಟ್ಟೆ ಒಗೆಯುವದರಲ್ಲಿ ತಮ್ಮ ಬದುಕನ್ನು ಸವೆಯುತ್ತಾರೆ. ಇವರೆಲ್ಲ ಸ್ಲಂ ನಿವಾಸಿಗಳು.


ಇಂತಹ ಬಡ ಮುಸಲ್ಮಾನರನ್ನು ಬಳಸಿಕೊಳ್ಳುತ್ತಿರುವುದು ಕಾಂಗ್ರೆಸ್ ಪಕ್ಷ. ಸಮುದಾಯದ ಬೆಂಬಲವನ್ನು ಪಡೆದು ಶಾಸಕರಾಗಿ, ವಿಧಾನಪರಿಷತ್ ಸದಸ್ಯರಾಗಿ, ಮಂತ್ರಿಗಳಾಗಿ, ಪಾಲಿಕೆಯ ಸದಸ್ಯರಾಗಿ ಬಹಳಷ್ಟು ಕಾಂಗ್ರೆಸ್ಸಿಗರು ಹೊರಹೊಮ್ಮಿದ್ದು ಸುಳ್ಳೇನಲ್ಲ.

ಹುಬ್ಬಳ್ಳಿಯ ಮುಸ್ಲಿಂ ಜನಾಂಗದ ಹೆಸರಲ್ಲಿ ಮೊದಲು ತಮ್ಮ ರಾಜಕೀಯ ಬದುಕನ್ನು ಪ್ರಾರಂಭಿಸಿದ್ದು ಎಂ.ಎಂ.ಹಿಂಡಸಗೇರಿ. ಆನಂತರದಲ್ಲಿ ಇದೇ ಸಮುದಾಯದ ಮತ ಬ್ಯಾಂಕ್‌ಗೆ ಲಗ್ಗೆ ಇಟ್ಟ ಜನತಾಪರಿವಾರದ ಜಬ್ಬಾರಖಾನ ಹೊನ್ನಳ್ಳಿ ವಿಧಾನಪರಿಷತ್‌ಗೆ ಸದಸ್ಯನಾಗಿಸಿದ. ಆನಂತರ ಈತ ಕೂಡಾ ಕಾಂಗ್ರೆಸ್‌ನತ್ತ ಬಂದು ಶಾಸಕನಾಗಿ, ಮಂತ್ರಿ ಪದವಿಯನ್ನೂ ಗಿಟ್ಟಿಸಿಕೊಂಡ. ಹೊನ್ನಳ್ಳಿ ಅವಧಿಯಲ್ಲಿ 'ಎಸ್.ಎಂ.ಕೃಷ್ಣ ನಗರ' ಹಾಗೂ 'ಸೋನಿಯಾ ಗಾಂಧಿ ನಗರ' ಎಂಬ ಎರಡು ಆಶ್ರಯ ಬಡಾವಣೆಗಳು ಸೃಷ್ಟಿಗೊಂಡು ಬಹುಪಾಲು ಮುಸ್ಲಿಮರಿಗೆ ಸೂರು ದೊರೆಯುವಂತಾಗಿದ್ದು ಬಿಟ್ಟರೆ ಹೆಚ್ಚಿನದೇನೂ ಆಗಲಿಲ್ಲ.



ಎ.ಎಂ.ಹಿಂಡಸಗೇರಿ





ಜಬ್ಬಾರ...ನ್ ಹೊನ್ನಳ್ಳಿ

ಸ್ಕ್ರ್ಯಾಪ್ ದಂಧೆ

ಮಾಜಿ ಸಚಿವ ಎ.ಎಂ.ಹಿಂಡಸಗೇರಿ ಮೊದಲು ಗುಜರಿ ದಂಧೆಯಲ್ಲಿದ್ದ. ರೇಲ್ವೆದಲ್ಲಿ ಸಿಗುತ್ತಿದ್ದ ಸ್ಕ್ರ್ಯಾಪ್‌ಗಳನ್ನು (ಬೇಡವಾದ ಕಬ್ಬಿಣದ ಸಾಮಾನುಗಳು) ಹಾಗೂ ಕಲ್ಲಿದ್ದಲು ಬೂದಿ ಖರೀದಿಸುವುದು ಮತ್ತು ಮಾರಾಟವಾಡುವುದು ಈತನ ಕೆಲಸವಾಗಿತ್ತು. ಆಗ ಆತ ಅಧಿಕಾರಿಗಳಿಗೆ ಲಂಚ ನೀಡಿ ಹೆಚ್ಚುವರಿ ಕಬ್ಬಿಣ ಪಡೆಯುತ್ತಿದ್ದದ್ದು ಸುಳ್ಳೇನಲ್ಲ. ನಂತರ ಹಿಂಡಸಗೇರಿ ಕೆಎಸ್‌ಆರ್‌ಟಿಸಿಯಲ್ಲಿ ದೊರೆಯುವ ಸ್ಕ್ರ್ಯಾಪ್‌ಗಳ ಖರೀದಿಗೂ ಇಳಿದರು.

ಆಗ ಆತನಿಗೆ ಎಚ್.ಕೆ.ಪಾಟೀಲರ ತಂದೆ ಕೆ.ಎಚ್.ಪಾಟೀಲರ ಸಂಪರ್ಕ ದೊರಕಿತು. ಆಗ ಹಿರಿಯ ಪಾಟೀಲರು ಮಂತ್ರಿಗಳಾಗಿದ್ದು ಹಿಂಡಸಗೇರಿಯ ಉದ್ಯೋಗಕ್ಕೆ ಸಹಾಯಕವಾಯಿತು. ಒಂದು ಅವಧಿಗೆ ಪಾಲಿಕೆ ಸದಸ್ಯರಾಗಿಯೂ ಕಾಂಗ್ರೆಸ್‌ನಿಂದ ಆಯ್ಕೆಗೊಂಡರು. ಮುಂದೆ ಹಿಂಡಸಗೇರಿಯ ಸಹೋದರ ನಾಜೀಮ ಹಿಂಡಸಗೇರಿ ಕೂಡಾ ಸ್ಕ್ರ್ಯಾಪ್ ದಂಧೆಯೊಂದಿಗೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತನ್ನನ್ನು ತೊಡಗಿಸಿಕೊಂಡ. ಇದೇ ರಿಯಲ್ ಎಸ್ಟೇಟ್ ದಂಧೆಯಲ್ಲಿದ್ದ ಮತ್ತೊಬ್ಬ ಮುಸ್ಲಿಂ ನಾಯಕನೆಂದರೆ ಅದು ಮಾಜಿ ಸಚಿವ ಜಬ್ಬರ್‌ಖಾನ ಹೊನ್ನಳ್ಳಿ.

ಹಿಂಡಸಗೇರಿಯ ಗರಡಿಯಿಂದ ಹೊರಬಂದು ಸ್ವತಂತ್ರವಾಗಿ ಸ್ಕ್ರ್ಯಾಪ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದು ಅಲ್ತಾಫ ಹಳ್ಳೂರ. ಇವನ ತಂದೆ ಹಿಂಡಸಗೇರಿಯ ಖಾಸಾ ಶಿಷ್ಯ. ಹಿಂಡಸಗೇರಿಯ ಮತ್ತೊಬ್ಬ ಶಿಷ್ಯ ಯೂಸಫ್ ಸವಣೂರ ಕೂಡ ಕೆಎಸ್‌ಆರ್‌ಟಿಸಿಯ ಸ್ಕ್ರ್ಯಾಪ್ ಒಡೆಯ.

ಇವರೆಲ್ಲರಿಗೂ ಹುಬ್ಬಳ್ಳಿಯ ಅಂಜುಮನ್ ಸಂಸ್ಥೆ ಮತ್ತು ಆಜಾದ್ ಬ್ಯಾಂಕ್ ರಾಜಕೀಯ ತಾಣಗಳಾಗಿವೆ. ಆದಕ್ಕಾಗಿಯೇ ಈ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳು ಪ್ರಾಮುಖ್ಯತೆ ಪಡೆಯುತ್ತವೆ. ಇದರ ಸಾಲಿಗೆ ಈಗ ಹೊಸ ಸೇರ್ಪಡೆ ಆಗಿರುವುದು ನೂರಾನಿ ಮಾರ್ಕೆಟ್‌ನಲ್ಲಿರುವ ಸಹಕಾರಿ ಬ್ಯಾಂಕ್.

ಸೊಸೈಟಿ ಖತಂ

ಇತ್ತೀಚೆಗೆ ಅಂಜುಮನ್ ಇಸ್ಲಾಂ ಸಂಸ್ಥೆಗೆ ಚುನಾವಣೆ ನಡೆದ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಯೂಸೂಫ್ ಸವಣೂರನ ನಿಜಬಣ್ಣ ಬಯಲಿಗೆಳೆದಿದ್ದು 'ನೂರಾನಿ ಹಳೇ ಮೋಟಾರ್ ಪಾರ್ಟ್ಸ್ ಡೀಲರ್ ಕೋಆಪರೇಟಿವ್ ಕ್ರೆಡಿಟ್ ಸೊಸೈಟಿ'ಯ ನಿರ್ದೇಶಕರಾದ ದಾದಾಪೀರ ಬಳ್ಳಾರಿ, ಜಮೀರ್ ಅಹಮದ್ ಪಟೇಲ, ಹಬೀಬುಲ್ಲಾ ಮಕಾಂದರ್, ಅಲ್ತಾಫ್ ಕ್ವಿಂಚಿ, ಸಮೀರ ಅಸುಂಡಿ ಎನ್ನುವವರು.

ಈ ಸಹಕಾರಿ ಸಂಘವನ್ನು ಸ್ಥಾಪಿಸಿದ್ದು ಸ್ಕ್ರ್ಯಾಪ್ ಕುಳವೆಂದೇ ಕರೆಯಲ್ಪಡುವ ಅಂಜುಮನ್ ಇಸ್ಲಾಂ ಸಂಸ್ಥೆಯ ಮಾಜಿ ಅಧ್ಯಕ್ಷ ಯೂಸಫ್ ಸವಣೂರ. ಹದಿನೇಳು ವರ್ಷಗಳ ಹಿಂದೆ ನೂರಾನಿ ಮಾರ್ಕೆಟ್‌ನಲ್ಲಿ ಗುಜರಿ ಮಾರಾಟ ಮಾಡಿಕೊಂಡಿದ್ದ 500 ಜನರಿಗೆ ಸಂಘದ ಸದಸ್ಯತ್ವ ನೀಡಿ 'ನೂರಾನಿ ಹಳೇ ಮೋಟಾರ್ ಪಾರ್ಟ್ಸ್ ಡೀಲರ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ'ಎನ್ನು ಸವಣೂರ ಸ್ಥಾಪಿಸಿದ. ಆದರೆ ಅವತ್ತಿನಿಂದ ಇವತ್ತಿನವರೆಗೂ ತಾನೇ ಈ ಸೊಸೈಟಿಯ ಅಧ್ಯಕ್ಷನಾಗಿ ಝೂಂಡಾ ಊರಿ ಕುಳಿತು ಬಿಟ್ಟಿದ್ದಾನೆ.

ಈ ಸೊಸೈಟಿಗೆ ಚುನಾವಣೆ ನಡೆಸಿದರೆ ತಾನು ಮಾಡಿರುವ ಅವ್ಯವಹಾರ ಹೊರಬೀಳುತ್ತದೆಂದು ಈ ಸಂಸ್ಥೆಗೆ ಚುನಾವಣೆ ನಡೆಸದೆ ಅಂದರ್ ಬಾಹರ್ ಆಟವಾಡಿಕೊಂಡಿದ್ದ ಇವನು ಸಂಘದ 25 ಲಕ್ಷ ರೂಪಾಯಿ ಅವ್ಯವಹಾರ ಮಾಡಿದ್ದಾನೆ ಎಂದು ನಿರ್ದೇಶಕ ಮಂಡಳಿ ಸದಸ್ಯರೇ ಬಯಲಿಗೆಳೆದಿದ್ದಾರೆ.

ಈ ಸಂಘದ ವಾರ್ಷಿಕ ವಹಿವಾಟು 58 ಲಕ್ಷ ರೂಪಾಯಿಗಳು. ಕಳೆದ ಒಂದೂವರೆ ವರ್ಷದಿಂದ ಆಡಳಿತ ಮಂಡಳಿಯ ಸಭೆಯನ್ನೆ ಕರೆಯದ ಅಧ್ಯಕ್ಷ ಸವಣೂರ ಸ್ವಂತ ನಿರ್ಣಯಗಳನ್ನು ತೆಗೆದುಕೊಂಡು ತನಗೆ ಬೇಕಾದವರಿಗೆ ಹಾಗೂ ಬೇನಾಮಿ ಹೆಸರಲ್ಲಿ ಸಾಲಗಳನ್ನು ವಿತರಿಸಿದ್ದಾನೆ. ಈ ಕುರಿತು ಆಡಳಿತ ಮಂಡಳಿ ಸದಸ್ಯರು ಸಹಕಾರ ಸಂಘಗಳ ಸಹಾಯಕ ನಿಬಂಧಕ ವೆಂಕಟರಾವ್ ಕುಲಕರ್ಣಿಗೆ ದೂರು ನೀಡಿ 2006ರಿಂದ 2011ರವರೆಗಿನ ಸೊಸೈಟಿಯ ಲೆಕ್ಕಪತ್ರಗಳನ್ನು ಪರಿಶೀಲಿಸುವಂತೆ ಮನವಿ ಮಾಡಿಕೊಂಡಿದ್ದರು.

ಅವರ ಮನವಿಯಂತೆ ದಾಖಲೆ ಪರಿಶೀಲಿಸಲು ಕುಳಿತ ಕುಲಕರ್ಣಿಗೆ ಆಘಾತ ಕಾದಿತ್ತು. ಸಾಲ ಹಂಚಿಕೆ, ವಸೂಲಿಗೆ ಸಂಬಂಧಿಸಿದ ದಾಖಲೆಗಳು (ಲೋನ್ ಲೆಡ್ಜರ್) ಮಾಯವಾಗಿತ್ತು. ಮಂಜೂರಾತಿ ಅರ್ಹತೆ, ಬಡ್ಡಿದರ ನಿಗದಿ, ಸಾಲ ಮಂಜೂರಿ ಕುರಿತ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಸವಣೂರ 25 ಲಕ್ಷ ರೂಪಾಯಿ ಅವ್ಯವಹಾರದಲ್ಲಿ ತೊಡಗಿದ್ದು ಕಂಡುಬಂತು.

ಸವಣೂರ್ ಎಂತಹ ಚಾಲಾಕಿ ಎಂದರೆ ತನ್ನ ಪತ್ನಿ ದಿಲಶಾದ್ ಸವಣೂರ ಹೆಸರಿನಲ್ಲಿಯೇ ನಾಲ್ಕು ಬಾರಿ ಸಾಲ ಪಡೆದು ಆದಕ್ಕೆ ಕಡಿಮೆ ಬಡ್ಡಿ ದರ ನಿಗದಿ ಮಾಡಿ ಸೊಸೈಟಿಯನ್ನೇ ಮುಚ್ಚುವ ಹಂತಕ್ಕೆ ತಂದು ನಿಲ್ಲಿಸಿದ್ದಾನೆ. ಈಗ ಈ ಸವಣೂರನನ್ನು ಅಧ್ಯಕ್ಷ ಸ್ಥಾನದಿಂದ ಐದು ವರ್ಷಗಳವರೆಗೆ ಅನರ್ಹಗೊಳಿಸಿದ್ದರಲ್ಲದೆ ಆತ ಯಾವುದೇ ಸಂಘಸಂಸ್ಥೆಗಳಲ್ಲಿ ಸದಸ್ಯತ್ವವನ್ನೂ ಪಡೆಯಕೂಡದು ಎಂದು ತಡೆ ನೀಡಲಾಗಿದೆ. ಸವಣೂರಿನಂತಹ ನಮಕ್ ಹರಾಮರಿಂದ ಸೊಸೈಟಿಯ ಬಡ ವ್ಯಾಪಾರಿಗಳು ಬಚಾವು ಆಗುವುದು ಇಂದಿನ ತುರ್ತಾಗಿದೆ.

● ಹುಬ್ಬಳ್ಳಿಯಾಂವ

ಧರ್ಮವೆಂಬ ಅಫೀಮು ಮತ್ತು ಜಾತಿಯೆಂಬ ಮರಿಜುವಾನ...

ಮಾರ್ಕ್ಸ್‌ವಾದ ಮತ್ತದರ ವಿವಿಧ ಸರಣಿವಾದಗಳು ಪದೇಪದೇ ವಿಫಲವಾದ ನಂತರೂ ಮತ್ತೆ ಮತ್ತೆ ಪ್ರಸ್ತುತವೆನ್ನಿಸುತ್ತಲೇ ಸಾಗುವುದಕ್ಕೆ ಕಾರಣಗಳೇನು? ಕರ್ನಾಟಕದ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿದಾಗ ``Religion is opium'' ಎಂದು ದಶಕಗಳ ಹಿಂದೆ ಯಾವಾಗಲೋ ಮಾರ್ಕ್ಸ್ ಹೇಳಿದ್ದ ಮಾತುಗಳು ನೆನಪಾಗದೇ ಇರದು. 'ಭಿನ್ನ' ಪಕ್ಷವೆಂದು ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ಭಾ.ಜ.ಪ.ದ ಭಿನ್ನತೆ ಇಷ್ಟೊಂದು ಅಸಹ್ಯಕರವಾಗಿರಬಲ್ಲದು ಎಂದು ಸ್ವತಃ ಅದರ ಕಾರ್ಯಕರ್ತರೇ ನಿರೀಕ್ಷಿಸಿರಲಿಲ್ಲವೇನೋ?!

ಮಾತೆತ್ತಿದರೆ 'ಹಿಂದೂ'ವಾದದ ಬಗ್ಗೆ ಪುಂಖಾನು ಪುಂಖವಾಗಿ ಭಾಷಣ ಮಾಡುವ, 'ಅಖಂಡ' ಹಿಂದೂ ರಾಷ್ಟ್ರ ನಿರ್ಮಾಣವೇ ತಮ್ಮ ಗುರಿ ಎಂದು ಚುನಾವಣೆ ಸಮಯದಲ್ಲಿ ಅಬ್ಬರಿಸುವ ಭಾರತೀಯ ಜನತಾ ಪಕ್ಷ ಮೊದಲಿನಿಂದಲೂ 'ಹಿಂದೂ' ಎಂಬ ಧರ್ಮದ ಒಳಗಿನ ಜಾತಿಯೆಂಬ ಅನಿಷ್ಟದ ಬಗ್ಗೆ ಪ್ರಜ್ಞಾಪೂರ್ವಕ ಮೌನಕ್ಕೆ ಶರಣಾಗುತ್ತಿತ್ತು. ಯಾರಾದರೂ ಜಾತಿಯಾಧಾರಿತ 'ಹಿಂದೂ' ಧರ್ಮದ ಬಗ್ಗೆ ಖಂಡನೀಯ ಮಾತುಗಳನ್ನಾಡಿದರೆ ಅವರನ್ನು ಸ್ಯೂಡೋ ಸೆಕ್ಯುಲರ್ ಎಂದು, ರಾಷ್ಟ್ರದ್ರೋಹಿಯೆಂದು ಹಣೆಪಟ್ಟಿ ಕಟ್ಟುವಲ್ಲಿ ಭಾ.ಜ.ಪ ಮತ್ತದರ ಅಂಗಸಂಸ್ಥೆಗಳದು ಎತ್ತಿದ ಕೈ. 'ನಾವೆಲ್ಲರೂ ಒಂದು ನಾವು ಹಿಂದೂ' ಎಂದು ಪ್ರಚಾರ ಮಾಡುತ್ತ ಜನರನ್ನು ನವ ಬ್ರಾಹ್ಮಣ್ಯದ ಕಡೆಗೆ ಆಕರ್ಷಿತರನ್ನಾಗಿ ಮಾಡಿ ದಲಿತ-ಶೂದ್ರ-ಬ್ರಾಹ್ಮಣ-ಅಬ್ರಾಹ್ಮಣ ಯುವಜನತೆಯಲ್ಲಿ ಕೋಮುದ್ವೇಷವನ್ನು ಬಿತ್ತುವಲ್ಲಿಯೂ ಭಾ.ಜ.ಪದ ಪಾತ್ರ ಹಿರಿದು. ಜಾತಿ ಸಮಸ್ಯೆಯನ್ನು ಗಮನಿಸದೆ ಜಾತಿಯ ಅಸ್ತಿತ್ವವನ್ನೇ ನಿರಾಕರಿಸುವ ನಾಟಕವಾಡುತ್ತಿದ್ದ ಭಾ.ಜ.ಪ ಇಂದು ಜಾತಿ ಆಧಾರಿತ ಭಿನ್ನಮತೀಯ ಚಟುವಟಿಕೆಯ ಕೇಂದ್ರವಾಗಿ ಬಿಟ್ಟಿದೆ! ಎಲ್ಲ ರಾಜಕೀಯ ಪಕ್ಷಗಳು, ಬಹುತೇಕ ಎಲ್ಲ ಚುನಾವಣೆಗಳು ನಡೆಯುವುದು ಜಾತಿ ಆಧಾರಿತವಾಗಿಯೇ. ಆ ಪ್ರಾಂತ್ಯದ ಬಹುಸಂಖ್ಯಾತ ಜಾತಿಯ ಬೆಂಬಲಿತ ಅಭ್ಯರ್ಥಿಯೇ ಹೆಚ್ಚಿನ ಬಾರಿ ಗೆಲುವು ಸಾಧಿಸುವುದು. ಮತದಾರನ ಸುಪ್ತ ಮನಸ್ಸಿನಲ್ಲಿ ಅಡಕವಾಗಿದ್ದ ಈ ಜಾತಿ ರಾಜಕಾರಣವನ್ನು ಬಡಿದೆಬ್ಬಿಸಿದ ಕೀರ್ತಿ ಮಾತ್ರ ಭಾ.ಜ.ಪಕ್ಕೆ ಸಲ್ಲಬೇಕು. ಕರ್ನಾಟಕವೆಂದರೆ ಲಿಂಗಾಯತ ಮತ್ತು ಒಕ್ಕಲಿಗರ ನಡುವಿನ ರಣ ರಂಗ ಎಂದು ಬಿಂಬಿಸಿದ ಕೀರ್ತಿ ಕೂಡ ಭಾ.ಜ.ಪ ಮತ್ತು ಕೊಂಚ ಮಟ್ಟಿಗೆ ಜೆ.ಡಿ.ಎಸ್‌ಗೆ ಸೇರಬೇಕು.



ಇವರಿಗೆ ಜಾತಿಯು ನೆನಪಾಗುವುದ್ಯಾವಾಗ? ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಯಡ್ಡಿಯ ದಶಕಗಳ ರಾಜಕೀಯ ಜೀವನ, ಕುಮಾರಸ್ವಾಮಿ ಮಾಡಿದ ವಚನಭಂಗ ಮೂಲಕಾರಣವೇ ಹೊರತು ಯಡ್ಡಿಯ ಜಾತಿಯಲ್ಲ. ಗೆದ್ದಾಗ ಜಾತಿಯ ಬಗ್ಗೆ ಮಾತನಾಡಲಿಲ್ಲ, ಕೋಟಿ ಕೋಟಿ ಅಕ್ರಮವಾಗಿ ದೋಚಿದಾಗ ಜಾತಿಯ ನೆನಪಾಗಲಿಲ್ಲ, ಕೊನೆಗೆ ಅನೈತಿಕ ರಾಜಕಾರಣ ಮಾಡುವಾಗಲೂ ಜಾತಿಯ ನೆನಪಾಗಲಿಲ್ಲ. ಜಾತಿಯ ನೆನಪಾಗಿದ್ದು ವಿರೋಧ ಪಕ್ಷದವರು, ಇತರರು ಇವರ ಭ್ರಷ್ಟಾಚಾರವನ್ನು ಬಹಿರಂಗಗೊಳಿಸಲಾರಂಭಿಸಿದಾಗ! 'ಅಯ್ಯಯ್ಯೋ ನಾನು ಲಿಂಗಾಯತ ಅಂತ ತುಳೀತಾವ್ರೆ, ನೋಡ್ರಪ್ಪ' ಎಂದು ವಾಹಿನಿ ವಂತದಂಗಳದಲ್ಲಿ ಗೋಳಾಡಿದರು. ಲಿಂಗಾಯತ ಮಠಾಧೀಶರೂ ಜೈಲಿನವರೆಗೂ ಹೋಗಿ ಕ್ಷೇಮ ವಿಚಾರಿಸಿದರು. ವಿದ್ಯಾರ್ಥಿ ಜೀವನದಲ್ಲಿ ಕನಸು- ಆದರ್ಶಗಳನ್ನು ಹಂಚಿಕೊಂಡ ಗೆಳೆಯನೊಬ್ಬ ಕೂಡ "ನಿಮ್ಮ ದೇವೇಗೌಡ ಕುಮಾರಸ್ವಾಮಿ ದುಡ್ಡು ಮಾಡಿಲ್ವ? ನಮ್ಮ ಯಡ್ಡಿ ದುಡ್ಡು ಹೊಡೆದರೆ ತಪ್ಪೇನು? ಯಡ್ಡಿ ಮತ್ತೆ ಸಿಎಮ್ಮಾಗಬೇಕು" ಎಂದ್...? ನೀನು ಒಕ್ಕಲಿಗ (ಒಂದು ದಿನಕ್ಕೂ ನೇಗಿಲು ಹಿಡಿದು ಉಳುಮೆ ಮಾಡದ ನಾನು ಯಾವ ರೀತಿಯಿಂದ ಒಕ್ಕಲಿಗ?!) ತಾನು ಲಿಂಗಾಯತ ಎಂದು ನೆನಪಿಸಿದ್ದ.


ಜಾತಿ ಮೇಲೆ ಅಷ್ಟೊಂದು 'ಅಭಿಮಾನ'ವಿದ್ದ ಯಡಿಯೂರಪ್ಪ ಹೊಸ ಮುಖ್ಯಮಂತ್ರಿಯನ್ನಾರಿಸುವಾಗ ತಮ್ಮ 'ಜಾತಿ'ಯ ಜಗದೀಶ್ ಶೆಟ್ಟರ್‌ರನ್ನು ಬೆಂಬಲಿಸಲಿಲ್ಲ! ಬೆಂಬಲಿಸಿ ಗೆಲ್ಲಿಸಿದ್ದು 'ಒಕ್ಕಲಿಗರ' ಸದಾನಂದ ಗೌಡರನ್ನು! ಜಾತಿ ಮರೆತು ಸದಾನಂದ ಗೌಡರನ್ನು ಮುಖ್ಯಮಂತ್ರಿ ಮಾಡಿದ್ದಕ್ಕೆ ಅವರ 'ಜಾತ್ಯತೀತ' ಮನೋಭಾವ ಕಾರಣವಲ್ಲ ಬದಲಾಗಿ 'ನನ್ನ ಮಾತು ಕೇಳ್ಕೊಂಡು ಬಿದ್ದಿರ್ತಾನೆ' ಎಂಬ ಮನೋಭಾವ. ಆದರೆ ಆಗಿದ್ದೇ ಬೇರೆ. ಗುರುವಿಗೇ ತಿರುಮಂತ್ರ ಹಾಕಿದ ಸದಾನಂದ ಗೌಡರು ಯಡ್ಡಿಯ ಮಾತು ಕೇಳಲಿಲ್ಲ. ಗೊಂದಲಗೊಂಡ ಯಡ್ಡಿ ಕೋಪತಾಪ ಪ್ರದರ್ಶಿಸಲಾರಂಭಿಸಿ ದಾಗ ಸದಾನಂದ ಕೂಡ ಮೊರೆ ಹೋದದ್ದು ಜಾತಿಗೆ! 'ಒಕ್ಕಲಿಗರ ಆಶೀರ್ವಾದದಿಂದ ನಾನು ಮುಖ್ಯಮಂತ್ರಿಯಾದೆ' ಎಂಬ ಹಾಸ್ಯಾಸ್ಪದ ಹೇಳಿಕೆ ನೀಡಿದರು. ಲಿಂಗಾಯತರನ್ನು ಒಕ್ಕಲಿಗರು ತುಳೀತಾವ್ರೆ ಅನ್ನೋ ಯಡ್ಡಿಯ ಮಾತು ಒಂದು ವೃತ್ತ ಪೂರ್ಣಗೊಳಿಸಿ ಒಕ್ಕಲಿಗರನ್ನು ಲಿಂಗಾಯತರು ತುಳೀತಾವ್ರೆ ಅನ್ನೋ ಮಾತಾಯಿತು. ಲಿಂಗದೋರಿಗಿಂತ ನಾವೇನು ಕಡಿಮೆ ಎಂದ್ಹೇಳುತ್ತ ಒಕ್ಕಲಿಗ ಮಠಾಧಿಪತಿಗಳೂ ಖಾವಿ ಪಂಚೆ ಕೊಡವಿಕೊಳ್ಳುತ್ತಾ 'ಫೀಲ್ಡಿಗಿಳಿದರು.'

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಡ್ಡಿಗಾಗಲೀ, ಸದುಗಾಗಲೀ ಜಾತಿಯು ನೆನಪಾಗಿದ್ದು ಅಧಿಕಾರ ಕಳೆದುಕೊಳ್ಳುವ ಗಳಿಗೆಯಲ್ಲಿ ಮಾತ್ರ. ಜಾತಿ ಸಮುದಾಯದ ಏಳಿಗೆಯ ಬಗ್ಗೆ ಮಾತನಾಡಲಿಲ್ಲ, ಆ ಸಮುದಾಯದ ಜನರ ಕಷ್ಟಸುಖ... ಬಗ್ಗೆ ವಿಚಾರಿಸಲಿಲ್ಲ. ಆದರೆ ಜಾತಿ ಹೆಸರಿಡಿದು ತ... ರಾಜಕೀಯ ಬೇಳೆ ಬೇಯಿಸಿಕೊಳ್ಳುವಲ್ಲಿ ಹಿಂದೆ ಬೀಳಲಿಲ್ಲ. ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದ ಜನ 'ನಮ್ಮ ನಾಯಕ'ರಷ್ಟೇ ನಾವೂ ನಿಕೃಷ್ಟರು ಎಂದು ನಿರೂಪಿಸುತ್ತಿರುವುದು ಕರ್ನಾಟಕದ ಸಾಂಸ್ಕೃತಿಕ ರಾಜಕೀಯ ಅಧಃಪತನವೆಂಬುದರಲ್ಲಿ ಸಂಶಯವಿಲ್ಲ.

ಈ ಲಿಂಗದೋರು ಮತ್ತು ಗೌಡ್ರು ಗದ್ದಲದಲ್ಲಿ ಉಳಿದ ಜಾತಿ, ಧರ್ಮಗಳವರ ಪಾಡೇನು? ಕನ್ನಡಿಗರ ಪಟ್ಟಿಯಲ್ಲಿ ಎಲ್ಲ ಜಾತಿ ಧರ್ಮದವರೂ ಇದ್ದಾರಲ್ಲವೇ?!

● ಡಾ.ಕೆ.ಆರ್.ಅಶೋಕ್, ಸುಳ





ಬಂದ್ ವಾತಾವರಣ....

ಮಂತ್ರಿಯಾಗದ ಹಾಲಾಡಿ....

...ೂ ಹೇಳತೀರದು. ಕಳ್ಳಗೊಬ್ಬರದ ವ್ಯಾಪಾರಿ ...ಕಲ್ಲಡ್ಕ-ಕೊಡ್ಡಿಗೆಲ್ಲ ಕಾಣಿಕೆ ಕೊಟ್ಟು-ಕೊಟ್ಟೇ ...ಾದ ರೋಚಕ ಕತೆಗಳಿವೆ....

...ಾಡಿ ಬಿಜೆಪಿಯ ಉಳಿದ ಶಾಸಕರಂತೆ ಕಲ್ಲಡ್ಕಭಟ್ಟನ ...ಿಡ್ಡಿಗೆ ಹೋಗುತ್ತಲೇ ಇರಲಿಲ್ಲ; ಆತನ ಕಾಲಿಗೆ ...ಿಲ್ಲ. ಆತ ಹೇಳಿದಾಗ ಕಾಸಂತೂ ಕೊಡುವುದು ...ಿಲ್ಲ. ಕಲ್ಲಡ್ಕ ಭಟ್ಟ ತನ್ನ ಚಿಡ್ಡಿ ಶಾಲೆಗೆ ...ಸ್"ಸಂಗ್ರಹಿಸಿ ಕೊಡೆಂಧಾಗಲೂ ಈತ ಒಪ್ಪಿರಲಿಲ್ಲ. ...ಸಂಘರ್ಷವಾದಾಗ ಕಲ್ಲಡ್ಕ ಭಟ್ಟ ತನ್ನ ಕ್ಷೇತ್ರಕ್ಕೆ ..., ಹಿಂದೂತ್ವದ ಹೆಸರಲ್ಲಿ ಕುಂದಾ ಪುರದ ...ಡಿಸುವುದು ಹಾಲಾಡಿಗೆ ಸಹ್ಯವಾಗಿರಲಿಲ್ಲ. "ನನ್ನ ...ಸ್ಥಿತಿ, ನಾನು ನಿಭಾಯಿಸ್ತೇನೆ.... ನೀವು ಬರುವುದು ... ಎಂದು ಹಾಲಾಡಿ ನೇರವಾಗೇ ಭಟ್ಟನಿಗೆ ...ದ್ದರು. ಈ ವೈಮನಸ್ಸು ಕೋಟ್ಯಂತರ ರೂಪಾಯಿ ...ದ ಕೊಲ್ಲೂರು ಮೂಕಾಂಬಿಕಾ ದೇವಾಲಯ ...ಟ್ರಸ್ಟ್ ಆಯ್ಕೆ ಹೊತ್ತ ಸ್ಫೋಟಿಸಿ ಬಿಟ್ಟಿತು!

...ಕ್ಕನ ಚಿಡ್ಡಿ ಗರಡಿಯಲ್ಲಿ ಪಳಗಿದ ಪಕ್ಕಾ ...ತಕ ಕೃಷ್ಣಪ್ರಸಾದ್ ಆಡ್ಯಂತಾಯನನ್ನು ... ದೇವಳದ ಆಡಳಿತ ಮೊಕ್ತೇಸರನಾಗಿ ...ಹಠಾತ್ ನೇಮಿಸಿದಾಗ ಶಾಸಕ ಹಾಲಾಡಿ ... ತಿರುಗಿಬಿದ್ದೇ ಬಿಟ್ಟರು. ತನ್ನ ಕ್ಷೇತ್ರದ ...ದೇವಾಲಯದ ಆಡಳಿತಗಾರರ ನೇಮಿಸು ... ತನಗೊಂದು ಮಾತು ಕೇಳದಿದ್ದುದು ...ಮುನ್ನು ಕೆರಳಿಸಿತ್ತು. ಅಲ್ಲದೆ ಯಾವುದೇ ...ರಲಿ ಮೂಕಾಂಬಿಕಾ ದೇವಾಲಯದ ...ರರ ಆಯ್ಕೆ ಮಾಡುವುದೇ ಸ್ಥಳೀಯ ಶಾಸಕನ ಮರ್ಜಿಯಂತೆ. ಹೀಗಿರುವಾಗ ತನಗಾಗದ-ಕುಂದಾಪುರ ದವನಲ್ಲದ ಆಡ್ಯಂತಾಯನ ಕೈಗೆ ಕಲ್ಲಡ್ಕ ಭಟ್ಟ ಕೊಲ್ಲೂರು ದೇವಸ್ಥಾನ ಒಪ್ಪಿಸಿದ್ದು ಹಾಲಾಡಿಯಲ್ಲಿ ಬಿಜೆಪಿಯಲ್ಲಿನ ಆರೆಸ್ಸೆಸ್ ವ್ಯವಸ್ಥೆಯ ಬಗ್ಗೆ ಹೇಸಿಗೆ ಮೂಡಿಸಿಬಿಟ್ಟಿತು.

ಕಲ್ಲಡ್ಕ ಭಟ್ಟನಿಗೆ ಪಾಠ ಕಲಿಸಲು ಹಾಲಾಡಿ ಸಮಯ ಕಾಯುತ್ತಲೇ ಇದ್ದರು. ಆಡ್ಯಂತಾಯ ಒಂದು ಟರ್ಮ್ ಮುಗಿಸೋತನಕ ತಾಳ್ಮೆಗೆಡಲಿಲ್ಲ. ಕೊಲ್ಲೂರು ದೇವಾಲಯದಲ್ಲಿ ದೇಶಭಕ್ತ ಚಿಡ್ಡಿ ಸಂಕಲು ಆಧ್ವಾನ ಎಬ್ಬಿಸಿತ್ತು. ಅವ್ಯವಹಾರ ಅತಿಯಾಗಿತ್ತು. ಕಲ್ಲಡ್ಕನ ಪರಮ ಶಿಷ್ಯ ಆಡ್ಯಂತಾಯ ಕೋಟ್ಯಂತರ ರೂಪಾಯಿ ಅವ್ಯವಹಾರ ಮಾಡಿದ್ದ. ದೇವರ ದುಡ್ಡೇ ಈ ಹಿಂದೂಧೀರರು ತಿಂದು ತೇಗಿದ್ದರು. ಕಲ್ಲಡ್ಕ ಭಟ್ಟನ ಯಜಮಾನಿಕೆಯ ಶಾಲೆಗಳಿಗೆ ಕೋಟಿ-ಕೋಟಿ ದೇವಳ ಹುಂಡಿಯಿಂದ ಮೊಗೆಮೊಗೆದು ಕೊಡಲಾಗಿತ್ತು. ಇದೆಲ್ಲ ದಾಖಲೆ ಸಮೇತ ಹೊರತೆಗೆದು ಹಾಲಾಡಿ ಎರಡನೇ ಅವಧಿ ಮತ್ತೆ ಮ್ಯಾನೇಜಿಂಗ್ ಟ್ರಸ್ಟಿಯಾಗಿದ್ದ ಆಡ್ಯಂತಾಯ ಪದಚ್ಯುತಗೊಳಿಸಿದರು. ಕಲ್ಲಡ್ಕ ಭಟ್ಟನ ಕಿತಾಪತಿಯಿಂದ ಮತ್ತೆ ಆಡ್ಯಂತಾಯ ಒಕ್ಕರಿಸಿದಾಗ ಹಾಲಾಡಿ ಜಿದ್ದಿಗೆ ಬಿದ್ದರು. ಅವ್ಯವಹಾರಿ ಆಡ್ಯಂತಾಯನನ್ನು ಮನೆಗೆ ಕಳಿಸಿದರು. ಅಲ್ಲಿಗೆ ಹಾಲಾಡಿ V/s ಕಲ್ಲಡ್ಕ ಕದನಕ್ಕೆ ಕ್ಲೈಮ್ಯಾಕ್ಸ್ ಬಂದಿತ್ತು!!

ಸೇಡು ತೀರಿಸಿಕೊಳ್ಳಲು ಕಲ್ಲಡ್ಕ ಬುಸುಗುಡುತ್ತಲೇ ಇದ್ದ. ಹಾಲಾಡಿಗೆ ಮುಖಭಂಗ ಮಾಡಿ ಕ್ಷೇತ್ರದಲ್ಲಿ ಆತ ಬಿಜೆಪಿಯಲ್ಲಿ ಕಿಮ್ಮತ್ತಿಲ್ಲದವನೆಂದು ಬಿಂಬಿಸಲು ಸ್ಕೆಚ್ ಹಾಕಿಕೊಂಡಿದ್ದ. ಅದಕ್ಕೆ ಮುಹೂರ್ತ ಮೊನ್ನೆ ನಡೆದ ಬಿಜೆಪಿ ಸರ್ಕಸ್ ಕಂಪನಿಯ ಕ್ಯಾಬಿನೆಟ್ ರಚನೆ ಹೊತ್ತಲ್ಲಿ ಸಿಕ್ಕಿದೆ. ಹಾಲಾಡಿಗೆ "ನಿನ್ನ ಮಂತ್ರಿ ಮಾಡ್ತೀವಿ..... ಬೆಂಗ್ಳೂರಿಗೆ ಬಾ....." ಎಂದು ಮಂತ್ರಿಮಂಡಲ ರಚನೆಯಾಗುವ ಮೊದಲಿನ ರಾತ್ರಿ 12.30 ಕ್ಕೆ ಕುಂದಾಪುರದ ಹಾಲಾಡಿ ಮನೆಯಲ್ಲಿ ಕಂಬಳಿ ಹೊದ್ದು ಮಲಗಿದ್ದ ಹಾಲಾಡಿ ಶೆಟ್ಟರಿಗೆ ಫೋನಾಯಿಸಿ ಎಬ್ಬಿಸಿ ಆಸೆ ಹುಟ್ಟಿಸಿದ್ದಾರೆ. ರಾತ್ರೋರಾತ್ರಿ ಹಳೆ-ಅಂಗಿ-ಪ್ಯಾಂಟನ್ನೇ ಹಾಕಿಕೊಂಡು ಹೊರಟಿದ್ದಾರೆ ಹಾಲಾಡಿ ಪಾಪ! ಬೆಂಗಳೂರು ಶಾಸಕರ ಭವನದಲ್ಲಿ ಮಂತ್ರಿಯಾಗಲು ಸಿದ್ಧರಾಗಿ ಕುಳಿತಿದ್ದ ಹಾಲಾಡಿಗೆ ಅಧಿಕೃತ ಆಹ್ವಾನ ಬರಲೇ ಇಲ್ಲ.

ವಂಚನೆಯಿಂದ ಹಾಲಾಡಿ ಕನಲಿಹೋದರು. ಇದಕ್ಕಿಂತಲೂ ಆತನಿಗೆ ಮತ್ತೊಂದು ದೊಡ್ಡ ಅವಮಾನ ವಾಗಿತ್ತು. ಅದೆಂದರೆ ಕುಂದಾಪುರದವರೇ ಆದ, ತನಗಿಂತ ತುಂಬ ಜೂನಿಯರ್ ಆದ ಜಿಪಂ ಸದಸ್ಯನಾಗಲಿಕ್ಕೂ ಒದ್ದಾಡುತ್ತಿದ್ದ, ಹೇಗ್ಹೇಗೋ ಎಮ್ಮೆಲ್ಸಿಯಾದ ಕೋಟಾ ಶ್ರೀನಿವಾಸ್ ಪೂಜಾರಿ ಎಂಬ ಅಬ್ಬೇಪಾರಿಯನ್ನು ಮಂತ್ರಿ ಮಾಡಲಾಗಿತ್ತು. ಇದು ಹಾಲಾಡಿ ಗ್ಯಾಂಗಿಗೆ ಸಹಿಸಲಸಾಧ್ಯವಾದ ಕಲ್ಲಡ್ಕನ ಕಿತಾಪತಿಯಾಗಿತ್ತು. ಇದರಿಂದ ಹಾಲಾಡಿಗೆ ಯಾವ ಪರಿ ಸಿಟ್ಟು ಬಂದಿತೆಂದರೆ, ಬಿಜೆಪಿಗೇ ಗುಡ್‌ಬೈ ಹೇಳುವುದಕ್ಕೆ ಆತ ಮಾನಸಿಕವಾಗಿ ಸಿದ್ಧರಾಗಿಬಿಟ್ಟರು. ಈಗಾತ ಶಾಸಕತ್ವಕ್ಕೆ ರಾಜೀನಾಮೆಯನ್ನೂ ಕೊಟ್ಟಾಗಿದೆ. ಬಿಜೆಪಿ ಬಿಡುವುದೂ ಖಾತ್ರಿಯಾಗಿದೆ.

ಒಂದಂತೂ ಖರೆ. ಹಾಲಾಡಿ ಎಂದೂ ತನ್ನನ್ನು ಮಂತ್ರಿ ಮಾಡಿ ಎಂದು ಯಾವ ದೊಣ್ಣೆ ನಾಯಕನ ಮುಂದೂ ಮಂಡಿಯೂರಿ ಬೇಡಿದವರಲ್ಲ. ಕಾರ್ಪೊರೇಷನ್ ಗೂಟದ ಕಾರು ಕೊಡಿ ಎಂದವರಲ್ಲ; ಪಾರ್ಟಿಯಲ್ಲಿ ಪೊಜಿಷನ್ ಕೊಡಿ ಎಂದು ಗೋಗರೆದವರಲ್ಲ. ಅಂಥಾದ್ದರಲ್ಲಿ ಕಲ್ಲಡ್ಕ ತನ್ನ ತೆವಲು ತೀರಿಸಿಕೊಳ್ಳಲು ಹಾಲಾಡಿಗೆ ಮೋಸ-ವಂಚನೆ ಮಾಡಿದ್ದು ಆತನ ಚಿಡ್ಡಿ ಬುದ್ಧಿಗೆ ತಕ್ಕಂತೆಯೇ ಇದೆ! ಆದರೆ ಕಲ್ಲಡ್ಕನ ಧರ್ಮಾಧಾರಿತ ಪಾಳೆಗಾರಿಕೆ ಇವತ್ತು ಕುಂದಾಪುರದ ಜನರ ಸ್ವಾಭಿಮಾನ ಕೆರಳಿಸಿದೆ. ಜನ ರೊಚ್ಚಿಗೆದ್ದು ಬೀದಿಗೆ ಬಂದು ಕಲ್ಲಡ್ಕನಿಗೆ, ಆತನಿಗೆ ಒತ್ತೆಯಾಗಿರುವ ಕರಾವಳಿ ಬಿಜೆಪಿಗೆ ಧಿಕ್ಕಾರ ಕೂಗುತ್ತಿದ್ದಾರೆ. ಬಂದ್- ಪ್ರತಿಭಟನೆಗಳು ನಡೆದುಹೋಗಿವೆ.



ಈಗ ಕುಂದಾಪುರದಲ್ಲಿ ಬಿಜೆಪಿಯೆಂಬುದಂತೂ ಇಲ್ಲವಾಗಿದೆ! ಮೈನಸ್ ಹಾಲಾಡಿ ಕುಂದಾಪುರದಲ್ಲಿ ಬಿಜೆಪಿ ಝೀರೋ! ಕಲ್ಲಡ್ಕ ಭಟ್ಟನ ಸವಾರಿಯಿಂದ ಕಂಗೆಟ್ಟಿರುವ ಕರಾವಳಿ ಬಿಜೆಪಿಯ ಮತ್ತಷ್ಟು ಶಾಸಕರೀಗ ಬಾಲ ಬಿಚ್ಚುತ್ತಿದ್ದಾರೆ. ಕರಾವಳಿಯಲ್ಲಿ ಬಿಜೆಪಿಯನ್ನು ಮುಗಿಸಲು ಕಲ್ಲಡ್ಕ ಭಟ್ಟನೊಬ್ಬನೇ ಸಾಕು ಅಲ್ಲವಾ?

ಶ್ರೀ


ಪಶ್ಚಿಮಘಟ್ಟಗಳು ಸಂರಕ್ಷಿಸಲ್ಪಟ್ಟಿಲ್ಲವೇ?

...ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ... ಆದರೆ ಅರಣ್ಯ ಇಲಾಖೆಯು ಈ ಬಗ್ಗೆ ತನ್ನ ...ಲ್ಲಿ ಏನೂ ಮಾತನಾಡದೆ, ಆನೆಗಳ ಕುರಿತಂತೆ ...ಬಂಧವನ್ನು ನ್ಯಾಯಾಲಯಕ್ಕೆ ಸಲ್ಲಿಸಿತು. ಇದರಲ್ಲಿ ...ಸಂಖ್ಯೆಯೂ ದುಪ್ಪಟ್ಟು ಆಗಿರುವುದನ್ನು ಅರಣ್ಯ ...ಒಪ್ಪಿಕೊಂಡಿದೆ. ಆದರೆ ಅರಣ್ಯ ಪ್ರದೇಶವು ಕಡಿಮೆ ... ಎಂದು ಇಲಾಖೆ ನ್ಯಾಯಾಲಯಕ್ಕೆ ... ವಿಚಿತ್ರವೆಂದರೆ ಖಾಸಗಿ ಜಮೀನಿ... ಅರಣ್ಯ ಮತ್ತು ಕಂದಾಯ ಜಮೀನಿ... ಅರಣ್ಯ ಪ್ರದೇಶವು ಕಡಿಮೆಯಾಗಿದೆ ...ಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ...ದೆ. ಅರಣ್ಯ ಪ್ರದೇಶ ಕಡಿಮೆಯಾಗಿದೆ ... ಅರಣ್ಯ ಇಲಾಖೆಯವರು ಅರಣ್ಯ ...ನ್ನು ಮಾರಾಟ ಮಾಡಿದ್ದಾರೆಯೇ ...ನ್ನು ಅವರೇ ಹೇಳಬೇಕು.

ವರದಿಯು ಎಷ್ಟೊಂದು ...ಂಧ ಕೂಡಿದೆ ಎಂದರೆ ಮಾನವ-ಆನೆ ... ಹೆಚ್ಚಾಗಿದ್ದು, ಕೃಷಿಕರು ತಮ್ಮ ...ಲ್ಲಿ ಆನೆಗಳು ಹಾವಳಿ ಮಾಡಿದಾಗ, ...ರಿಸಿಕೊಳ್ಳಲು ಆನೆಗಳನ್ನು ಗುಂಡಿಟ್ಟು ...ದ್ದಾರೆ ಎಂದು ಹೇಳಿದ್ದಾರೆ. ಕೊಡಗಿನಲ್ಲಿ ...ಂದೇ ಒಂದು ಪ್ರಕರಣ ದಾಖಲಾಗಿಲ್ಲ ... ಗಮನಾರ್ಹ ವಿಚಾರ. ಆದರೂ ಅರಣ್ಯ ಇಲಾಖೆ ...ನವ ಸಂಘರ್ಷ ಎಂದು ಹೇಳುತ್ತಲೇ ಇದೆ. ...ೇ ಅಂಕಿಅಂಶಗಳನ್ನು ನ್ಯಾಯಾಲಯಕ್ಕೆ ಸಲ್ಲಿಸದೆ, ...ವರದಿಯನ್ನು ಸಲ್ಲಿಸಿದೆ.

...ಸ್ತ್ರಿ ಪರಿಹಾರವಾಗಿ ಕೊಡಗಿನಲ್ಲಿ ಅರಣ್ಯದ ವ್ಯಾಪ್ತಿಯ ...ೂ. ಸುತ್ತಳತೆಯಲ್ಲಿ ವಾಸಿಸುವವರ ಬಳಿ ಇರುವ ...ನ್ನು ಹಿಂದಕ್ಕೆ ಪಡೆಯಲು ಯೋಜನೆಗಳನ್ನು ...ಾಗುತ್ತಿದೆ ಎಂದು ಅರಣ್ಯ ಇಲಾಖೆ ಹೇಳಿದೆ. ...ಜಿಲ್ಲೆಯಲ್ಲಿ ಜಮ್ಮಾ ಹಿಡುವಳಿದಾರರಿಗೆ ಪರವಾಗಿ ...ಹಿಡುವಳಿಯನ್ನು ಇಟ್ಟುಕೊಳ್ಳುವ ಹಕ್ಕು ಇದೆ. ಅಲ್ಲದೆ ...ದ "ಕೊಡವ"ರಾಗಿದ್ದರೆ ಅವರಿಗೂ ಇದೇ ನಿಯಮ ...ಾಗುತ್ತದೆ. ಇದು ಕೊಡಗಿಗೆ ಇರುವಂತಹ ಒಂದು ವಿಶೇಷವಾದ ಸವಲತ್ತು. ಅರಣ್ಯ ಇಲಾಖೆ ಇದನ್ನು ರದ್ದುಪಡಿಸಲು ಪ್ರಯತ್ನಿಸುತ್ತಿದೆ ಎನ್ನುವುದು ಅವರ ವರದಿಯಿಂದ ಸ್ಪಷ್ಟವಾಗುತ್ತದೆ.

ಅಲ್ಲದೆ ಪಶ್ಚಿಮಘಟ್ಟ ಪ್ರದೇಶದಲ್ಲಿಯೇ ಸಾಕಷ್ಟು ಎನ್‌ಕ್ಲೋಜರ್‌ಗಳು ಇವೆ. ಇವೆಲ್ಲವೂ ಖಾಸಗಿ ಪ್ರದೇಶವಾಗಿದೆ. ಕೊಡಗು ಜಿಲ್ಲೆಯ ಎಲ್ಲಾ 16 ಹೋಬಳಿಗಳನ್ನು ಪಶ್ಚಿಮಘಟ್ಟ ಪ್ರದೇಶವೆಂದು ಈಗಾಗಲೇ ಪಶ್ಚಿಮಘಟ್ಟ ಕಾರ್ಯಪಡೆ ಘೋಷಿಸಿದೆ. ಕೊಡಗು ಜಿಲ್ಲೆಯನ್ನು ಸೂಕ್ಷ್ಮ ಪರಿಸರ ವಲಯವೆಂದು ಘೋಷಿಸಲು ಯತ್ನಗಳು ನಡೆಯುತ್ತಿವೆ. 'ಪಶ್ಚಿಮಘಟ್ಟ ಪ್ರದೇಶಕ್ಕೆ ಸಂಬಂಧಪಟ್ಟಂತೆ ಮಾಧವ ಗಾಡ್ಗಿಲ್ ಸಮಿತಿ ನೀಡಿರುವ ವರದಿ ಕೊಡಗಿನ ಜನತೆಗೆ ಆತಂಕಕಾರಿಯಾಗಿದೆ. ಇದರ ಪ್ರಕಾರ ಕೊಡಗಿನ ಜೀವನಾಧಾರ ಕೃಷಿಯಾದ ಕಾಫಿಯನ್ನು ಬೆಳೆಸುವಂತಿಲ್ಲ, ರಾಸಾಯನಿಕ ಗೊಬ್ಬರವನ್ನು ಕೂಡ ಬಳಸುವಂತಿಲ್ಲ. ಈಗಾಗಲೇ ಕೆಲವು ಪರಿಸರವಾದಿಗಳು ಕೊಡಗು ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸವನ್ನು ಮಾಡದೆ ಯಥಾಸ್ಥಿತಿಯನ್ನು ಕಾಪಾಡಬೇಕು ಎಂದು ಮಾಧವ ಗಾಡ್ಗಿಲ್ ಸಮಿತಿಗೆ ಶಿಫಾರಸ್ಸು ಮಾಡಿದೆ.



ಇದನ್ನು ಸಮರ್ಥಿಸುವ ರೀತಿಯಲ್ಲಿ ಪಾಂಡುರಂಗ ಹೆಗಡೆ ಎಂಬ ಪರಿಸರವಾದಿ 'ಕೊಡಗಿನ ಒಂದೆರಡು ಜನಪ್ರತಿನಿಧಿಗಳು ಮಾತ್ರ ಇದನ್ನು ವಿರೋಧಿಸುತ್ತಾರೆ. ಅವರಿಗೆ ಕಾಫಿ ಕೃಷಿ ಮತ್ತು ಗಣಿಗಾರಿಕೆಯ ಚಿಂತೆ ಮಾತ್ರ' ಎಂದು ಹೇಳಿಕೊಂಡಿದ್ದಾರೆ. ಕೊಡಗು ಹೇಳಿಕೇಳಿ ಕೃಷಿ ಪ್ರಧಾನ ಜಿಲ್ಲೆ, ಭತ್ತ, ಕಾಫಿ, ಕರಿಮೆಣಸು ಇಲ್ಲಿಯ ಜೀವನಾಧಾರ. ಹಾಗಾಗಿ ಜಿಲ್ಲೆಯ ಜನಪ್ರತಿನಿಧಿಗಳಾಗಿ, ಜಿಲ್ಲೆಯ ಜನತೆಯ ಸಂರಕ್ಷಣೆ ಮಾಡುವುದು ಅವರ ಕರ್ತವ್ಯವಾಗಿದೆ.

ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಅರಣ್ಯದ ಹತ್ತು ಹಲವು ಕಾರ್ಯಕ್ರಮಗಳು ನಡೆದಿದೆ ಮತ್ತು ನಡೆಯುತ್ತಲೇ ಇದೆ. ವಿಚಿತ್ರವೆಂದರೆ ಇದ್ಯಾವುದೂ ಜಿಲ್ಲೆಯನ್ನು ಪ್ರತಿನಿಧಿಸುವ ಶಾಸಕರುಗಳ ಗಮನಕ್ಕೆ ಬರುವುದಿಲ್ಲ. ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿಯ ಗಮನಕ್ಕೆ ಬಾರದೆ ಇರುವುದರಿಂದ, ಶ್ರೀಸಾಮಾನ್ಯನಿಗೂ ಇದು ತಿಳಿಯುವುದು ಅಸಾಧ್ಯ. ಎಲ್ಲಾ ತೀರ್ಮಾನಗಳನ್ನು ಅರಣ್ಯ ಇಲಾಖೆ ತೆಗೆದುಕೊಳ್ಳುವುದು ಪರಿಸರವಾದಿಗಳ ತಾಳಕ್ಕೆ ತಕ್ಕಂತೆ. ಇಲ್ಲಿ ಜನಪ್ರತಿನಿಧಿಗಳು ಎನ್ನುವವರು ಅರಣ್ಯ ಇಲಾಖೆಗೆ ನಿಕೃಷ್ಟ.

ಮತ್ತೊಂದು ಕಡೆ ಈ ಎಲ್ಲಾ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಹೇಳುತ್ತಾರೆ. ಆಕ್ಷೇಪಣೆಗಳು ಇದ್ದರೂ ವೆಬ್‌ಸೈಟ್ ಮೂಲಕವೇ ಸಲ್ಲಿಸಬೇಕು ಎಂದು ಹೇಳಲಾಗುತ್ತದೆ. ಇಂತಹ ಪ್ರದೇಶದಲ್ಲಿ ವೆಬ್‌ಸೈಟ್ ಅಂದರೆ ಏನು ಎಂಬುದು ಎಷ್ಟು ಜನರಿಗೆ ತಿಳಿದಿದೆ? ಕಂಪ್ಯೂಟರ್ ಎಷ್ಟು ಜನರಲ್ಲಿದೆ? ಇಂಟರ್‌ನೆಟ್ ಎಷ್ಟು ಜನರ ಬಳಿ ಇದೆ? ಈ ಎಲ್ಲಾ ಪ್ರದೇಶಗಳು ಅರಣ್ಯದ ಒತ್ತಿನಲ್ಲಿ ಇರುವುದರಿಂದ ಅರಣ್ಯ ಇಲಾಖೆಯ ಆಕ್ಷೇಪದಿಂದಲೇ ಸಾಕಷ್ಟು ಕಡೆ ವಿದ್ಯುತ್ ಸಂಪರ್ಕವೂ ಇಲ್ಲ, ಇದ್ದರೂ ಇದನ್ನು ಉಪಯೋಗಿಸಲು ಎಷ್ಟು ಜನರಿಗೆ ತಿಳಿದಿದೆ? ಇಂತಹ ಪ್ರಶ್ನೆಗಳನ್ನು ಯಾರೂ ಚರ್ಚಿಸುತ್ತಿಲ್ಲ.


ಅರಣ್ಯ ಪ್ರದೇಶದಲ್ಲಿ ಗಾಂಜಾ ಬೆಳೆಸಲಾಗುತ್ತಿದೆ. ಸಾಕಷ್ಟು ಪ್ರದೇಶದಲ್ಲಿ ಪ್ರಾಣಿಗಳಿಗೆ ಆಹಾರವೇ ಸಿಗದ ರೀತಿಯಲ್ಲಿ ತೇಗದ ಮರಗಳನ್ನು ನೆಡಲಾಗಿದೆ. ತೇಗದ ಮರ ಇರುವಲ್ಲಿ ಇತರೆ ಯಾವುದೇ ಜಾತಿಯ ಮರಗಿಡಗಳು ಬೆಳೆಯುವುದಿಲ್ಲ, ಬಿದಿರು ಕಟ್ಟೆ ರೋಗಕ್ಕೆ ತುತ್ತಾಗಿದ್ದು ಆನೆಗಳಿಗೆ ಆಹಾರ ಇಲ್ಲದಂತಾಗಿದೆ. ಇದ್ಯಾವುದನ್ನೂ ಅರಣ್ಯ ಇಲಾಖೆ ಅಥವಾ ಪರಿಸರವಾದಿಗಳು ಎನ್ನುವವರು ಹೇಳುವುದೇ ಇಲ್ಲ.

ಇಷ್ಟೆಲ್ಲಾ ಅಪಾಯಗಳನ್ನು ಜನತೆ ಇಲ್ಲಿಯವರೆಗೆ ಎದುರಿಸುತ್ತಾ ಬಂದಿರುವುದರಿಂದ ಸಹಜವಾಗಿ ಆತಂಕ ಕಾಡುತ್ತಿದೆ. ಅರಣ್ಯ ಇಲಾಖೆ ಬೆರಳು ತೋರಿದರೆ ಹಸ್ತ ನುಂಗುವ ಜಾತಿಯಲ್ಲ, ಬದಲಿಗೆ ಸಂಪೂರ್ಣವಾಗಿ ಶರೀರವನ್ನು ನುಂಗುವ ಜಾತಿಯಾದ ಕಾರಣ ಈ ಭಯವಿದೆ. ಪರಿಸರವಾದಿಗಳು ಎಂದು ಹೇಳಿಕೊಳ್ಳುವವರು ವಿದೇಶಿ ದೇಣಿಗೆಗಾಗಿ ತಮ್ಮನ್ನು ತಾವು ಮಾರಿಕೊಂಡವರು ಮತ್ತು ದೇಶವನ್ನು ಮಾರಲು ಹಿಂದೇಟು ಹಾಕದವರು ಎಂಬ ಭಾವನೆ ಕೊಡಗು ಜಿಲ್ಲೆಯಲ್ಲಿ ಇರುವುದರಿಂದ ಅವರುಗಳನ್ನು "ಡೋಂಗಿ ಪರಿಸರವಾದಿ"ಗಳು ಎಂದು ಕೊಡಗಿನಲ್ಲಿ ಸಂಭೋದಿಸುತ್ತಾರೆ. ಇವರಿಂದಾಗಿ ಕಾಡು ನಾಶವಾಗಿ ಅಥವಾ ರೈತನ ಜೀವನ ನರಕ ಸದೃಶ್ಯವಾಗಿ ಕೊಡಗು ಜಿಲ್ಲೆಯಲ್ಲಿಯೂ ನಕ್ಸಲೈಟ್ ಚಟುವಟಿಕೆ ಹಬ್ಬಬಹುದು ಎಂಬ ಆತಂಕವೂ ಕೊಡಗಿನ ಜನತೆಯನ್ನು ಕಾಡುತ್ತಿದೆ. ಬಹುಶಃ ಇಂತಹದೇ ಆತಂಕ ರಾಜ್ಯದ ವಿವಿಧ ಭಾಗದ ಜನತೆಗೂ ಕಾಡುತ್ತಿರಬಹುದು. ಸ್ಥಳೀಯವಾಗಿ ಅಲ್ಲಿಯದೇ ಸಮಸ್ಯೆಗಳು ಇರಬಹುದು. ಆದ್ದರಿಂದಲೇ ರಾಜ್ಯ ಸರಕಾರವು ವಿಶ್ವ ಪಾರಂಪರಿಕ ತಾಣಕ್ಕೆ ಪಶ್ಚಿಮಘಟ್ಟವನ್ನು ಸೇರ್ಪಡೆಗೊಳಿಸಲು ವಿರೋಧವನ್ನು ವ್ಯಕ್ತಪಡಿಸುತ್ತಿದೆ.

ಮತ್ತೊಂದು ವಿಚಿತ್ರವನ್ನು ಇಲ್ಲಿ ದಾಖಲಿಸಬೇಕಾಗಿದೆ. ಹುಲಿ ಸಂರಕ್ಷಣೆಗೆ ಹಲವಾರು ಸ್ವಯಂಸೇವಾ ಸಂಸ್ಥೆಗಳು, ಪರಿಸರವಾದಿಗಳ ಸೋಗಿನಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಇವರಿಗೆ ಕೋಟ್ಯಾಂತರ ರೂಪಾಯಿ ವಿದೇಶಿ ದೇಣಿಗೆ ಹರಿದುಬರುತ್ತಿದೆ. ಆದರೆ ಹುಲಿಗಳ ಸಂಖ್ಯೆ ಹೆಚ್ಚಾಗಲೇ ಇಲ್ಲ. ವಿಪರ್ಯಾಸವೆಂದರೆ ಆನೆಗಳ ಸಂರಕ್ಷಣೆಗಾಗಿ ಹಣವೇ ಬರುತ್ತಿಲ್ಲ, ಆದರೆ ಆನೆಗಳ ಸಂಖ್ಯೆ ಬಹುತೇಕ ಮೂರು ಪಟ್ಟು ಆಗುವ ಸ್ಥಿತಿಯಲ್ಲಿ ಇದೆ. ಹಾಗಾಗಿ ಹುಲಿಗಳನ್ನು ಕೂಡ ಈ ಪರಿಸರ ವ್ಯಾಧಿಗಳ ಕಪಿಮುಷ್ಠಿಯಿಂದ ಹೊರಗಿಟ್ಟರೆ, ಹುಲಿಗಳ ಸಂಖ್ಯೆಯು ತನ್ನಿಂದ ತಾನೇ ವೃದ್ಧಿಯಾಗಬಹುದು.

ಶ್ರೀ

ರಾಯಬಾಗ ಶಾಸಕ ಐಹೊಳೆಯ ಗೂಂಡಾಗಿರಿ



ರಾಯಭಾಗದ ಶಾಸಕ ದುರ್ಯೋಧನ ಐಹೊಳೆಯನ್ನು ಯಾವ ಆ್ಯಂಗಲ್ಲಿನಿಂದ ನೋಡಿದರೂ ಆತನಲ್ಲಿ ಶಾಸಕನಾಗುವ ಕನಿಷ್ಠ ಯೋಗ್ಯತೆಯೂ ಕಾಣಿಸದು. ದುರ್ಬೀನು ಹಾಕಿ ಹುಡುಕಿದರೂ ಒಬ್ಬ ಜನಪ್ರತಿನಿಧಿಗೆ ಇರಬೇಕಾದ ಕನಿಷ್ಠ ಅರ್ಹತೆಗಳೂ ಸಿಗದು. ತಾನು ಶಾಸಕನಾಗಿರುವುದೇ ಸಾಧ್ಯವಾದಷ್ಟು ಸಾರ್ವಜನಿಕ ಹಣವನ್ನು ದೋಚಿಕೊಳ್ಳಲು ಮತ್ತು ತನ್ನನ್ನು ವಿರೋಧಿಸುವವರನ್ನೆಲ್ಲ ತುಳಿದು ಹಾಕಲು ಎಂದು ಈತ ತಿಳಿದಿರುವಂತಿದೆ. ಈತನ ಇಂತಹ ಧೋರಣೆಗೆ ಸ್ಪಷ್ಟ ಉದಾಹರಣೆ ಇತ್ತೀಚೆಗೆ 'ಛಲಗಾರ' ಎಂಬ ಸ್ಥಳೀಯ ಪತ್ರಿಕೆಯ ಸಂಪಾದಕ ಪ್ರಭಾಕರ ಹಗ್ಗರಿ ಮೇಲೆ ಐಹೊಳೆಯ ಭಂಟರು ಮಾಡಿರುವ ದಾಳಿ ಮತ್ತು ದಾಳಿಕೋರರನ್ನು ಪೊಲೀಸರು ರಕ್ಷಿಸುತ್ತಿರುವ ರೀತಿ.

ಮೂಲತಃ ಓರ್ವ ಸಾಮಾನ್ಯ ಕಾಂಟ್ರಾಕ್ಟುದಾರನಾದ ಐಹೊಳೆ 2008ರ ಚುನಾವಣೆಯ ಸಂದರ್ಭದಲ್ಲಿ ರಾಜ್ಯ ಮತ್ತು ರಾಯಭಾಗ ಕ್ಷೇತ್ರದಲ್ಲಿ ಸೃಷ್ಟಿಯಾದ ರಾಜಕೀಯ ಪರಿಸ್ಥಿತಿಯ ಲಾಭವನ್ನು ಪಡೆದು ವಿಧಾನಸೌಧದ ಮೆಟ್ಟಿಲನ್ನು ಹತ್ತಿದವನು. ಹಾಗೆ ಅನಾಯಾಸವಾಗಿ ಶಾಸಕನಾದ ಮೊದಲನೆ ವರ್ಷದಲ್ಲೇ ಐಹೊಳೆ ಅದೆಷ್ಟು 'ಜನಸೇವೆ' ಮಾಡಿದನೆಂದರೆ ಆತನ ಮನೆ ಮುಂದೆ ಹಲವಾರು ಹೊಸಹೊಸ ಕಾರುಗಳು ನೋಡುಗರ ಕಣ್ಣುಗಳನ್ನು ಕುಕ್ಕಲಾರಂಭಿಸಿದವು. ಬೇನಾಮಿ ಹೆಸರು ಗಳಲ್ಲಿ ಬೇಕಾಬಿಟ್ಟಿ ಜಮೀನುಗಳನ್ನು ಖರೀದಿಸಿದ. ಜೊತೆಗೆ ಜೆಸಿಬಿ ಯಂತ್ರ ಗಳಿಗೂ ಆತ ಒಡೆಯನಾದ.

ಐಹೊಳೆಯ ಭಂಟರು ತಾಲೂಕಿನ ಯಾವ ಕಚೇರಿಯನ್ನೂ ಬಿಡದಂತೆ ಹಫ್ತಾ ಎತ್ತತೊಡಗಿದರು. ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿಸಿ ಮತ್ತೆ ಅವರಿದ್ದ ಜಾಗಕ್ಕೆ ಅವರನ್ನು ನೇಮಿಸಲು ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡತೊಡಗಿದರು. ಐಹೊಳೆಯ ದರ್ಬಾರಿನಲ್ಲಿ ಈತನ ಒಂದು 'ರೆಕಮೆಂಡೇಶನ್ ಲೆಟರ್'ಗೂ ಸಾವಿರಾರು ರೂಪಾಯಿ 'ಬೆಲೆ' ಬಂದಿತು. ಐಹೊಳೆಯ ಶಾಸಕ ಅವಧಿ ಮುಗಿಯುತ್ತಾ ಬಂದಿದ್ದರೂ ಇಂತಹ ಎಲ್ಲಾ ಘನಕಾರ್ಯಗಳು ಇವತ್ತಿಗೂ ಮುಂದುವರೆದಿವೆ.



ಹಗ್ಗರಿ

ಆದರೆ ಈ ಕ್ಷೇತ್ರದಲ್ಲಿ ಎಂತಹ ವಾತಾವರಣವನ್ನು ಐಹೊಳೆ ಮತ್ತು ಆತನ ಗೂಂಡಾಪಡೆ ಸೃಷ್ಟಿಸಿದೆ ಎಂದರೆ ಇಲ್ಲಿ ಯಾರು ಏನನ್ನೂ ಪ್ರಶ್ನಿಸುವಂತಿಲ್ಲ. 'ಅಭಿವೃದ್ಧಿ' ಬಗ್ಗೆ ಮಾತನಾಡುವಂತಿಲ್ಲ. ಯಾವ ಪತ್ರಿಕೆಯವರು ಐಹೊಳೆಯ ಅಡ್ನಾಡಿ ಕಾರ್ಯಗಳ ಬಗ್ಗೆ ಬರೆಯುವಂತಿಲ್ಲ. ಹಾಗೇನಾದರೂ ಬರೆದರೆ, ಈತನ ಭಂಟರಿಂದ ದೈಹಿಕ ದಾಳಿಗಳಿಗೆ ತುತ್ತಾಗಬೇಕು, ಇಲ್ಲವಾದರೆ ಇಲ್ಲಿನ ಪೊಲೀಸರಿಂದ ಕಿರುಕುಳವನ್ನು ಎದುರಿಸಬೇಕು.

ಇವೆರಡನ್ನೂ ಮಾಡಲು ಒಪ್ಪದ 'ಛಲಗಾರ' ಪತ್ರಿಕೆಯ ಸಂಪಾದಕ ಪ್ರಭಾಕರ ಹಗ್ಗರಿ ಮೇಲೆ ಕಳೆದ ಜೂನ್ 26ರಂದು ಐಹೊಳೆಯ ಭಂಟರು ಮಾರಣಾಂತಿಕವಾಗಿ ದಾಳಿ ಮಾಡಿದ್ದಾರೆ.

ಅವತ್ತು ಹಗ್ಗರಿ ತಮ್ಮ ಸ್ವಗ್ರಾಮ ಹಂದಿಗುಂದ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಆಗ ಐಹೊಳೆಯ ಭಂಟರಾದ ಮಲ್ಲಿಕಾರ್ಜುನ ಅಜ್ಜಪ್ಪಗೋಳ, ಮಹಾಲಿಂಗ ಕಾಳೆ, ರಾಮಚಂದ್ರ ಗಾಯಕವಾಡ ಮತ್ತು ಇತರರು ಅವರ ಮೇಲೆ ಹಲ್ಲೆ ಮಾಡಿದರು. ಈ ದಾಳಿಯ ಬಗ್ಗೆ ಹಗ್ಗರಿ ಕುಡಚಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಹಲ್ಲೆ ಮಾಡಿದವರನ್ನು ಬಂಧಿಸದ ಪೊಲೀಸರು ಹಗ್ಗರಿ ಅವರ ವಿರುದ್ಧವೇ ಪ್ರತಿ ದೂರನ್ನು ದಾಖಲಿಸಿಕೊಂಡಿದ್ದಾರೆ!

ವಿಪರ್ಯಾಸದ ಸಂಗತಿ ಯಾವುದೆಂದರೆ ಹಗ್ಗರಿ ಮೇಲೆ ನಡೆದ ಮೊದಲ ಹಲ್ಲೆ ಇದಲ್ಲ, ಹಾಗೆಯೇ ಅವರ ಮೇಲೆ ದಾಖಲಾಗಿರುವ ಕೌಂಟರ್ ಕೇಸ್‌ಗಳಲ್ಲೂ ಇದು ಪ್ರಥಮದ್ದಲ್ಲ.

ಐಹೊಳೆ, ಶಾಸಕನಾದ ನಂತರ ಆತ ಖರೀದಿಸಿದ ಆಸ್ತಿಗಳ ಬಗ್ಗೆ ಹಗ್ಗರಿ ಬರೆದರು. ಆಗ ಐಹೊಳೆಯ ಬೆಂಬಲಿಗರಾದ ಬಸವರಾಜ ಸನದಿ, ಅಣ್ಣಾ ಸಾಬ, ಖೇಮಲಾಪುರ ಗೋಪಾಲ ಮತ್ತು ಇತರರು ಹಗ್ಗರಿಯನ್ನು ಬೆದರಿಸಿದರು. ತನ್ನನ್ನು ಹಾಗೆ ಬೆದರಿಸಿದ್ದನ್ನೂ ತನ್ನ ಪತ್ರಿಕೆಯಲ್ಲಿ ಹಗ್ಗರಿ ಸುದ್ದಿ ಮಾಡಿದರು. ಅದನ್ನು ಕಂಡು ತನ್ನ ಮಾನಸಿಕ ಸ್ಥಿಮಿತ ಕಳೆದುಕೊಂಡ ಐಹೊಳೆ ಸ್ವತಃ ತಾನೇ ಹಗ್ಗರಿಗೆ ಫೋನ್ ಮಾಡಿ "ಮುಂದೆ ಏನಾದರೂ ಬರೆದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ" ಎಂದು ಬೆದರಿಸಿದ. ಆಗಲೂ ಹಗ್ಗರಿ ಜಗ್ಗಲಿಲ್ಲ. ಇದರಿಂದ ಕೆರಳಿದ ಐಹೊಳೆ 2010ರ ಮಾರ್ಚ್ 11 ರ ಸಂಜೆ ತನ್ನ ಸಹೋದರ ಸಂಬಂಧಿ ಮಹಾವೀರ, ಸಾತಪ್ಪ ದಾವಣೆ, ಅನಿಲ ಹಾದಿವಡ್ಡರ, ಗೋಪಾಲ ಪುಣೇಕರ, ಅಣ್ಣಾ ಸಾಬ ಖೇಮಲಾಪುರೆ ತರಹದ ದಾಂಡಿಗರೊಂದಿಗೆ ಬಂದು ರೇಲ್ವೆ ನಿಲ್ದಾಣದಲ್ಲಿ ನಿಂತಿದ್ದ ಹಗ್ಗರಿ ಮೇಲೆ ಕಬ್ಬಿಣದ ಸಲಾಕೆ, ಬಡಿಗೆಗಳಿಂದ ಮಾರಣಾಂತಿಕ ದಾಳಿ ಮಾಡಿದ.

ಆ ದಾಳಿಯಲ್ಲಿ ಹಗ್ಗರಿ ಪ್ರಜ್ಞೆ ಕಳೆದುಕೊಂಡ ನಂತರವೇ ಐಹೊಳೆ ಅಲ್ಲಿಂದ ಹೊರಟದ್ದು. ರೈಲು ನಿಲ್ದಾಣ ದಲ್ಲಿದ್ದ ಜನರು ಹಗ್ಗರಿಯನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು. ಅಷ್ಟಕ್ಕೂ ಸುಮ್ಮನಾಗದ ಶಾಸಕನ ಬೆಂಬಲಿಗರು ಸರ್ಕಾರಿ ಆಸ್ಪತ್ರೆಯ ವೈದ್ಯರ ಮೇಲೆ ಒತ್ತಡ ಹೇರಲಾರಂಭಿಸಿದಾಗ ಗಾಯಗೊಂಡಿದ್ದ ಹಗ್ಗರಿಯನ್ನು ಬೆಳಗಾವಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಬೆಳಗಾವಿ ಸಿವಿಲ್ ಆಸ್ಪತ್ರೆಯಲ್ಲಿ ಹಗ್ಗರಿಯ ಹೇಳಿಕೆ ಪಡೆದ ಪೊಲೀಸರು ಶಾಸಕ ಐಹೊಳೆ ಸೇರಿದಂತೆ ಎಂಟು ಜನರ ವಿರುದ್ಧ ದೂರು ದಾಖಲಿಸಿಕೊಂಡಿದ್ದರು. ಅಷ್ಟೇ ಅಲ್ಲ, ಈ ದೂರನ್ನು ದಾಖಲಿಸಿಕೊಂಡಿದ್ದ ಸಂದರ್ಭದಲ್ಲೇ ಸಬ್ ಇನ್ಸ್‌ಪೆಕ್ಟರ್ ಪಿ.ಬಿ.ನಿಲಗಾರ ಎಂಬಾತ ಹಗ್ಗರಿ ಇನ್ನೂ ಆಸ್ಪತ್ರೆಯಲ್ಲಿರುವಾಗಲೇ ಹಗ್ಗರಿ ಮತ್ತು ಆತನ ತಾಯಿಯೂ ಸೇರಿದಂತೆ ಕುಟುಂಬದ ಎಲ್ಲಾ ಸದಸ್ಯರ ಮೇಲೂ ಕೌಂಟರ್ ಕೇಸ್ ದಾಖಲಿಸಿದ್ದ! ಇದಾದ ಕೆಲವೇ ದಿನಗಳ ನಂತರ ಹಗ್ಗರಿ ವಿರುದ್ಧ ಸಾರಾಯಿ ಸಾಗಣೆ ಕೇಸ್ ದಾಖಲಾಗುವಂತೆ ನೋಡಿಕೊಂಡ ಐಹೊಳೆ ಹಗ್ಗರಿಯ ಕಾರ್ ಕೂಡ ಸೀಜ್ ಆಗುವಂತೆ ನೋಡಿಕೊಂಡ. ಅಷ್ಟೇ ಅಲ್ಲ, ಕಿರಣಂ ಅಜ್ಜಪ್ಪಗೋಳ ಎಂಬ ತನ್ನ ಭಂಟನ ಮೂಲಕ ಹಗ್ಗರಿ ವಿರುದ್ಧ ಕೊಲೆ ಬೆದರಿಕೆ ಕೇಸು, ಬೈಕ್ ಕಳ್ಳತನದ ಕೇಸುಗಳೆಲ್ಲ ದಾಖಲಾಗುವಂತೆ ನೋಡಿಕೊಂಡ.

ಹೀಗೆ ತನ್ನ ಮೇಲಾದ ದಾಳಿಯಿಂದ ಚೇತರಿಸಿ ಕೊ... ಆಸ್ಪತ್ರೆಯಿಂದ ಹೊರಬರುವಷ್ಟರಲ್ಲಿ ಹಗ್ಗರಿಯ ಮೈ ... ಕೇಸುಗಳು ಮುತ್ತಿಕೊಂಡಿದ್ದವು.

ಆದರೆ ಅಲ್ಪ ಅವಧಿಯಲ್ಲೇ ಈ ಕೇಸುಗಳಲ್ಲಿ ಹುರ... ಎಂಬ ಕಾರಣಕ್ಕೆ ಕೋರ್ಟು ಹಗ್ಗರಿ ವಿರುದ್ಧದ ದೂರುಗ... ಖುಲಾಸೆಗೊಳಿಸಿತು. ಅದೇ ಹೊತ್ತಿಗೆ ಶಾಸಕ ಐಹ... ಮತ್ತು ಆತನ ಭಂಟರ ವಿರುದ್ಧ ಹಗ್ಗರಿ ಕೊ... ದೂರುಗಳಲ್ಲೂ ಯಾವುದೇ ಹುರುಳಿಲ್ಲ ಎಂದು ಸ್ಥ... ಪೊಲೀಸರು 'ಬ ರಿಪೋರ್ಟ್' ಹಾಕಿ ಬಿಟ್ಟರು. ... ಪೊಲೀಸರು ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕ... ಕೆಲಸ ಮಾಡುವ ಪರಿ ಇದು!

ಆದರೆ ಹಗ್ಗರಿ ಪೊಲೀಸರ 'ಬ ರಿಪೋರ್ಟ್'... ಕೋರ್ಟಿನಲ್ಲಿ ಪ್ರಶ್ನಿಸಿದರು. ಆಗ ಐಹೊಳೆ ಸೇರಿ... ಎಂಟು ಜನರ ವಿರುದ್ಧ ವಾರೆಂಟ್ ಜಾರಿಯಾಯಿ... ಇದರಿಂದ ಇನ್ನಷ್ಟು ಕೋಪೋದ್ರಿಕ್ತನಾದ ಐಹೊಳೆ 20... ಆಗಸ್ಟ್ 10ರಂದು ಹಗ್ಗರಿ ಮೇಲೆ ಕೋರ್ಟ್ ಆವ... ದಲ್ಲಿಯೆ ನೂರಕ್ಕೂ ಹೆಚ್ಚು ಬೆಂಬಲಿಗರಿಂದ ... ಮಾಡಿಸಿದ. ಇದು ನ್ಯಾಯಾಧೀಶರ ಗಮನಕ್ಕೆ ಬ... ಹಗ್ಗರಿ ಕೋರ್ಟ್‌ಗೆ ಹಾಜರಾಗುವಾಗ ಅವರಿಗೆ ಸ... ಬಂದೋಬಸ್ತ್ ಒದಗಿಸುವಂತೆ ಆದೇಶಿಸಿದ... ಅದರಂತೆ ಹಗ್ಗರಿ ಕೋರ್ಟ್‌ಗೆ ಬಂದಾಗ ಅವ... ಏಳು ಜನ ಪೊಲೀಸರಿಂದ ರಕ್ಷಣೆ ನೀಡಲಾಯಿ...

ಆದರೆ ಇದು ಕೆಲವು ದಿನ ಮಾತ್ರ ನಡೆಯಿ... ಮತ್ತೆ ಐಹೊಳೆಯ ಬೆಂಬಲಿಗರ ಉಪಟಳ ಜ... ಆಯಿತು. ಆಗ ಹಗ್ಗರಿ 2012ರ ಮಾರ್ಚ್ 1ರಂ... ಬೆಳಗಾವಿ ಎಸ್‌ಪಿ ಸಂದೀಪ್ ಪಾಟೀಲರನ್ನು ಕಂ... ತನಗೆ ರಕ್ಷಣೆ ಕೊಡಬೇಕೆಂದು ಮನವಿ ಮಾಡಿಕೊಂಡ... ಅವರ ಮನವಿಗೆ ಸಂದೀಪ್ ಪಾಟೀಲರು ಚಿಕ್ಕೋಡಿ... ಡಿವೈಎಸ್‌ಪಿ ಅಮರಾ ಪೂರೆಯವರಿಗೆ ಹಗ್ಗರಿ ಅವ... ರಕ್ಷಣೆ ನೀಡುವಂತೆ ಆದೇಶಿಸಿದರು. ಅದರಂತೆ ಕೆಲ... ಹಗ್ಗರಿಗೆ ರಕ್ಷಣೆ ನೀಡಿ ಪೊಲೀಸರು ಸ್ವಲ್ಪ ಕಾಲ... ನಂತರ ಮತ್ತೆ ತಮ್ಮ ಆಟ ಶುರು ಮಾಡಿದರು. ಇದಕ... ಕಾಯುತ್ತಿದ್ದ ಐಹೊಳೆಯ ಬೆಂಬಲಿಗರಾದ ಮಹಾವ... ಐಹೊಳೆ, ರಾಜು ತಳವಾರ, ರಾಜು ಶಿರಗಾಂವಿ, ಮ... ರಾಮದುರ್ಗ, ನಾಗರ ಝುಂಡೆನ್ನವರ, ಮಹೇಶ ಕೊ... ಮುಂತಾದವರ ಪಡೆ ಕಳೆದ ಜೂನ್ 2ರಂದು ವ... ಕೋರ್ಟ್ ಆವರಣದಲ್ಲಿ ಹಗ್ಗರಿ ಮೇಲೆ ದಾಳಿ ಮಾಡಿ...

ಒಂದೆಡೆ ಶಾಸಕನ ಬೆಂಬಲಿಗರ ದಾಳಿಗಳು, ಇನ್ನೊಂದ... ತನಗೆ ರಕ್ಷಣೆ ನೀಡಬೇಕಿದ್ದ ಪೊಲೀಸರ ಕಿರುಕುಳ ... ಇವೆರಡರ ಮಧ್ಯೆ ತನ್ನ ಜೀವ ಉಳಿಸಿಕೊಳ್ಳಲು ಹ... ಎಂಬ ಪತ್ರಕರ್ತ ಹೆಣಗಾಡಬೇಕಾದ ಪರಿಸ್ಥಿತಿ ಬಂದೊದ... ಎಂದರೆ ಐಹೊಳೆಯ ದರ್ಬಾರಿನಲ್ಲಿ ಸಾಮಾನ್ಯ ಜನ... ಸ್ಥಿತಿ ಹೇಗಿರಬೇಡ ನೀವೇ ಯೋಚಿಸಿ.

● ಮಹಾಲಿಂಗಪ್ಪ ಆಲಬಾ...

ಗೆಲ್ಲಿಸಿದವರಿಗೇ ದ್ರೋಹ ಬಗೆದ

ರಾಯಭಾಗದ ಶಾಸಕ ದುರ್ಯೋಧನ ಐಹೊಳೆ ಈ ಹಿಂದೆ ಸಾಮಾನ್ಯ ಗುತ್ತಿಗೆದಾರನಾಗಿದ್ದವನು. ಈತನಿಗೆ ತನ್ನ ತಂದೆಯಿಂದ ಪಿತ್ರಾರ್ಜಿತವಾಗಿ ಬಂದದ್ದು ನಿಡಗುಂದಿ ಗ್ರಾಮದಲ್ಲಿರುವ ಮೂರು ಎಕರೆ ಜಮೀನು ಅಷ್ಟೆ. ಆದರೆ ಇಷ್ಟು ಆಸ್ತಿಯನ್ನೇ ಬಂಡವಾಳ ಮಾಡಿಕೊಂಡ ಐಹೊಳೆ 2005ರಲ್ಲಿ ತನ್ನ ಹೆಂಡತಿ ಸುಶೀಲಮ್ಮಳನ್ನು ಜಿಲ್ಲಾ ಪಂಚಾಯತಿ ಮೆಂಬರ್ ಮಾಡಿಬಿಟ್ಟ. ಆನಂತರ ಶುರುವಾದದ್ದು ಈತನ ಕಮಾಯಿ ದಂಧೆ. ಹೆಂಡತಿ ಜಿಲ್ಲಾ ಪಂಚಾಯತಿಯ ಮೆಂಬರ್ ಆಗುತ್ತಿದ್ದಂತೆ ಆಕೆಯ ಮತಕ್ಷೇತ್ರ ವ್ಯಾಪ್ತಿಯ ಎಲ್ಲಾ ಕಾಮಗಾರಿಗಳ ಗುತ್ತಿಗೆಯನ್ನು ತಾನೇ ಹಿಡಿದು ಬೇಕಾಬಿಟ್ಟಿ ತಿಂದು ತೇಗಿದ್ದ.

2008ರ ಹೊತ್ತಿಗೆ ಕುಮಾರಸ್ವಾಮಿಯ ತಂತ್ರದಿಂದಾಗಿ ಅಧಿಕಾರವನ್ನು ಕಳೆದುಕೊಂಡಿದ್ದ ಬಿಜೆಪಿಯ ಯಡಿಯೂರಪ್ಪ ಎಂಥವರಾದರೂ ಸರಿ, ತಮ್ಮ ಹಣ ಮತ್ತು ತೋಳ್ಬಲದ ಮೂಲಕ ಆರಿಸಿ ಬರುವಂತಿದ್ದರೆ ಸಾಕು ಎಂದು ಅಭ್ಯರ್ಥಿಗಳಿಗೆ ಹುಡುಕುತ್ತಿದ್ದಾಗ ರಾಯಭಾಗ ಎಂಬ ಮೀಸಲು ಕ್ಷೇತ್ರದಲ್ಲಿ ಯಡ್ಡಿಗೆ ಸಿಕ್ಕಿದ್ದೇ ಈ ಭಯಾನಕ ಹಸುವಿನ ಕುಳ ಐಹೊಳೆ.

ಅತ್ತ ಯಡ್ಡಿಗೆ ಯಾವ ಮಾರ್ಗದಿಂದಲಾದರೂ ಮುಖ್ಯಮಂತ್ರಿ ಆಗುವ ದಾಹ ಇತ್ತು, ಇತ್ತ ಐಹೊಳೆಗೆ ದುಡ್ಡು ಮಾಡಲು ಅಧಿಕಾರ ಬೇಕಿತ್ತು, ಹಲವಾರು ದಶಕಗಳಿಂದ ತಮ್ಮ ಪಾಳೇಗಾರಿಕೆ ಪ್ರವೃತ್ತಿಯಿಂದ ಇಡೀ ರಾಯಭಾಗದ ತಾಲೂಕನ್ನೇ ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿದ್ದ ಪ್ರತಾಪ್‌ರಾವ್ ಪಾಟೀಲರ ಬೆಂಬಲವೂ ಐಹೊಳೆಗಿತ್ತು. ಈ ಮೂರು ಅಂಶಗಳ ಮಿಲನದಿಂದಾಗಿ ಐಹೊಳೆ ಎಂಬ ಜನಪೀಡಕ ಶಾಸಕನಾಗಿ ಒಕ್ಕರಿಸಿದ.

ಈತ ಎಂತಹ ದ್ರೋಹಿ ಎಂದರೆ ಈತನಿಗೆ ಚುನಾವಣೆ ಸಂದರ್ಭದಲ್ಲಿ ಬೆಂಬಲ ನೀಡುವ ಮೂಲಕ ಈತನನ್ನು ಶಾಸಕನನ್ನಾಗಿಸಿದ ಪ್ರತಾಪ್‌ರಾವ್ ಪಾಟೀಲ ವಿರುದ್ಧವೇ ತಿರುಗಿಬಿದ್ದ. ಪಾಟೀಲರು ತನ್ನನ್ನು ಮೀರಿ ಅಧಿಕಾರ ನಡೆಸಬಹುದು ಅಥವಾ ಜನರ ಬೆಂಬಲ ಗಳಿಸಬಹುದೆಂಬ ದುರಾಲೋಚನೆಯಿಂದ ಪಾಟೀಲರು ಕಳುಹಿಸಿದ ಯಾವ ಜನರ ಕೆಲಸಗಳೂ ಆಗದಂತೆ ನೋಡಿಕೊಳ್ಳತೊಡಗಿದ.

ಇದರಿಂದ ಪ್ರತಾಪ್‌ರಾವ್ ಪಾಟೀಲರ ಕೋಪ ನೆತ್ತಿಗೇರಿದರೂ ಐಹೊಳೆ ದಲಿತ ಸಮುದಾಯಕ್ಕೆ ಸೇರಿದವನು ಎಂಬ ಒಂದೇ ಕಾರಣಕ್ಕೆ ಈತನ ಉಪಟಳವನ್ನೆಲ್ಲ ಸಹಿಸಿಕೊಂಡರು.

ಒಂದು ಕಾಲದಲ್ಲಿ ಪಾಟೀಲರ ಕುಟುಂಬ ತಾಲೂಕಿನಲ್ಲಿ ನಡೆಸಿದ್ದ ದರ್ಬಾರು ಮತ್ತು ದೌಲತ್ತುಗಳೆಲ್ಲವೂ ಪ್ರಜಾತಂತ್ರ ವಿರೋಧಿಯಾಗಿದ್ದರೂ ಅವರ ಮನೆತನದ ಒಂದು ವಿಶೇಷತೆ ಇದೆ. ಅದೇನೆಂದರೆ ಈ ಭಾಗದ ದಲಿತ-ಹಿಂದುಳಿದ ವರ್ಗಗಳನ್ನು ಆ ಕುಟುಂಬ ರಕ್ಷಿಸುತ್ತ, ಬೆಂಬಲಿಸುತ್ತ ಬಂದಿರುವುದು. ಐಹೊಳೆ ವಿರುದ್ಧ ಪಾಟೀಲರು ತೊಡೆ ತಟ್ಟಿದರೆ ತಮ್ಮ ಹಿಂಬಾಲಕರ ಮತ್ತು ಬೆಂಬಲಿಗರ ಪಡೆಯಲ್ಲಿ ಐಹೊಳೆಯ ಸಮುದಾಯದವರೇ ಹೆಚ್ಚಾಗಿರುವುದರಿಂದ ಅವರು ಅದನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬಹುದು ಎಂಬ ಕಾರಣಕ್ಕೆ ಅವರು ಐಹೊಳೆಯ ಉಪಟಳವನ್ನು ಕಂಡೂಕಾಣದಂತೆ ಸುಮ್ಮನಾಗಿದ್ದಾರೆ.

ಅಪರೂಪದ ಫೋಟೋ



ಬೆಂಗಳೂರಿನಲ್ಲಿರುವ ಕೆನ್ನೆತ್ ಆಂಡರ್ಸನ್ ಅವರ ಸಮಾಧಿ

ಬೇಟೆಗಾರ, ಶಿಕಾರಿ, ಪರಿಸರಪ್ರೇಮಿ ಕೆನ್ನೆತ್ ಆಂಡರ್ಸನ್ ಅವರ ಬಗ್ಗೆ ಬಹಳಷ್ಟು ಜನಕ್ಕೆ ಗೊತ್ತಿದೆ. ಅವರ ಪುಸ್ತಕಗಳನ್ನು ಓದಿರುವವರೂ ಅಪಾರ ಸಂಖ್ಯೆಯಲ್ಲಿದ್ದಾರೆ. ಮೂಲತಃ ಸ್ಕಾಟ್‌ಲ್ಯಾಂಡ್ ದೇಶದವರಾದ ಕೆನ್ನೆತ್ ಆಂಡರ್ಸನ್ ಕನಕಪುರ ರಸ್ತೆಯಲ್ಲಿದ್ದ ತಮ್ಮ ತೋಟವನ್ನು ಚಿತ್ರನಟಿ ದೇವಿಕಾ ರಾಣಿ ಮತ್ತು ಅವರ ಪತಿ ರಷ್ಯಾದ ಕಲಾವಿದ ರೋಯಿರಿಕ್ ಅವರಿಗೆ ಮಾರಿದ ನಂತರ ಆಂಡರ್ಸನ್ ಎಲ್ಲಿಗೆ ಹೋದರು, ಏನು ಮಾಡಿದರು ಎಂಬುದರ ಬಗ್ಗೆ ಎಲ್ಲೂ ಹೆಚ್ಚು ವಿವರಗಳಿಲ್ಲ.

1910ರಲ್ಲಿ ಜನಿಸಿ 1974ರಲ್ಲಿ ತೀರಿಕೊಂಡ ಆಂಡರ್ಸನ್ ಅವರು ತಮ್ಮ ಕೊನೆ ವರ್ಷಗಳನ್ನು ಬೆಂಗಳೂರಿನಲ್ಲಿ ಕಳೆದರಲ್ಲದೆ ಅವರ ಪುತ್ರ ಡಾನ್ ಆಂಡರ್ಸನ್ ಇವತ್ತಿಗೂ ಬೆಂಗಳೂರಿನ ನಿವಾಸಿ ಆಗಿದ್ದಾರೆ ಎಂಬುದು ಬಹಳ ಜನರಿಗೆ ಗೊತ್ತಿಲ್ಲ. ಹೊಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ನರ ಸ್ಮಶಾನದಲ್ಲಿ ಆಂಡರ್ಸನ್ ಅವರ ಸಮಾಧಿ ಇದೆ. ಈಗ ಯಾರೂ ಈ ಸಮಾಧಿಯನ್ನು ನೋಡಿಕೊಳ್ಳುತ್ತಿಲ್ಲ. ಅದರ ಮೇಲೆ ಬೆಳೆದಿರುವ ಹುಲ್ಲನ್ನು ಸರಿಸಿ ನೋಡಿದರೆ "ಬೇಟೆಗಾರ ಮತ್ತು ಎಲ್ಲ ವನ್ಯಪ್ರಾಣಿಗಳ ಮತ್ತು ಪುಟ್ಟಪಕ್ಷಿಗಳ ಗೆಳೆಯ" ಎಂದು ಕೆತ್ತಿರುವುದು ಇವತ್ತಿಗೂ ಸ್ಪಷ್ಟವಾಗಿ ಕಾಣಿಸುತ್ತದೆ.

ಜಾತಿವ್ಯಾಕರಣ ಮತ್ತು ಹಿಂದೂತ್ವ ರಾಜಕಾರಣ

...ರೆ ನಿರುದ್ಯೋಗಿಗಳಾಗಿ ಸಾರಿಗೆ, ಸಣ್ಣಪುಟ್ಟ ವ್ಯಾಪಾರ, ...ಖಚಿತ ನೀಡದ ಮರುದುಡಿಯಲ್ಲಿ ಆತಂಕದ ಬದುಕನ್ನು ...ಬುತಾಗಿತ್ತು.


...ೀ ವೇಳೆಗೆ ಬಾಂಬೆ ರಾಜಕಾರಣದಲ್ಲಿ ಮಿಂದ ...ಮತ್ತು ದುಡ್ಡು ಹಾಗೂ ದೇಶಾದ್ಯಂತ ಭುಗಿಲೆದ್ದ ...ತ್ವವಾದಿ ಪವಾ - ಇವುಗಳು ಭಂಟ-ಬಿಲ್ಲವ ...ಯದ ಒಳಗಿನ ವೈರುಧ್ಯವನ್ನೂ ಮತ್ತು ...ತ್ವದಡಿಯಿರುವ ಪ್ರಚ್ಛನ್ನ ಬ್ರಾಹ್ಮಣವಾದವನ್ನು ...ಚುವಲ್ಲಿ ಯಶಸ್ವಿಯಾಯಿತು. ಬದುಕಿನ ನೈಜ ...ಲ್ಲಿ ಕಂಗೆಟ್ಟಿದ್ದ ಸಮುದಾಯಗಳಿಗೆ ಕೃತಕ ಶತ್ರುಗಳನ್ನು ... ಹಿಂದೂತ್ವ ಅವರನ್ನು ತನ್ನಡಿ ಸಂಘಟಿಸಿತು. ...ದೊಡ್ಡ ಸಂಖ್ಯೆಯಲ್ಲಿ ಭಂಟ ಮತ್ತು ಬಿಲ್ಲವ ...ಯುವಕರನ್ನು ಸಂಘಪರಿವಾರದ ತೆಕ್ಕೆಗೆ ದೂಡಿತು. ...ಜೊತೆಗೆ ಮುಸ್ಲಿಂ ಸಮುದಾಯದ ಒಂದು ...ಗೆ ಕೊಡುತ್ತಿದ್ದ ಶ್ರೀಮಂತಿಕೆ, ಮುಸ್ಲಿಮ್ ಹೊಸ ...ದ ಉದ್ಯಮಶೀಲತೆ ಅವರ ಬಗೆಗೆ ಹಲವಾರು ...ಪಟಗಳನ್ನು ಸೃಷ್ಟಿಸಿ ಆರೆಸ್ಸೆಸ್‌ನ ದ್ವೇಷ ಪ್ರಚಾರಕ್ಕೆ ... ಭೂಮಿಕೆ ಒದಗಿಸಿತು. ಮತ್ತೊಂದೆಡೆ ಎಡ ...ದು ಹೋರಾಟಗಳ ಹಿನ್ನೆಡೆಯೂ ವರ್ಗದ ನೆಲೆಯ ...ಕರಣವನ್ನು ಹಿನ್ನೆಲೆಗೆ ಸರಿಸಿ ಹಿಂದೂತ್ವವಾದಿ ರಾಜ ...ವರ್ಗ ವೈರುಧ್ಯ ಮತ್ತು ಜಾತಿ ತಾರತಮ್ಯಗಳನ್ನು ...ಚಿ ಕೃತಕ ಹಿಂದೂ ಐಕ್ಯತೆಯ ವೇದಿಕೆಯಲ್ಲಿ ...ಲ್ಲಾ ವರ್ಗಗಳನ್ನು ಮತ್ತು ಜಾತಿಗಳನ್ನು ಒಂದು ...).

...ದರೆ ಬಾಂಬೆ ಮತ್ತು ಗಲ್ಫ್‌ಗಳ ವ್ಯವಹಾರದಿಂದ ...ಅಪಾರವಾದ ಸಂಪತ್ತು ಮತ್ತು ರಿಯಲ್ ಎಸ್ಟೇಟ್, ...ಪೋರ್ಟ್, ಬ್ಯಾಂಕಿಂಗ್, ಇತ್ತೀಚಿನ ಐಟಿ ...ಗಳು ಭಂಟ ಮತ್ತು ಬಿಲ್ಲವ ಸಮುದಾಯಗಳಲ್ಲಿ ... ವರ್ಗಗಳನ್ನು ಸೃಷ್ಟಿಸಿವೆ. ಅಂಥಾ ಆಸ್ತಿ ತಾನು ... ಬೆಳೆಯಲು ಅಧಿಕಾರವನ್ನು ಕೇಳುತ್ತದೆ. ಒಂದು ...ಯ ಸಾಂಪ್ರದಾಯಿಕ ರೀತಿರಿವಾಜುಗಳನ್ನು ಆಧುನಿಕ ...ಲ್ಲಿ ಪುನರುಜ್ಜೀವಗೊಳಿಸಿ ಆ ಮೂಲಕ ...ದ ಸಾಮಾಜಿಕ ಅಧಿಕಾರವನ್ನು ಪಡೆದುಕೊಳ್ಳಲು, ...ಗಳು ಪ್ರಯತ್ನಿಸುತ್ತಿವೆ. ಇದನ್ನು ಸಾಧಿಸಿಕೊಳ್ಳಲು ...ತ್ವದ ಬ್ರಾಹ್ಮಣ್ಯ ಸಿದ್ಧಾಂತ ಅವರ ಸಹಾಯಕ್ಕೆ ... ಹೀಗಾಗಿ ಬಿಜೆಪಿ ಮತ್ತು ಆರೆಸ್ಸೆಸ್ ಅನ್ನು ಈ ... ಉಳಿಸಿ ಬೆಳೆಸಲು ಸಹಾಯ ಮಾಡುತ್ತಿದ್ದಾರೆ.

...ದರೆ ಹೆಚ್ಚು ಹಣ ಮತ್ತು ಸಂಪನ್ಮೂಲವಿರುವ ...ರ್ ಆರ್ಥಿಕತೆಯ ಮೇಲೆ ರಾಜಕೀಯ ಅಧಿಕಾರವನ್ನು ...ಕೊಳ್ಳಲು ಆಧುನಿಕ ಪ್ರಜಾತಂತ್ರದಲ್ಲಿ ಓಟಿನ ...ಕ ಶಾಸಕ ಮತ್ತು ಮಂತ್ರಿಗಳಾಗಬೇಕಷ್ಟೆ. ಸಂಖ್ಯಾತ್ಮಕ ...ರ್ಶ್ಯವೇ ಅಧಿಕಾರಕ್ಕೆ ರಹದಾರಿ ಒದಗಿಸುವ ನಮ್ಮ ...ತಂತ್ರದಲ್ಲಿ ಆಯಾ ಜಾತಿಗಳ ಆಧುನಿಕ ಸಂಪನ್ನರು ...ಜಾತಿಗಳ ಬೆಂಬಲವನ್ನು ಹಲವು ಜಾತಿ ಸದೃಢೀಕರಣ ... ಮೂಲಕ ಖಾತರಿಗೊಳಿಸಿಕೊಳ್ಳುತ್ತಿವೆ. ಈ ನಿಟ್ಟಿನಲ್ಲಿ ...ಗೆ ಪ್ರಧಾನ ವೇದಿಕೆಯಾದದ್ದೂ ಬಿಜೆಪಿ ಪಕ್ಷವೇ. ... ಸಾಮಾಜಿಕ ನೆಲೆಯಲ್ಲಿ ಬ್ರಾಹ್ಮಣ್ಯದ ಪುನರುತ್ಥಾನ ... ಬ್ರಾಹ್ಮಣ ಶಕ್ತಿಗಳಿಗೆ ಹೊಸ ಜೀವನ ಕೊಟ್ಟರೂ ...ಬ್ರಾಹ್ಮಣ್ಯ ಸಿದ್ಧಾಂತ ಶೂದ್ರ ಹಿನ್ನೆಲೆ ಹೊಂದಿದ್ದರೂ ...ಬ್ರಾಹ್ಮಣರೇ ಆದ ಈ ವರ್ಗಗಳ ಆಸಕ್ತಿಗೆ ಪೂರಕವೆ ...ಂದ ಅವರ ಶೂದ್ರತ್ವಕ್ಕೂ ಮತ್ತು ಹಿಂದೂತ್ವದ ...ಣ್ಯಕ್ಕೂ ನಡುವೆ ಹೆಚ್ಚಿನ ವೈರುಧ್ಯ ಉಂಟಾಗಿರಲಿಲ್ಲ.

...ದರೆ ಶೂದ್ರ ಜಾತಿಗಳಲ್ಲಿನ ಒಂದು ಸಣ್ಣ ವರ್ಗ ... ಹಳೆಯ ಬಲಾಢ್ಯ ಜಾತಿಗಳಲ್ಲಿನ ಹಲವು ಶಕ್ತಿಗಳು ...ಬಂಡವಾಳಶಾಹಿ ವಿಧಾನ ಮತ್ತು ಆಧುನಿಕ ...ತಂತ್ರದ ಮೂಲಕ ಆಸ್ತಿ ಮತ್ತು ಅಧಿಕಾರ ...ಟಕೊಳ್ಳುತ್ತಿವೆ. ಅಲ್ಲದೇ ಬಿಜೆಪಿ ಅಧಿಕಾರಕ್ಕೆ ...ಮೇಲೆ ಅಪರಿಮಿತ ಭ್ರಷ್ಟಾಚಾರದಿಂದ ಗಳಿಸುತ್ತಿರುವ ... ಒಂದು ಪಾಲು ಮತ್ತು ಅಧಿಕಾರ ಆರೆಸ್ಸೆಸ್ ...ಭ್ರಷ್ಟಗೊಳಿಸಿ ಹಿಂದೂತ್ವ ಸಿದ್ಧಾಂತದ ಸಾಮಾಜಿಕ ...ವನ್ನು ಮೀರಿದ ಒಂದು ವ್ಯಕ್ತಿಗತ ಅಧಿಕಾರ ..., ಆಸ್ತಿ ಮಾಡಿಕೊಳ್ಳುವ ಖಾಸಗಿ ಅಜೆಂಡಾಗಳನ್ನು ...ಹಾಕಿದೆ.

...ಆಸ್ತಿ ಮತ್ತು ಅಧಿಕಾರದ ಸಮಸ್ಯೆಯೆಂದರೆ ಅದು ...ೀಟವನ್ನು ಹುಟ್ಟುಹಾಕುತ್ತದೆ. ಕುಟುಂಬದಲ್ಲೂ, ...ಸಂಘಟನೆಯಲ್ಲೂ, ಹಾಗೆಯೇ ಸಂಘಪರಿವಾರದಲ್ಲೂ. ...ಗೆಯೇ ಬಿಜೆಪಿ ಸರ್ಕಾರ ಪಡೆದುಕೊಂಡ ಅಧಿಕಾರ ... ಭ್ರಷ್ಟಾಚಾರದಿಂದ ಆರೆಸ್ಸೆಸ್ಸಿಗರು ಮತ್ತು ಶಾಸಕರು ...ಕೊಳ್ಳುತ್ತಿರುವ ಆಸ್ತಿಪಾಸ್ತಿಗಳು ಈವರೆಗೆ ಇಲ್ಲದ ಒಂದು ... ಬಗೆಯ ವೈರುಧ್ಯವನ್ನು ಸಂಘಪರಿವಾರದಲ್ಲಿ ...ಹಾಕಿದೆ. ಹಿಂದೂತ್ವವು ಓಟು ಗಳಿಸಿಕೊಡುವವರೆಗೆ ...ವೈರುಧ್ಯ ಅಷ್ಟು ತೀವ್ರಗೊಂಡಿರಲಿಲ್ಲ. ಆದರೆ ...ಸ್ಥಳಗಳ್ಳಿ ಜಾತಿಯೂ ಅಧಿಕಾರ ರಾಜಕಾರಣಕ್ಕೆ ...ಬುದನ್ನು ಅರಿತುಕೊಂಡ ಮೇಲೆ ಅವೆರಡರ ನಡುವೆ ಅನುಸಂಧಾನ ಮಾಡಲು ಹಲವು ವಿಫಲ ಪ್ರಯೋಗಗಳನ್ನು ನಡೆಸುತ್ತಿರುವ ಸಂಘಪರಿವಾರ ಹಲವು ಪ್ರಹಸನಗಳನ್ನೂ ಹುಟ್ಟುಹಾಕಿದೆ. ಇಂದು ಕರ್ನಾಟಕದಲ್ಲಿ ಯಡಿಯೂರಪ್ಪ ಸರ್ಕಾರ ನಡೆಸಿದ ಎಲ್ಲಾ ಜಾತಿವಾದಿ ಪ್ರಹಸನಗಳಿಗೂ ಆರೆಸ್ಸೆಸ್‌ನ ಬೆಂಬಲ ಇದ್ದೇ ಇತ್ತು. ಇತ್ತೀಚೆಗೆ ಕರ್ನಾಟಕದ ಆರೆಸ್ಸೆಸ್ ನಾಯಕ ಮೈ.ಚ. ಜಯದೇವರ ಪ್ರಕಾರ ಜಾತಿ ಆಧಾರಿತ ರಾಜಕಾರಣ ಅಧಿಕಾರ ರಾಜಕಾರಣದಲ್ಲಿ ಅನಿವಾರ್ಯ. ಆದರೆ ಈ ಜಾತಿ ರಾಜಕಾರಣವೆಂದರೆ ಪ್ರಧಾನವಾಗಿ ಮೇಲ್ಜಾತಿಗಳ ಮೇಲಾಧಿಪತ್ಯಕ್ಕೆ ಒಪ್ಪಿಗೆ ಎಂಬುದನ್ನು ಮರೆಯುವಂತಿಲ್ಲ.



ಹಾಗೆ ನೋಡಿದರೆ ಹಿಂದೂತ್ವವು ವರ್ಣಾಶ್ರಮ ಆರ್ಥಿಕತೆಯ ಊಳಿಗಮಾನ್ಯ ಆರ್ಥಿಕತೆ ಪ್ರತಿಪಾದನೆಯನ್ನು ಕೇವಲ ಪ್ರಚಾರಕ್ಕೆ ಮಾತ್ರ ಇಟ್ಟುಕೊಂಡು ದೇಶಿ ಮತ್ತು ವಿದೇಶಿ ಬಂಡವಾಳದ ಹಿತಾಸಕ್ತಿಗೆ ಕಿಂಚಿತ್ತೂ ಧಕ್ಕೆ ಉಂಟಾಗದಂತೆ ತನ್ನ ಸಿದ್ಧಾಂತವನ್ನು ಮಣಿಸಿಕೊಂಡಿರುವುದು ನಿಜ. ಅದನ್ನು ವಾಜಪೇಯಿ ಪ್ರಧಾನ ಮಂತ್ರಿಯಾದಾಗಲೇ ನೋಡಿದ್ದೇವೆ. ಮೇಲ್ ಜಾತಿಗಳು ಮೇಲ್ ವರ್ಗವಾಗಿ ಬಂಡವಾಳಶಾಹಿ ಸ್ವರೂಪದಲ್ಲಿ ಸಾಮಾಜಿಕ ಅಧಿಕಾರವನ್ನು ಪಡೆದುಕೊಳ್ಳುವುದು ಬ್ರಾಹ್ಮಣ್ಯವಾದಿ ಸಿದ್ಧಾಂತಕ್ಕೆ ಹೆಚ್ಚು ವಿರುದ್ಧವಲ್ಲ. ಆದರೆ ಈ ನವ ಉದಾರವಾದಿ ಆರ್ಥಿಕತೆ ಪ್ರಬಲ ಶೂದ್ರ ಸಮುದಾಯಗಳಲ್ಲಿನ ಒಂದು ಸಣ್ಣ ವರ್ಗಕ್ಕೂ ಮೇಲ್ಚಲನೆ ತಂದುಕೊಡುತ್ತದೆ.

ಸಂಘಪರಿವಾರದ ಇತ್ತೀಚಿನ ಇತಿಹಾಸವನ್ನು ನೋಡಿದರೆ ಈ ಶೂದ್ರ ಮೇಲ್ ವರ್ಗವನ್ನು ಅದರ ಹಿತಾಸಕ್ತಿಗೆ ಧಕ್ಕೆಯಾಗದಂತೆ ತನ್ನ ಚೌಕಟ್ಟಿನೊಳಗೆ ತಂದುಕೊಳ್ಳದಿದ್ದಾಗಲೆಲ್ಲಾ ಆ ವರ್ಗ ತನ್ನ ಜಾತಿ ಬೆಂಬಲದೊಂದಿಗೆ ಹಿಂದೂತ್ವಕ್ಕೆ ಸವಾಲು ಹಾಕಿದೆ. ಆದರೆ ಬಹಳ ಬೇಗ ಹಿಂದೂತ್ವ ಆ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡು ಅಥವಾ ಇತರ ಒತ್ತಡಗಳನ್ನು ಸೃಷ್ಟಿಸಿ ಮಣಿಯುವಂತೆ ಮಾಡಿಕೊಂಡು ಮುನ್ನಡೆದಿದೆ. ಆದರೆ ಆ ಪ್ರಕ್ರಿಯೆಯಲ್ಲಿ ತನ್ನ ಹಿಂದೂತ್ವ ಚೌಕಟ್ಟಿನೊಳಗೂ ಸ್ವಲ್ಪ ಬದಲಾವಣೆ ಮಾಡಿಕೊಂಡಿದೆ.

ಆದರೆ ಸಂಘಪರಿವಾರದ ಬಿಕ್ಕಟ್ಟು ಏನೆಂದರೆ ಜಾತಿ ಎಂಬುದೂ ಹಲವು ನೂರರ ಸಂಖ್ಯೆಗಳಲ್ಲಿರುವುದು. ಹಿಂದೂ ಚೌಕಟ್ಟಿನೊಳಗೆ ಎರಡು ಪ್ರಬಲ ಜಾತಿಯೊಳಗೆ ವೈರುಧ್ಯ ಬಂದಾಗ ಅವೆರಡನ್ನೂ ಹಿಂದೂ ಚೌಕಟ್ಟಿನೊಳಗೆ ಉಳಿಸಿಕೊಂಡು ಪರಿಹರಿಸುವುದು ಹೇಗೆ ಎಂಬುದು. ಕರ್ನಾಟಕದಲ್ಲಿ ರೂಪುಗೊಂಡಿರುವ ಲಿಂಗಾಯತ-ಒಕ್ಕಲಿಗ ಹಣಾಹಣಿಯ ರೀತಿ. ಇದು ಭಾರತದ ಫ್ಯಾಸಿಸ್ಟ್ ಶಕ್ತಿಗಳಿಗೆ ಭಾರತದ ಸಾಮಾಜಿಕ ರಚನೆ ಹಾಕುವ ಸವಾಲು ಕೂಡಾ ಆಗಿದೆ. ಒಂದು ಆಳುವ ವರ್ಗದ ಒಂದು ಗುಂಪಿನ ಪರವಾಗಿ, ಉಳಿದ ಆಳುವ ವರ್ಗವನ್ನು ಒಳಗೊಂಡಂತೆ ಇಡೀ ಜನತೆಯನ್ನು ದಮನಿಸಲು ಜನರಿಂದಲೇ ಸಮ್ಮತಿ ಪಡೆದುಕೊಳ್ಳುವ ಅಧಿಕಾರ ತಂತ್ರವಾಗಿ ಫ್ಯಾಸಿಸಂ ಭಾರತದಲ್ಲಿ ಜಾರಿಗೆ ಬರಲು ಪ್ರಬಲ ಜಾತಿಗಳ ನಡುವೆ ಅಧಿಕಾರ ಪೈಪೋಟಿ ಮತ್ತು ಜಾತಿ ಆಧಾರಿತ ಬೆಂಬಲ ಮತ್ತು ಸಮಾಜ ರಚನೆ ಅಡ್ಡಿಯುಂಟುಮಾಡುತ್ತದೆ.

ಈ ಘರ್ಷಣೆ ಈ ಬಾರಿ ಸಂಘಪರಿವಾರದೊಳಗೂ ಪೈಪೋಟಿಯನ್ನೂ, ಗುಂಪುಗಳನ್ನೂ ಹುಟ್ಟುಹಾಕಿದೆ. ಅದಕ್ಕೆ ವ್ಯಕ್ತಿ ಹಿತಾಸಕ್ತಿಯನ್ನು ಮೀರಿದ ಸಾಮಾಜಿಕ ನೆಲೆಯ ಬಣ್ಣವನ್ನು ಲೇಪಿಸುವ ಪ್ರಯತ್ನದಲ್ಲಿ ಎಲ್ಲರೂ ತೊಡಗಿದ್ದಾರೆ. ಕೆಲವರು ತಮ್ಮ ಜಾತಿಗೆ ಅನ್ಯಾಯವಾಗಿದೆ ಎಂತಲೂ ಕೆಲವರು ಸಂಘಟನೆಗೆ ಅನ್ಯಾಯವಾಗಿದೆ ಎಂತಲೂ ಬಣ್ಣ ಕಟ್ಟುತ್ತಾರೆ. ಬಿಜೆಪಿಯ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮತ್ತು ಆರೆಸ್ಸೆಸ್ ಒಳಗೂ ಸಹ ಯಡಿಯೂರಪ್ಪ ಮತ್ತು ಸದಾನಂದ ಗೌಡರ ಬಣಗಳು ರೂಪುಗೊಳ್ಳಲಿಲ್ಲವೇ... ಅದೇರೀತಿಯಲ್ಲಿ ಹೀಗೆ ಬಿಜೆಪಿಯ ಗುಂಪುಗಾರಿಕೆ ಮತ್ತು ಕರಾವಳಿಯ ಕಲ್ಲಡ್ಕ ಪ್ರಭಾಕರ ಭಟ್ಟನ ಪ್ರಕರಣ ರುಜುವಾತುಗೊಳಿಸುವಂತೆ ಈ ಭ್ರಷ್ಟತೆ ಕೇವಲ ಬಿಜೆಪಿಯ ಒಲಸಿಗರ ಅಥವಾ ಬಿಜೆಪಿ ಪಕ್ಷಕ್ಕೆ ಮಾತ್ರ ಸೀಮಿತವಾಗಿಲ್ಲ. ಆರೆಸ್ಸೆಸ್ ಅನ್ನು ಒಳಗೊಂಡಂತೆ ಇಡೀ ಸಂಘಪರಿವಾರ ಈ ಭ್ರಷ್ಟತೆಯಲ್ಲಿ ಪಾಲು ಪಡೆದಿದೆ. ಹೀಗಾಗಿಯೇ ಕೆಲವೊಮ್ಮೆ, ಹಾಲಾಡಿ ಶ್ರೀನಿವಾಸ ಶೆಟ್ಟಿ ಪ್ರಕರಣದಲ್ಲಿ ಕಾಣುತ್ತಿರುವಂತೆ ಬಹಿರಂಗ ಬಂಡಾಯಗಳನ್ನು ಕಾಣಬೇಕಾಗುತ್ತದೆ.

ಸಾರಾಂಶದಲ್ಲಿ ನೋಡಿದರೆ ಹಿಂದೂ ಹಿಂದೂ ಒಂದು ಎಂದು ಸಂಘಪರಿವಾರ ಎಷ್ಟೇ ಬೊಬ್ಬೆ ಹಾಕಿದರೂ ಪ್ರಬಲ ಜಾತಿಗಳ ಮೇಲ್ ವರ್ಗದ ಹಿತಾಸಕ್ತಿಯನ್ನು ಹಿಂದೂತ್ವದ ಚೌಕಟ್ಟು ರಕ್ಷಿಸಿ ಬೆಳೆಯಲು ಅವಕಾಶ ಮಾಡಿಕೊಡದಿದ್ದರೆ ಸಾಮಾಜಿಕ ನೆಲೆಯನ್ನು ಪಡೆದುಕೊಳ್ಳುವುದು ಕಷ್ಟ, ದೇಶಾದ್ಯಂತ ಸಾಬೀತಾಗಿರುವುದೇ ಕರ್ನಾಟಕದಲ್ಲೂ ಸಾಬೀತಾಗಿದೆ. ಕರಾವಳಿಯ ವಿಶೇಷವೆಂದರೆ ಅಲ್ಲಿ ಹಿಂದೂತ್ವದ ಸಂಘಟನೆ ಕಲ್ಲಡ್ಕ ಪ್ರಭಾಕರ ಭಟ್ಟನ ಖಾಸಗಿ ಸಾಮ್ರಾಜ್ಯದಂತಿರುವುದು ಸಹ ಈ ವೈರುಧ್ಯಕ್ಕೆ ಇನ್ನಷ್ಟು ತೀವ್ರತೆಯನ್ನು ತಂದುಕೊಟ್ಟಿದೆ.

ಭಾರತದ ಈ ಜಾತಿ ಆಧಾರಿತ ಸಮಾಜದಲ್ಲಿ ಮೇಲ್ಲಿನಿಂದ ಹೇರಿರುವ ವಿಕೃತ ಬಂಡವಾಳಶಾಹಿ ಆರ್ಥಿಕತೆ ಮತ್ತು ಪ್ರಜಾತಂತ್ರವು ಜಾತಿಯನ್ನು ಮೀರಿದ ವರ್ಗ ಐಡೆಂಟಿಟಿಯನ್ನು ಕಟ್ಟಲು ಎಡಪಂಥೀಯರಿಗೆ ಸವಾಲು ಒಡ್ಡುತ್ತಿರುವಂತೆ ಬಲಪಂಥೀಯರಿಗೂ ಸವಾಲು ಒಡ್ಡುತ್ತದೆ. ಇಲ್ಲಿ ಬೇರೆ ಬೇರೆ ಸಮುದಾಯಗಳ ಆಸಕ್ತಿಗಳನ್ನು ಒಳಗೊಳ್ಳುವುದು ಹಿಂದೂತ್ವದ ಜಾತಿ ಶ್ರೇಣೀಕೃತ ಸಿದ್ಧಾಂತಕ್ಕೆ ವ್ಯತಿರಿಕ್ತವಾದುದು. ಜಾತಿಯನ್ನು ಮೀರಿದ ಹಿಂದೂ ಐಡೆಂಟಿಟಿ ಸಮಾನ ಕಲ್ಪಿತ ಶತ್ರುವೊಬ್ಬ ಮುಸ್ಲಿಮ್-ಪಾಕಿಸ್ತಾನ ಇದ್ದಾಗ ರೂಪುಗೊಳ್ಳುವುದು ಸುಲಭ. ಸಮಾನ ಶತ್ರುವಿಲ್ಲದಾಗ ಜಾತಿ ತಾರತಮ್ಯ ಮತ್ತು ಬಡತನ ಶತ್ರುಗಳಾಗಿ ಕಾಣತೊಡಗುವುದು ಸಹಜ. ಏಕೆಂದರೆ ಅದು ಕಲ್ಪಿತವಲ್ಲ, ನಿಜವಾದದ್ದು. ಆದರೆ ಅದು ನಿಜವಾದರೂ ಒಂದು ಎಡಪಂಥೀಯ ಅರ್ಥಾತ್ ವರ್ಗದ ನೆಲೆಯಲ್ಲಿ ಜನರನ್ನು ಸಂಘಟಿಸುವ ರಾಜಕಾರಣದ ಅನುಪಸ್ಥಿತಿಯಲ್ಲಿ ಜೀವನದ ಅನುಭವ ಪ್ರಜ್ಞಾಪೂರ್ವಕ ಅಭಿಪ್ರಾಯವಾಗಿ ಮತ್ತು ಬದಲಾಗಬೇಕೆಂಬ ಹಂಬಲವಾಗಿ ಬದಲಾಗುವುದಿಲ್ಲ. ಹೀಗಾಗಿ ಬಿಜೆಪಿಯೊಳಗಿನ ಗುಂಪುಗಾರಿಕೆ ಮತ್ತು ಆಸ್ತಿ ಹಾಗೂ ಅಧಿಕಾರ ಆರೆಸ್ಸನ್ನು ಒಳಗೊಂಡಂತೆ ಇಡೀ ಸಂಘಪರಿವಾರವನ್ನು ದುರ್ಬಲಗೊಳಿಸುತ್ತಿರುವ ಸಂದರ್ಭ ಇದ್ದರೂ ಅದು ಪ್ರಬಲ ಜಾತಿಗಳ ಜಾತಿರಾಜಕಾರಣಕ್ಕೆ ಇಂಬುಗೊಡಬಹುದೇ ವಿನಃ ಜನಪರ ರಾಜಕಾರಣಕ್ಕೆ ಬಳಸಿಕೊಳ್ಳುವ ಪರಿಸ್ಥಿತಿಯಲ್ಲಿ ಪ್ರಗತಿಪರ ರಾಜಕಾರಣವಿಲ್ಲ.

ಹೀಗೆ ಹಾಲಾಡಿ ಶ್ರೀನಿವಾಸ ಶೆಟ್ಟರ ಪ್ರಕರಣ ಮತ್ತು ಬಿಜೆಪಿಯೊಳಗಿನ ಒಟ್ಟಾರೆ ಗುಂಪುಗಾರಿಕೆ ಹಿಂದೂತ್ವಕ್ಕೂ ಇರುವ ಸವಾಲನ್ನು ಸೂಚಿಸುತ್ತದೆ. ಆದರೆ ಆರೆಸ್ಸೆಸ್‌ನ ಅಂತರಂಗದ ಬೆಂಬಲದೊಂದಿಗೆ ಯಡಿಯೂರಪ್ಪನವರು ನಡೆಸಿದ ಲಿಂಗಾಯತ ರಾಜಕಾರಣ, ಅದಕ್ಕೆ ವ್ಯತಿರಿಕ್ತವಾಗಿ ತೀವ್ರಗೊಂಡ ಒಕ್ಕಲಿಗ ರಾಜಕಾರಣ ಮತ್ತೆ ಕರ್ನಾಟಕದ ರಾಜಕಾರಣದಲ್ಲಿ ಬಲಾಢ್ಯ ಜಾತಿಗಳ ಮೇಲಾಳ್ವಿಕೆಯನ್ನು ಮುನ್ನೆಲೆಗೆ ತಂದಿದೆ. ಅರಸು ಸಮಯದಲ್ಲಿ ಅಧಿಕಾರ ಕಂಡ ಸಣ್ಣಪುಟ್ಟ ಹಿಂದುಳಿದ ಜಾತಿಗಳು ಮತ್ತು ದಲಿತ ಜಾತಿಗಳು ಮತ್ತೆ ಈ ಮೇಲ್ಜಾತಿಗಳ ರಾಜಕಾರಣದ ಬಾಲಂಗೋಚಿಯಾಗುವ ಸ್ಥಿತಿಗೆ ದೂಡಲ್ಪಟ್ಟವೆ ಎಂಬುದಂತೂ ನಿಜ.

ಸಂಘಪರಿವಾರದೊಳಗೆ ಇಷ್ಟೆಲ್ಲಾ ಕಚ್ಚಾಟ ಮತ್ತು ಕಿತ್ತಾಟಗಳು ನಡೆಯುತ್ತಿದ್ದರೂ, ರಾಮಕುಂಜೇಶ್ವರದಲ್ಲಿ ಮಾತ್ರ ಮುಸ್ಲಿಂ ಹುಡುಗಿಯರೂ ಹಿಜಾಬ್‌ಅನ್ನು ಹಾಕಿಕೊಂಡು ಬರಬಾರದೆಂಬ ಕಟ್ಟಳೆಗಳು ಮಾತ್ರ ನಿರಾತಂಕವಾಗಿ ಮುಸ್ಲಿಮರ ಮೇಲೆ ದಬ್ಬಾಳಿಕೆ ನಡೆಸುವುದನ್ನು ಮುಂದುವರೆಸಿವೆ.

❖

ಓ.ಟಿ.ರವೀಂದ್ರನ್ ಹಾಸ್ಯ ಪ್ರಸಂಗ ೮

ವಿಚಿತ್ರ ಭೋಜನ ಕೂಟ

ಸೊಟ್ಟಾಗಿ ಬೆವರು ಸುರಿಸುತ್ತ ಶ್ರೀಮತಿ ಪದ್ಮಾ ಕೃಷ್ಣಸ್ವಾಮಿ ಮತ್ತು ಅವರ ಪತಿ ಶ್ರೀ ಕೃಷ್ಣಸ್ವಾಮಿ ಮರೀನಾ ಬೀಚಿಗೆ ಬಂದರು.

ಮೊಟ್ಟಮೊದಲು ಆಕೆಯ ಕಣ್ಣಿಗೆ ಬಿದ್ದ ಬೆಸ್ತನಿಗೆ ಆಕೆ "ನನಗೊಂದು ಕಟಮಾರನ್ ತೋರಿಸು" ಎಂದು ಆರ್ಡರ್ ಮಾಡಿದಳು.

"ಕಟಮಾರನ್ ನಿಮಗ್ಯಾಕೆ? ನೀವೇನು ಸಮುದ್ರದಲ್ಲಿ ಮೀನು ಹಿಡಿಯಲು ಹೋಗ್ತೀರಾ?" ಎಂದು ಆ ಬೆಸ್ತ ಕೇಳಿದ.

"ಅವಳು ಸಮುದ್ರದಲ್ಲಿ ಒಂದು ಸಬ್‌ಮೆರಿನ್‌ನ ಹಿಡಿಯಬಹುದು... ಅದೂ ಅಮೆರಿಕನ್ ಸಬ್‌ಮೆರಿನ್" ಎಂದು ಆಕೆಯ ಗಂಡ ಮಿಸ್ಟರ್ ಕೆ. ಉತ್ತರ ಕೊಟ್ಟ.

ಪದ್ಮಾ ಹತ್ತಿರವೇ ಇದ್ದ ಕಟಮಾರನ್‌ನ ಒಂದು ಹುಟ್ಟನ್ನು ಕೈಗೆತ್ತಿಕೊಳ್ಳುತ್ತಲೇ ಮಿಸ್ಟರ್. ಕೆ. ಓಡಿಹೋಗಿ ಒಂದು ದೋಣಿ ಹಿಂದೆ ಅವಿತುಕೊಂಡ.

"ನಾನು ನನ್ನ ಇಬ್ಬರು ಅಮೆರಿಕನ್ ಸ್ನೇಹಿತರಿಗೆ ಒಂದು ಡಿನ್ನರ್ ಕೊಡಬೇಕೂಂತ ಇದೀನಿ. ಅವರಿಗೆ ಎರಡೂವರೆ ಸಾವಿರ ವರ್ಷಗಳಷ್ಟು ಪುರಾತನವಾದ ನಮ್ಮ ಅದ್ಭುತ ಸಂಸ್ಕೃತಿಯ ಪರಿಚಯ ಮಾಡಿಕೊಡಬೇಕು. ಅದಕ್ಕಾಗಿ ಅವರಿಗೆ ನಮ್ಮನೆ ಸ್ವಿಮಿಂಗ್‌ಪೂಲ್‌ನಲ್ಲಿ ಕಟಮಾರನ್ ಮೇಲೆ ಊಟ ಮಾಡಿಸಬೇಕು."

"ಮತ್ತೆ ಅವತ್ತು ನಾನು ಅಡಿಗೆ ಮಾಡ್ತೀನಿ!" ಮಿಸ್ಟರ್. ಕೆ. ಅಡಗಿದ್ದ ದೋಣಿಯ ಹಿಂದಿನಿಂದ ಕೂಗಿದ.

"ಯಾರು ಅಡಿಗೆ ಮಾಡ್ತಾರೆ ಅನ್ನೋದು ಮುಖ್ಯವಲ್ಲ, ನಮ್ಮ ಸ್ಟೈಲನ ನೋಡಿ ಅವರು ದಂಗಾಗಬೇಕು. ಅವರು ಅಮೆರಿಕಾಗೆ ಹಿಂತಿರುಗಿದ ಮೇಲೆ ಅವರ ಕ್ಯಾಲಿಫೋರ್ನಿಯಾದ ರ್‍ಯಾಂಚ್‌ನಲ್ಲಿ ಕೆಲವು ದಿನ ಕಳೆಯಲು ನನ್ನನ್ನು ಆಹ್ವಾನಿಸಬೇಕು" ಎಂದು ಪದ್ಮಾ ಅಂದಳು.


ಪದ್ಮಾ ಆ ಕಟಮಾರನ್‌ನನ್ನು ಬಹಿರಂಗಪಡಿಸಲಾಗದ ಒಂದು ದೊಡ್ಡ ಮೊತ್ತ ಕೊಟ್ಟು ಖರೀದಿಸಿದಳು. ಮಿಸ್ಟರ್.ಕೆ. ಅದನ್ನು ಮನೆಗೆ ಸಾಗಿಸಲು ಒಂದು ಲಾರಿ ಏರ್ಪಡಿಸಿದ. ಮತ್ತು ಹೆಂಡತಿಯನ್ನು ಒಂದು ಬ್ಯಾಂಡ್‌ಸೆಟ್ ತರಿಸೋಣ ಎಂದು ಕೇಳಿಕೊಂಡ.

"ಯಾಕೆ ಬ್ಯಾಂಡ್?" ಪದ್ಮಾ ಕೇಳಿದಳು.

"ನಾವೇನೂ ಕಟಮಾರನ್ ದೋಣಿಯನ್ನು ಪ್ರತಿದಿನ ಮೆರವಣಿಗೆಯಲ್ಲಿ ತಗೊಂಡು ಹೋಗೊಲ್ಲ" ಎಂದು ಗಂಡ ಅನ್ನುತ್ತಿದ್ದಂತೆ ಪದ್ಮಾ ಆತನತ್ತ ಒಂದು ಉಗ್ರನೋಟ ಬೀರಿ ಸುಮ್ಮನಾಗಿಸಿದಳು.

ಲಾರಿಗೆ ಕಟಮಾರನ್ ಏರಿಸಿ, ಪದ್ಮಾ ಲಾರಿಯ ಕ್ಯಾಬಿನ್‌ನಲ್ಲಿ ಕುಳಿತಳು. ಮಿಸ್ಟರ್.ಕೆ. ಕಟಮಾರ್ ಜೊತೆ ಲಾರಿಯ ಹಿಂದೆ ಕುಳಿತ. ಮಿ.ಕೆ. ಚಪ್ಪಾಳೆ ಹೊಡೆಯುತ್ತ, ಮೂಗಿನಿಂದ ವಿಚಿತ್ರ ಶಬ್ದಗಳನ್ನು ಹೊರಡಿಸುತ್ತ ತಾನೇ ಬ್ಯಾಂಡ್ ಮಾಸ್ಟರ್‌ನಂತೆ ವರ್ತಿಸುತ್ತಿದ್ದ. ಈ ವಿನೂತನ ಮೆರವಣಿಗೆ ಮನೆ ಕಡೆ ಸಾಗಿತು. ಮನೆಯ ತೋಟದ ಮಾಲಿ, ಅಡುಗೆ ಸಹಾಯಕ ಹಾಗೂ ಆ ಬೀದಿಯ ಮಕ್ಕಳು ಸೇರಿ ಕಟಮಾರನ್‌ನನ್ನು ಮನೆಯ ಸ್ವಿಮಿಂಗ್‌ಪೂಲ್ ಬಳಿ ತಂದರು. ಆದರೆ ಸ್ವಿಮಿಂಗ್ ಪೂಲ್ ಕಟಮಾರನ್‌ಗಿಂತ ಚಿಕ್ಕದಾಗಿದೆ!

"ನಿನ್ನ ದೋಣಿ ಸ್ವಿಮಿಂಗ್‌ಪೂಲ್‌ನಲ್ಲೇನೂ ತೇಲೋದಿಲ್ಲ" ಎಂದು ಮಿ.ಕೆ. ಟೀಕಿಸಿದ. ಪದ್ಮಾ ಅದಕ್ಕೊಂದು ಪ್ಲಾನ್ ಮಾಡಿದಳು. ಸ್ವಿಮಿಂಗ್‌ಪೂಲ್‌ನ ಭರ್ತಿ ನೀರು ತುಂಬಿ ಕಟಮಾರನ್‌ನನ್ನು ಸ್ವಿಮಿಂಗ್ ಪೂಲ್ ಮೇಲೆ ಉದ್ದಕ್ಕೆ ಇಟ್ಟುಬಿಡುವುದು. ಅತಿಥಿಗಳಿಗೆ ತಾವು ನೀರಿನಲ್ಲಿ



ತೇಲಿಕೊಂಡಿದ್ದೇವೆ ಎಂದು ಅನ್ನಿಸಬಹುದು.

****

ಮಿ. ಮತ್ತು ಮಿಸೆಸ್ ಓಹಾರ, ಮಿಸೆಸ್ ಡೈಸಿ ಟ್ರಂಪೆಟ್‌ವಾಲ, ಮಿಸೆಸ್ ಗ್ಲಾಡಿಯೊಲಿ ಥಾಂಸನ್ ಮತ್ತು ಪದ್ಮಾ ಕಟಮಾರನ್ ಮೇಲೆ ಕುಳಿತು ಬಾಳೆಎಲೆಯಲ್ಲಿ ಊಟ ಮಾಡಿದರು.

ಮಿ. ಓಹಾರ "ಆಹಾ ಇದೆಷ್ಟು ರುಚಿಯಾಗಿದೆ" ಎನ್ನುತ್ತ ಒಂದು ದೊಡ್ಡ ಚೂರು ಇಡ್ಲಿಯನ್ನು ಬಾಯಿಗೆ ತುರುಕಿಕೊಂಡ. ಚಟ್ನಿಯನ್ನು ಪ್ರಶಂಸಿಸುತ್ತ ಮಿಸೆಸ್ ಓಹಾರ ತೆಳ್ಳಗಿನ ಚಟ್ನಿ ಒಂದಷ್ಟನ್ನು ಕುಡಿದುಬಿಟ್ಟಳು. ಆಗ ಮಿ.ಓಹಾರ 3-4 ಚೂರು ಆವಕ್ಕಾಯಿ ಉಪ್ಪಿನಕಾಯಿಯನ್ನು ಗಬಕ್ಕನೆ ಬಾಯಿಗೆ ಹಾಕಿಕೊಂಡ. ಕೆಲವೇ ನಿಮಿಷಗಳಲ್ಲಿ ಅವನ ಮುಖವೆಲ್ಲಾ ಕೆಂಪೇರಿತು. ಉಸಿರು ಕಟ್ಟಿದಂತಾಗಿ ಅವನು ಬಟ್ಟಕಣ್ಣು ಬಿಟ್ಟಂತೆ ಗ್ಲಾಡಿಯೊಲಿ ಕಡೆ ದಿಟ್ಟಿಸಿದ. ಗ್ಲಾಡಿಯೊಲಿ ಸೆರಗನ್ನು ಸರಿಪಡಿಸಿಕೊಳ್ಳುತ್ತ "ಹಾಗೆಲ್ಲ ನನ್ನ ಕಡೆ ನೋಡಬೇಡ" ಎಂದು ವಯ್ಯಾರ ಮಾಡಿದಳು.

"ಓ-ಓ-ಓ-ಓ.."ಎಂದು ಮಿ. ಓಹಾರ್ ನರಳಿದ.

"ಏನಾಯಿತು ಮಿ. ಓಹಾರ?" ಎಂದು ಪದ್ಮಾ ಕೇಳಿದಾಗ ಮಿಸೆಸ್ ಓಹಾರ ಆ ಸಮಯದಲ್ಲೂ "ಓ ಮೈಗಾಡ್! ಅವನನ್ನ ಟಾಮ್ ಅನ್ನು" ಎಂದು ಪದ್ಮಾಳಿಗೆ ಹೇಳಿಕೊಟ್ಟಳು.

ಮಿ. ಓಹಾರನ ಓ-ಓ ನರಳಿಕೆ ಮುಂದುವರಿದಿತ್ತು. ಆಗ ಗ್ಲಾಡಿಯೊಲಿಗೆ ಕೊಂಚ ಜ್ಞಾನೋದಯವಾದಂತಾಗಿ "ಆತನಿಗೆ ವಿಪರೀತ ಖಾರ ಆಗಿರಬೇಕು, ಸ್ವಲ್ಪ ತುಪ್ಪ ತಿನ್ನಿಸಿ" ಎಂದು ಕೂಗಿಕೊಂಡಳು. ಡೈಸಿ ತುಪ್ಪದ ಬಟ್ಟಲನ್ನು ತೆಗೆದುಕೊಂಡು ಮಿ. ಓಹಾರ ಓ... ಎಂದು ಬಾಯಿಬಿಟ್ಟಾಗ ಒಂದಿಷ್ಟು ತುಪ್ಪ ಸುರಿದಳು. ಓಹಾರನಿಗೆ ಅದೇನು ಶಮನ ಮಾಡಿದಂತೆ ಕಾಣಲಿಲ್ಲ, ಡೈಸಿ ಉಳಿದ ತುಪ್ಪವನ್ನು ಅವನು ಇನ್ನೊಮ್ಮೆ ಬಾಯ್ಬಿಟ್ಟಾಗ ಸುರಿಯಲು ರೆಡಿಯಾಗಿದ್ದಳು. ಅವಳಿಗೆ ಸಹಾಯ ಮಾಡೋಣ ಅಂತ ಗ್ಲಾಡಿಯೊಲಿ ಡೈಸಿಯ ಪಕ್ಕಕ್ಕೆ ಸರಿದಳು. ಇಷ್ಟರಲ್ಲಿ ಏರುಪೇರಾಗಿ ಕಟಮಾರನ್ ಮಗುಚಿಕೊಂಡು ಮಸಾಲೆದೋಸೆ, ಮಿ. ಓಹಾರ, ಉಪ್ಪಿನಕಾಯಿ ಉಳಿದೆಲ್ಲರೂ ನೀರಿನ ಪಾಲಾದರು.

"ಬನ್ರೀ... ನನ್ನ ಎತ್ ಬನ್ನಿ" ಎಂದು ಪದ್ಮಾ ಕೂಗುತ್ತಿರುವಾಗ, "ಹೆಲ್ಪ್ ಹೆಲ್ಪ್" ಎಂದು ಗ್ಲಾಡಿಯೊಲಿ ಕಿರುಚಿಕೊಂಡಳು. ಮನೆ ಒಳಗಿಂದ ಓಡಿಬಂದ ಮಿ.ಕೆ.ಯ ಹಿಂದೆ ಅವರ ನಾಯಿ ಟ್ಯಾಮಿಯೂ ಓಡಿಬಂತು. ಮಿ.ಕೆ. ಪೂಲ್‌ನ ಅಂಚಿನಲ್ಲಿ ನಿಂತು ಹೆಂಡತಿಗೆ ಅವನ ಕೈಕೊಟ್ಟ. ಪದ್ಮಾ ಗಾಬರಿಯಿಂದ ಉಸಿರುಬಿಟ್ಟ ರಭಸಕ್ಕೆ ಮಿ.ಕೆ. ತಲೆಕೆಳಗಾಗಿ ನೀರಿನೊಳಕ್ಕೆ ಡೈವ್ ಹೊಡೆದ. ಅವನ ಹಿಂದೆ ನಾಯಿಯೂ ಸಹ.

ತೋಟದ ಮಾಲಿ, ಅಡುಗೆ ಸಹಾಯಕ, ನೆರೆಹೊರೆ ಜನ ಮತ್ತು ಸ್ವತಃ ಸ್ವಿಮಿಂಗ್ ಕೋಚ್ ಆಗಿದ್ದ ಮಿಸೆಸ್ ಓಹಾರ್ ಇವರಿಗೆ ಉಳಿದವರನ್ನು ನೀರಿನಿಂದ ಎಳೆದು ಹಾಕುವಷ್ಟರಲ್ಲಿ ಸಾಕುಬೇಕಾಯ್ತು.

****

ಎಲ್ಲರೂ ಸುಧಾರಿಸಿಕೊಂಡ ಒಂದು ಗಂಟೆಯ ನಂತರ ಇನ್ನೂ ಮುಖ ಕೆಂಪಗೆ ಉರಿಯುತ್ತಿದ್ದ ಮಿ. ಓಹಾರ "ಕಟಮಾರನ್ ಪಾರ್ಟಿ ಬಹಳ ಅದ್ಭುತವಾಗಿತ್ತು" ಎಂದು ಪದ್ಮಳನ್ನು ವಂದಿಸಿದ. ಮಿಸೆಸ್ ಓಹಾರ ಸಹ ದನಿಗೂಡಿಸಿದಳು. ನಂತರ ಪದ್ಮಾ ಮಾಡಿದ ಮೊದಲ ಕೆಲಸವೆಂದರೆ ತೋಟದ ಮಾಲಿಗೆ ಆ ಕಟಮಾರನ್‌ನನ್ನು ಬಿಚ್ಚಿ ಕಾಂಪೌಂಡ್‌ನಿಂದ ಆಚೆಹಾಕು ಎಂದದ್ದು. ಮಿ.ಕೆ. ಮಾಲಿಗೆ ಕೊಂಚ ಲಂಚ ಕೊಟ್ಟು ಕಟಮಾರನ್‌ನ ಮರದ ದಿಮ್ಮಿಗಳನ್ನು ಗರಾಜಿನ ಹಿಂದೆ ಬಚ್ಚಿಟ್ಟ.

ಬಿಚ್ಚಿ ಹಾಕಿರುವ ಕಟಮಾರನ್ ದಿಮ್ಮಿಗಳನ್ನು ಮಿ.ಕೆ. ತಮ್ಮ ಮಹತ್ತರವಾದ ಸಾಂಸ್ಕೃತಿಕ ಪರಂಪರೆಯ ಪ್ರತೀಕವೆಂಬಂತೆ ಇಟ್ಟುಕೊಂಡಿದ್ದಾನೆ. ಮಿ.ಕೆ. ಯು ತಮ್ಮ ಮನೆಗೆ ಬಂದ ವಿ.ಐ.ಪಿ. ಅತಿಥಿಗಳಿಗೆ ಆ ಕಟಮಾರನ್ ದಿಮ್ಮಿಗಳನ್ನು ತೋರಿಸಿ "ನನ್ನ ಹೆಂಡತಿಯ ಮುತ್ತಾತ ಬಹಳ ದೊಡ್ಡ ಮನುಷ್ಯ. ಅವರು ಈ ಕಟಮಾರನಲ್ಲೇ ಮೀನು ಹಿಡಿಯಲು ಸಮುದ್ರಕ್ಕೆ ಹೋಗುತ್ತಿದ್ದರು, ಕಟಮಾರನ್ ಮೇಲೆ ಕುಳಿತೇ ಊಟ ಮಾಡುತ್ತಿದ್ದರು" ಎಂದು ಹೇಳುತ್ತಿರುತ್ತಾನೆ.

(ವಿ.ಸೂ. ಕಟಮಾರನ್ ಎನ್ನುವುದು ತಮಿಳರು ತಮ್ಮ ಸಾಂಸ್ಕೃತಿಕ ಪರಂಪರೆಯ ದ್ಯೋತಕ ಎಂದು ಹೆಮ್ಮೆಪಡುವ ಸಮುದ್ರದಲ್ಲಿ ಮೀನು ಹಿಡಿವ ದೋಣಿ. ಇದನ್ನು ಮರದ ದಿಮ್ಮಿಗಳನ್ನು ಜೋಡಿಸಿ ಕಟ್ಟಿ ತಯಾರಿಸಿರುತ್ತಾರೆ. ತಮಿಳಿನಲ್ಲಿ ಈ ಬಗೆಯ ದೋಣಿಯನ್ನು 'ಕಟ್ಟುಮರಂ' ಎನ್ನುತ್ತಾರೆ. ಬ್ರಿಟಿಷರು ಅಪಭ್ರಂಶ ಮಾಡಿದ್ದರಿಂದ ಅದು ಕಟಮಾರನ್ ಎಂದು ತಿರುಚಲ್ಪಟ್ಟಿದೆ. ಈಗ ಇವು ಉಪಯೋಗದಲ್ಲಿ ಇಲ್ಲವಂತೆ.

ಶ್ರೀಮತಿ ಸರೋಜಿನಿ ನಾಯ್ಡು ಅವರು ಸಹ 'ಕಟಮಾರನ್' ಎಂದು ಒಂದು ಕವಿತೆ ಬರೆದಿದ್ದಾರೆ.)

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರನ್

ಕನ್ನಡಕ್ಕೆ : ಪದ್ಮ ಶ್ರೀರಾಮ್

ಆಧುನಿಕ ಭಾರತ

ಕವಿತೆಯೊಂದು ಸುಂದರವಾಗಿರಬೇಕಾದರೆ
ಅದಕ್ಕೊಂದು ಹೃದಯವಿರಬೇಕು
ಅದು ಕಣ್ಣೀರು ಸುರಿಸಬೇಕು
ರೋಷದ ಬೆಂಕಿ ಉಗುಳಬೇಕು
ದುಃಖಿತನ ಪರ ನಿಲ್ಲಬೇಕು
ಮಾನವೀಯತೆಯ ಋಣ ತೀರಿಸಬೇಕು
ಕಾಲ ಹೊರಿಸುವ ಭಾರ ಸಹಿಸಬೇಕು

ಕವಿತೆ ಉಳಿಯಬೇಕೆಂದರೆ
ಅದೊಂದು ಕೋಟೆಯಂತಿರಬೇಕು
ಮನುಷ್ಯನ ಅಂತಿಮ ವಿಜಯದ
ಬಾವುಟದಂತಿರಬೇಕು
****
ಸಿಸಗಾಗಿ ಕಣ್ಣೀರು ಸುರಿಸುವವರಿಗೆ ನೀನು ಋಣಿ
ಈ ಶತಮಾನದ ಹಸಿದವರೆಲ್ಲ ಮಾರ್ಕ್ಸ್‌ನಿಗೆ ಋಣಿ
****
ನಾನು ಅಕ್ಟೋಬರಿನಲ್ಲಿ ಹುಟ್ಟಿದೆ
ಕ್ರಾಂತಿಯೂ ಅಕ್ಟೋಬರಿನಲ್ಲಿ ಜನ್ಮ ತಾಳಿತು



ಎಂದೇ ಕತ್ತಲು ನನ್ನ ಕಂಡು ಭಯಗೊಳ್ಳುತ್ತದೆ
ರಷಿಯಾ ಅಥವಾ ಚೀನಾ ಅಷ್ಟೇ ಅಲ್ಲ
ಕ್ರಾಂತಿ ಎಂದೂ ಶಾಶ್ವತ..
****
ಶತ್ರುವಿನ ತುಪಾಕಿಗೆದುರಾಗಿ
ಸೇನೆಯು ಶಿಸ್ತಿನ ಸಾಲುಗಳಲ್ಲಿ ಚಲಿಸುತ್ತಿದೆ
ಸೈನಿಕ ಒಂದೇಸಮ ಮುಂದುವರೆಯುತ್ತಾನೆ
ಪಕ್ಕದವ ನೆಲ ಕಚ್ಚಿದರೂ
ಯಾವ ಸೈನಿಕನೂ ಕೇಳಲಾರ, ಏಕೆ ಈ ಸಾವು
ಏಕೆ ಈ ಯುದ್ಧ?
ಅರ್ಥವಿಲ್ಲದ ಪದಗಳಿರುವ ಕವಿತೆಯಂತೆ..
****
ಸಾಗರದಂತೆ ಇರುವ ಮನುಷ್ಯನಿಂದ
ಸತ್ಯ ದೂರ ನಡೆದು ಇಲ್ಲವಾದರೆ..
ನನಗೆ ಭಯವಾಗುತ್ತಿದೆ
ಸಾಗರವೇ ಬತ್ತಿ ಹೋದೀತು
ಪರ್ವತಗಳೇ ಹಾರಿಹೋದಾವು
ಮರಗಳು ಹೂವರಳಿಸದ ದಿನಗಳೂ
ದೂರವಿಲ್ಲ ಎಂದೇ ತೋರುತ್ತಿದೆ
****



ತೆಲುಗಿನ ವಿಪ್ಲವ ಕವಿ ಗುಂಟೂರು ಶೇಷೇಂದ್ರ ಶರ್ಮ ಅವರ 'ಆಧುನಿಕ ಭಾರತಂ'ದಿಂದ ಕೆಲವು ಸಾಲುಗಳು

ಅನು: ಡಾ.ಎಚ್.ಎಸ್.ಅನುಪಮಾ

ಕೃಪೆ: ಇಂಡಿಯನ್ ಲಿಟರೇಚರ್, ಮಾರ್ಚ್-ಏಪ್ರಿಲ್, 2012

ಮಂತ್ರಿಯಾಗಲಿಲ್ಲ ಅಂತ ಅಳೋರ ನೋಡಕ್ಕಾಗದಿಲ್ಲ ಕಂಡ್ಕ

ಮುನಿಸಿಕೊಂಡಂತೆ ಊದಿಕೊಂಡಿದ್ದ ಮೋಡ ...ಸ್ವಂತೆ ಕರಿಮುಗಿಲಾಗಿ, ತುಸುಹೊತ್ತು ಸುರಿದು ...ವಾಯ್ತು. ಆದರೂ ಭೂಮಿ ತಣಿದಿರಲಿಲ್ಲ. ಆದ್ದರಿಂದ ...ಯಿಂದ ಧಗೆ ಏಳತೊಡಗಿತು. ಇಂತಹ ಮಳೆಯಿಂದ ...ಾವನಿಗೇನೂ ಖುಷಿಯಾಗಿರಲಿಲ್ಲ, ಆದ್ದರಿಂದ,

...ಾಲ ಕೆಟ್ಟಂಗೂ ಮಳೆ ಮನಿಸಿಗೆ ಬಂದ ಆಟ ಆಡ್ತ ...ಂಡ್ಕ ಉಗ್ರಿ" ಎಂದ.

...ದ್ಕ ಈಟಾರ ಹುಯ್ತಲ್ಲ ಹೇಳು."

...ಹುಯ್ತು ಸರಿ ಕಂಡ್ಕ, ದನಕರ ನೀರು ಕುಡಿಯಂಗೆ ...ಗ್ಗೊಟೆಲೇನಾರ ನೀರು ನಿಂತಿದ್ದತೆ? ಹೋಗ್ಲಿ, ...ಾರು ಬಿತ್ನೆ ಮಾಡಂಗಿದ್ದಿಯೋ? ಇಲ್ಲ ಹಿಂಗಾರು ಮಾಡಂಗಿದ್ದಿಯೋ ಹೇಳು?"

...ೇನೇಳದು ನಿಜ ಕಣಮಾವ. ಹಾಕಿದ ಮುಂಗಾರ್‍ಯೆಲ್ಲ ... ಉರುದೋಯ್ತು. ಹಿಂಗಾರಿಗಿನ್ನೂ ಟೈಮದೆ. ಇಂತ ...

...ಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಲ್ಲಿ ಬಂದ ಮೇಳೆ ನೋಡಿದ್ರೆ ಜಗದೀಶ್ ಶೆಟ್ರು ...ಬಗಾಯ್ತು."

"ಅವುನಿಗ್ಯಾಕ್ಲ ಹೋಲುಸ್ತಿ ಮಳೆಯ?" ಎಂದಳು ...ಿ.

"ಈಗವುನು ಮುಖ್ಯಮಂತ್ರಿಯಾಗಿದ್ರಿಂದ ಏನು ...ೋಜನ ಹೇಳು? ಆಗದೆಯಿದ್ರೆ ಯಂಗಿತ್ತೊ ಅವುನಾದ ...ೂ ಅಂಗೆ ಅದವ್ವ ದೇಸ."

"ಅವುನಾಗಕೆಲ್ಯೊಗಿದ್ದುನ್ನ, ಎಡೂರಪ್ಪ ಮಾಡಿದ ...ಾದ, ಯಿಂದೆ ಯಮ್ಮೆಲ್ಲೆಗಳ್ಯಲ್ಲ ಸೇರಿ ಮುಖ್ಯಮಂತ್ರಿ ...ತಿದ್ದ ನೋಡಿದ್ಯೊ. ಆದ್ರೆ ಎಡೂರೇಳಿದೋನು ...ಖ್ಯಮಂತ್ರಿಯಾಯ್ತನೆ, ಅವುನೇಳಿದೋರು ...ಿಯಾಯ್ತರೆ ಅಂದ್ರೆ ಇದಿನ್ಯಂತ ಸರಕಾರನ್ನ?" ಎಂದ

"ಈ ಸರಕಾರ ಹುಟ್ಟಿದಾಗಿಂದ್ಲೂ ಇರದೆ ...ಲವೇನೊ! ಡೆಲ್ಲಿಲ್ಲೊಬ್ಬ ತೊಗಲಕ್ ಅಂತ ಇದ್ನಂತೆ. ...ನು ರಾಜ ಆದಮ್ಯಾಲೆ ಡಿಲ್ಲಿಯಿಂದ ದೇವಗಿರಿ, ...ಗಿರಿಯಿಂದ ಡಿಲ್ಲಿ ಅಂತ ರಾಜಧಾನಿನೆ ಬದ್ಲಾಸಿ ಜನಗಳ ಉರುಬಡಕಂಡು ತಿಂದನಂತೆ. ಮುಂದೆ ಅವುನು ಇದೇ ಬೂಕನಕೆರೆಲುಟ್ಟಿ, ಶಿಕಾರಿಪುರದಲ್ಲಿ ಶೆಟ್ಯಾಗಿ, ಮುಖ್ಯಮಂತ್ರಿನೂ ಆಗಿ, ಮಾಡಬಾರದ್ದ ಮಾಡಿ, ಅಧಿಕಾರ ಕಳಕಂಡ ಮ್ಯಾಲೆ ಸದಾನಂದಗೌಡನ್ನ ಮುಖ್ಯಮಂತ್ರಿ ಮಾಡಿ, ತಿರುಗ ಅವುನ್ನ ಬದ್ಲಾಸಿ ಶೆಟ್ಟರ್ ಮಾಡಿದನಂತೆ. ಆ ಟೇಮಲ್ಲಿ ಬರಗಾಲ ಬಂದು ಜನಗಳಿಗೆ ಕುಡಿಯಕ್ಕೆ ನೀರಿಲ್ದೆ ದನಿಗೆ ಮೇವಿಲ್ದೆ ಜನ ಯತ್ತಗೆ ಬೇಕು ಅತ್ತಗೆ ಗುಳೆ ಹೋಯ್ತಿದ್ರು. ಅದ ನೋಡೀ ಅವುನಿಗೆ ಏನೂ ಅನ್ನಿಸಲಿಲ್ಲ, ಅವುನಿಗಿದ್ದ ಹಟ ಏನಪ್ಪ ಅಂದ್ರೇ ತನ್ನ ಕಡಿಯವುರ ಮಂತ್ರಿ ಮಾಡಬೇಕು ಅನ್ನದೆ ಆಗಿತ್ತಂತೆ."

"ಮಂತ್ರಿಯಾದೇಟಿಗೆ ಭಾಳ ಬ್ಯಲೆ ಬತ್ತದೆ ಅಂತ ತಿಳಕಂಡವೆ" ಎಂದ ಕಾಳಮಾವ.

"ಅದಕಿಂತ್ಲೂ ಕೊಳ್ಳಿ ಹೊಡಿಬವುದಲ್ಲಾ ದೊಡಪ್ಪ, ಅದ್ಕೆ ಮಂತ್ರಿಯಾಗ್ಲೆಬೇಕು" ಎಂದುಕೊಂಡು ವಾಟಿಸ್ಸೆ ಬಂದ.

"ಯಾರ್‍ಯಾರು ಮಂತ್ರಿಗಳಾದುರ್ಲ?" ಎಂದಳು ಜುಮ್ಮಿ.

"ಸಾರಿ ಕಣಕ್ಕ, ನಾನು ನಿನಿಗೆ ಉತ್ತರ ಕೊಡಕ್ಕೆ ಭಾಳ ಅಸಮರ್ಥ ಆಗಿದ್ದಿನಿ. ನೈನ್‌ಟೀನ್ ಎಯಿಟಿತ್ರಿಲಿ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ರು. ಅವ್ರ ಸಂಪುಟದಲ್ಲಿ ಯಾರ್‍ಯಾರು ಮಂತ್ರಿಗಳಾಗಿದ್ರು ಅಂತ ಹೇಳಬಲ್ಲೆ, ಆ ನಂತರದ ಸರ್ಕಾರಗಳ ಮಂತ್ರಿಮಂಡಳನೂ ಹೇಳ್ತಿನಿ. ಆದ್ರೆ ಈ ಬಿಜೆಪಿಗಳ ಸರಕಾರದಲ್ಲಿ ಯಾವನು ಯಾವ ಕಾತೆ ಮಂತ್ರಿ ಅಂತ ಇವತ್ತಿಗೂ ಗೊತ್ತಿಲ್ಲ ಕಣಕ್ಕ."

"ಸೋಬ ಕರಿಂದ್ಲಾಜೆದೂ ಗೊತ್ತಿಲವೆ?"

"ಯಾವಾಗ ಅಂದ್ರಾವಾಗ ಕರಂಟು ತಗಿಯೋ ಅವುಳ ಕಾತೆ ಗೊತ್ತಿಲವೇನಕ್ಕ, ಹಳ್ಳಿ ಮಕ್ಕಳು ರಾತ್ರಿವೊತ್ತು ಒಂದು ಯರಡಗಂಟೆ ಓದಿಕತ್ತವೆ. ಅಮ್ಯಾಲೆ ಉಂಡು ಮನಿಕತ್ತವೆ. ಟೋಟಲ್ಲಿ ಮೂರುಗಂಟೆ ಕರಂಟು ಕೊಡೊ ಶಕ್ತಿಯಿಲ್ಲ ಅವುಳಿಗೆ. ಸದಾನಂದ ಗೌಡನ ವಿರುದ್ಧ ರಾಜಕಾರಣ ಮಾಡ್ತಳೆ. ನೀನು ಹೋಗಿ ಉಗುದು ಬಾರಕ್ಕ ಅವುಳಿಗೆ."

"ಅವುಳಿಗೇನು ಉಗಿತಿಲ. ಕಿವಿಕಿತ್ತು ಮೂಗರಿದು ಕುಂತವುಳೆ. ಅವುಳು ವಳ್ಯೊಳಾಗಿದ್ರೆ ಎಡೂರಪ್ಪನ ಜ್ವತೆ ಇರತಿದ್ಲೆ?"

"ಅಲ್ಲಾ ಕಣಕ್ಕ, ನ್ಯನ್ನೆ ದಿನ ಅನ್ನ ಕಲಸಿದ್ದಿನಿ. ಇನ್ನೇನು ಬಾಯಿಗಿಡಬೇಕು, ಆಗ ಕರಂಟು ತಗಿತರಲ್ಲಕ್ಕ? ಜೋಬಲ್ಲಿ ಬೆಂಕಿಕಡಿಯಿಲ್ಲ, ಸೀಮೆಯಣ್ಣೆ ಬುಡ್ಡಿ ಎಲ್ಲಿದ್ದತೊ ಏನೊ. ಇಂಥೋರ್‍ಯಲ್ಲ ಮಂತ್ರಿಗಳಂತೆ ಮಂತ್ರಿಗಳು. ಅವುನು ಆ ಚಿಕ್ಕಮಗಳೂರು ಈಡಿಯಟ್, ಹೆಂಡಿರ ಹೆಸರಲ್ಲಿ ಸೈಟು ಹೊಡಕಂಡು ಕೇಸಾಕಿಸಿಗಂಡವುನೆ. ಅವುನೂ ಮಂತ್ರಿ. ಇನ್ನು ಚನ್ನಪಟ್ಟದ ಬಳ್ಳಗಾಯಿ, ಅವುನೂ ಮಂತ್ರಿ."

"ಬಳ್ಳಗಾಯಿ ಯಾರ್‍ಲ?"

"ಅವುನೇ ಯೋಗೇಶ್ವರ ಕಣಕ್ಕ. ಸಂತಿಗೆ ಬಂದು ಕಾಯಿ ಯಾಪಾರ ಮಾಡತಿದ್ದ. ಕಾಯಿ ಕ್ವಾಲಿಟಿ ಗೊತ್ತಿಲ್ಲದೆ ಬಳ್ಳಗಾಯಿನೂ ತಗತಿದ್ದ. ಈಗವೂನೂ ಮಂತ್ರಿ, ಯಂತ್ಯಂಥಾ ಜನ ಮಂತ್ರಿಗಳಾದರಲ್ಲಾ? ಇನ್ನು ಸೀರ ಚಿಗಪ್ಪನೂ, ನಾನೂ ಮಂತ್ರಿಯಾಗದು ಬಾಕಿಯದೆ ಅಷ್ಟೆ" ಎಂದ ವಾಟಿಸ್ಸೆ ನಕ್ಕ.

"ಥೂ, ಥೂ, ನೀವು ಸಾವುರ ಪಾಲಿಗೆ ಉತ್ತಮ ಕಣೊ. ಶೆಟ್ಟರ ಸರ್ಕಾರದಲ್ಲಿ ಮಂತ್ರಿಗಳಾಗಿರೋರ ನೋಡಿದ್ರೆ ಕೈಮುಗಿಬೇಕು ಅನ್ನದಿಲ್ಲ, ಲಂಚ ತಗಳದಂಗೆ ಕೈ ಮುರಿಬೇಕು ಅನ್ನಸ್ತದೆ ಗೊತ್ತೆ?"

"ಆಗಿನ ಕಾಲ್ದಲ್ಲಿ ಯಂತ್ಯಂಥಾ ಮಂತ್ರಿಗಳಿದ್ರು. ಟಿ. ಮರಿಯಪ್ಪ ಬತ್ತನೆ ಅಂತ ಇಡೀ ಸುತ್ಲಳ್ಳಿ ಬಂದಿತ್ತು. ಬಂದೋನೆ ನಮ್ಮೂರಿಗೊಂದು ಕ್ಯರೆ, ಶಿವುನ್ನಳ್ಳಿಗೊಂದು ಆಣೆಕಟ್ಟೆ ಮಂಜೂರು ಮಾಡಿಬುಟ್ಟೊದ. ಯಂಥಾ ಮಂತ್ರಿಗಳು ಅಂತಿ ಅವುರ್‍ಯಲ್ಲ."

"ಅವುರೇನೊ ಮಂತ್ರಿಗಳಾಗಿದ್ರು ದೊಡಪ್ಪ, ಕಡಿದಾಳು ಮಂಜಪ್ಪನೋರ ಮಂತ್ರಿಯಾಗಿ ಅಂದ್ರೆ 'ಲಾಯರ್‌ಗಿರಿ ಚೆನ್ನಾಗ್ಯದೆ, ಆ ಮಂತ್ರಿ ಪದವಿಲಿ ಯಾವ ಫಾಯದೆನೂ ಇಲ್ಲ' ಅಂದ್ರಂತೆ. ಇದೇಕೇನೇಳ್ತೀ?"


"ನೋಡು ಮತ್ತೆ, ಇನ್ನಂಥಾ ದೊಡ ಮನ್ಸ."

"ಏ, ಅಷ್ಟು ದೂರ ಯಾಕೋಯ್ತಿರೊ. ಇದೇ ನಮ್ಮ ಸಿಂಗಾರಿಗೌಡುನ್ನ ನಿಜಲಿಂಗಪ್ಪನೋರು 'ಮಂತ್ರಿಯಾಗಿ ಗೌಡ್ರೆ' ಅಂದ್ರಂತೆ. ಅದಕಿವುರು 'ಏ ನನಿಗ್ಯಾಕೆ ಸಾರ್ ಮಂತ್ರಿಗಿರಿ? ಶಂಕರೇಗೌಡ್ರೆ ಸಾಕು. ನಾವು ಅವರ ಜೊತೆ ಇರತಿವಿ' ಅಂದ್ರಂತೆ. ಅಂಥ ಒಬ್ಬನೇ ಒಬ್ಬ ಇವತ್ತಿಲ್ಲ."

"ಇಲ್ದಿದ್ರೆ ಹಾಳಾಗೋಗ್ಲಿ ಕಣೊ. ಆದ್ರೆ ಮಂತ್ರಿಯಾಗಲಿಲ್ಲ ಅಂತ ಅಳತ ಕುಂತವುರಲ್ಲಾ, ಅದ ನೋಡಕ್ಕಾಗದಿಲ್ಲ. ಅವುರ ದುಃಖ ನೋಡಿದ್ರೆ ಮಗನೊ, ಹೆಂಡತಿನೊ ಸತ್ತಿರಬೇಕು ಅನ್ನಂಗಾಯ್ತದೆ."

"ಥೂ, ಅಂಗ್ಯಾಕಂತಿಲ್ಲ?"

"ಅವುರೆಡ್ತಿ ಮಕ್ಕಳು ಸಾಯದು ಬೇಡ ಕಣಕ್ಕ ಆದ್ರೆ ಸಾರ್ವಜನಿಕವಾಗಿ ಅಂಗೆ ಅಳದ್ನಾರ ನಿಲ್ಲುಸ್ಲಿ."



ಮಾತಿನ ಮೋಡಿ ▶▶▶

ಈ ಸಲದ 'ಮರೆಯುವ ಮುನ್ನ'ಕ್ಕೆಂದು ಮನಸ್ಸಿನಲ್ಲೇ ಗುರುತು ...ಿಕೊಂಡಿದ್ದ point ಇಂಗಿ ...ೋಗಿದೆ. ಆದ್ದರಿಂದ ಮೇಜಿನ ...ೇಲಿರುವ ಎರಡು ಅಂಶಗಳನ್ನು ...ೊಡುತ್ತಿದ್ದೇನೆ. ಕುವೆಂಪು ಆಗ ...ಪತ್ತೆಂಟು ವರ್ಷದವರು. ಅವರಿಗೆ ...ವೇಕಾನಂದರು ಹೀರೋ. ಅಷ್ಟು ...ಕ್ಕ ವಯಸ್ಸಿನಲ್ಲಿ ವಿವೇಕಾನಂದರ ...ೀವನಚರಿತ್ರೆ ಬರೆದರು. ...ವೇಕಾನಂದರ ಆಕರ್ಷಕ ಆಕಾರ, ...ವಿ ಉಡುಪು, ಧ್ವನಿ, ಪಾಂಡಿತ್ಯ ...ಎಲ್ಲವನ್ನು ಕಲ್ಪಿಸಿಕೊಂಡು



...ಮಂತ್ರಮುಗ್ಧರಾಗಿದ್ದ ಕುವೆಂಪು ಭಾವುಕರಾಗಿ ಬರೆಯುತ್ತಾರೆ. ಖೇತ್ರಿಯ ಮಹಾರಾಜ ವಿವೇಕಾನಂದರ ಅಭಿಮಾನಿ, ಆತ ಅವರಿಗೆ ಗೌರವ ಅರ್ಪಿಸಿ, ...ವರು ಶಿಕಾಗೋದ ಸರ್ವಧರ್ಮ ಸಭೆಯಲ್ಲಿ ಭಾಗವಹಿಂಸಲು ಹೋಗುವಾಗ ...ಳ್ಳೆಯ ಬಟ್ಟೆಗಳನ್ನು ನೀಡಿದರು. ಆದರೆ ಕುವೆಂಪು ಬರೆಯುತ್ತಾರೆ: ...ಖೇತ್ರಿಯ ಮಹಾರಾಜರು ನಿವೇದಿಸಿದ್ದ ವಸನಗಳೆಲ್ಲವೂ ಪ್ರಾಚ್ಯ ವೈಭವ ...ಪ್ರದರ್ಶಕಗಳಾಗಿದ್ದುವೇ ಹೊರತು ಅಮೆರಿಕೆಯ ಚಳಿಯಿಂದ ಸ್ವಾಮೀಜಿಯನ್ನು ...ಕಾಪಾಡಲು ಸಂಪೂರ್ಣವಾಗಿ ಅನರ್ಹವಾಗಿದ್ದುವು!" ಪುರಾಣ ಕಥೆಯನ್ನು ...ಬರೆಯುವ ಕವಿ ತನ್ನ ಕಥಾನಾಯಕನನ್ನು ಇದಕ್ಕಿಂತಲೂ ಹೆಚ್ಚುಸಾಹಸ ...ನಿರ್ಭೀತನನ್ನಾಗಿ ಮಾಡಿ ಹೊರಗಟ್ಟಲು ಆಶಿಸುವುದಿಲ್ಲವೆಂದು ತೋರುತ್ತದೆ!

ಅಮೇರಿ ಸರ್ವಧರ್ಮ ಸಮ್ಮೇಳನದಲ್ಲಿ ಇಂಗ್ಲಿಷ್‌ನಲ್ಲಿ ಪ್ರಚಂಡವಾಗಿ ...ಮಾತಾಡಿದ ವಿವೇಕಾನಂದರು ತಮ್ಮ ಭಾಷಣವನ್ನು ಶುರುಮಾಡಿದ್ದು: "American brothers and sisters....." ಎಂದು. ಅದನ್ನು ಕುವೆಂಪು 'ಅಮೆರಿಕಾ ದೇಶದ ಭ್ರಾತೃ ಭಗಿನಿಯರೆ' ಎಂದು ಸಂಬೋಧಿಸಿ ...ದರೆಂದು ಹೇಳುತ್ತಾರೆ!

'ಅಮೆರಿಕಾದ ಸೋದರ ಸೋದರಿಯರೆ' ಎನ್ನುವುದೂ ನನ್ನ ಕಿವಿಗೆ ಕೃತಕವಾಗಿ ಕಾಣುತ್ತದೆ. 'ಅಮೆರಿಕಾದ ಅಕ್ಕತಂಗಿಯರೆ, ಅಣ್ಣತಮ್ಮಂದಿರೆ' ಅಥವಾ 'ಅಮೆರಿಕಾದ ನನ್ನ ಒಡಹುಟ್ಟಿದವರೇ' ಎನ್ನುವುದು ಹೆಚ್ಚು ಸಹಜ.

ಇದನ್ನು ಕುವೆಂಪು ತಮ್ಮ ಮುಗ್ಧತೆಯಲ್ಲಿ ಬರೆದದ್ದರ ಉದಾಹರಣೆಯಾಗಿ ಮತ್ತು ಭಾಷೆಯ ಜೀವಂತಿಕೆಯ ಹುಡುಕಾಟವಾಗಿ ಮಾತ್ರ ಹೇಳಿದ್ದೇನೆ.

ಹದಿನೆಂಟು ವರ್ಷದ ಹಿಂದೆ ಕಂಡ ನವಿಲು

ಮೊನ್ನೆ ನಾನು ಪತ್ರಿಕೆಯ ಹುಟ್ಟುಹಬ್ಬಕ್ಕಾಗಿ ನಡೆದ ಚಿಕ್ಕ ಕವಿಗೋಷ್ಠಿಯಲ್ಲಿ ಓದಲು ಒಂದು ಪದ್ಯ ಬರೆದೆ. ಹತ್ತು ನಿಮಿಷದಲ್ಲಿ ಬರೆದು ನೇರವಾಗಿ ಹೋಗಿ ಓದಿಯೇಬಿಟ್ಟೆ. ಅದು ಇಲ್ಲಿ ಅಚ್ಚಾಗದಿದ್ದರೆ ಕಳೆದುಹೋಗುವ ಅಪಾಯವಿರುವುದರಿಂದ ಇಲ್ಲಿ ಅಚ್ಚು ಮಾಡುತ್ತಿದ್ದೇನೆ. ಇದು ಪತ್ರಿಕೆಯ ಹುಟ್ಟುಹಬ್ಬ ಕುರಿತದ್ದು.

ಹದಿನೆಂಟು ವರ್ಷದ ಹಿಂದೆ ಕಂಡ ನವಿಲು

ಇಂದು ಕನಸು.
ಕನಸಿನಲ್ಲಿ ಕಂಡ ನವಿಲು
ನರಿಯಾಗುವ ಸಂಭವಕ್ಕೆ
ನಡುಗುವ ಅಗತ್ಯ ಕೂಡ ಇಲ್ಲ.

ಇವತ್ತು ಇಲ್ಲಿ ಕಣ್ಣೆದುರು ಇರುವ ಹಕ್ಕಿಯನ್ನು
ನವಿಲು ಅನ್ನಲು ಅನುಮಾನವಾಗುತ್ತಿದೆ.
ಕನಸಿನ ಅನಿಶ್ಚಿಯತೆ ಅದು.


ಈ ಹಕ್ಕಿ ಗೂಡು ಕಟ್ಟುತ್ತದೆ, ತತ್ತಿ ಇಡುತ್ತದೆ
ನಮ್ಮೆಲ್ಲರಿಗಾಗಿ ಎಂಬಂತೆ
ಹಾಡುತ್ತದೆ.


ಆದರೆ ನವಿಲಿನಂತೆ ಕುಣಿಯುವುದಿಲ್ಲ.
ವ್ಯಾಮೋಹದಿಂದ ಉಬ್ಬಿ
ಉದ್ಧಟವಾಗುವುದಿಲ್ಲ,
ಕನಸಿನಲ್ಲಿ ಕಂಡ ನವಿಲು
ಕೇವಲ ಹಕ್ಕಿಯಾಗಿರುವಾಗ
ಅದಕ್ಕೆ ಹೆಸರಿಡುವ ಎಲ್ಲರಿಗೆ ತವಕ.

ಹೆಸರಿಟ್ಟೊಡನೆ ಮತ್ತೆ
ಕನಸಿನಂತೆ ಎಷ್ಟೋ ವಸಂತ
ಕಾಡುವ,
ಖುಷಿಪಡಿಸುವ,
ಎಚ್ಚರಿಸುವ,
ಅಪಾಯ ಮತ್ತು ರೋಮಾಂಚನ ಇದೆ.

ಇದನ್ನು ಬದುಕು ಅನ್ನಿ,
ಕನಸು ಅನ್ನಿ,
ಭ್ರಮೆ ಅನ್ನಿ,
ಇದು ಶತಮಾನಗಳ ಕಾಲ ಮಾಗುವುದು ಎಂಬ ಆಶೆಯನ್ನು ತನ್ನಿ.

ಜುಲೈ 16,1997





ಎಚ್.ಎಲ್. ಕೇಶವಮೂರ್ತಿ

ಅಣಕ

ಅಡ್ವಾನ್ಸ್ ಬುಕಿಂಗು!

'ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ', `No vacancy' ಅನ್ನುತ್ತಿದ್ದರು ಸದಾನಂದ ಗೌಡರು. ಅವರ ವಿರೋಧಿಗಳು 'ನಮ್ಮ ಬಣದವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಿ' ಎಂದು ತಗಾದೆ ತೆಗೆದಾಗ `No vacancy ಅನ್ನೋಕೆ ಇವನು ಯಾವನು? ಅದ vacant ಮಾಡುವುದು ನಮಗೆ ಗೊತ್ತಿದೆ ಅಂತ ಎಗರಿ ಬಿದ್ದಿತು ವಿರೋಧಿ ಬಣ. 'ಜಾತಿ ಭೂತ' ತಬ್ಬಿಕೊಂಡಿತು. No vacancy ಇದ್ದದ್ದು vacant ಆಯಿತು! ಜಗದೀಶ್ ಶೆಟ್ಟರ್ ಅವರನ್ನು ಅದರಲ್ಲಿ ಪ್ರತಿಷ್ಠಾಪಿಸಿ ಸಂತೃಪ್ತಿಯ ನಗೆ ಬೀರಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ಮತ್ತೆ No vacancy ಸೀಲು ಬಿತ್ತು, ಮಂತ್ರಿಗಳ ಕುರ್ಚಿ vacant ಆಗೇ ಇದ್ದವಲ್ಲಾ, ಅದಕ್ಕೆ ಸಾಟಿ ಕೊಡಲು ಹಲವಾರು ಶಾಸಕರು ವಿಶ್ವಪ್ರಯತ್ನ ಪಡುತ್ತಿದ್ದಾಗಲೇ.... ಮುಖ್ಯಮಂತ್ರಿಗಳು ಆ ಸ್ಥಾನಗಳನ್ನೆಲ್ಲ ಭರ್ತಿ ಮಾಡಿ No vacancy ಮುದ್ರೆ ಜಡಿದರು!

ಇನ್ನೇನು ಎಲ್ಲಾ ಮುಗಿಯಿತಲ್ಲ, ಮಂತ್ರಿಗಿರಿ ಆಸೆ ಮೂಲೆಗೆ ಹಾಕ್ರೀ ಅಂದರೂ ಕೆಲವರು ಒಪ್ಪಲೊಲ್ಲರು. ಮೂಡಿಗೆರೆ ಶಾಸಕರು 'ನನ್ನ ಮಂತ್ರಿ ಮಾಡಲೇಬೇಕು' ಎಂದು ಉಪವಾಸ ಮುಷ್ಕರಾನೇ ಮಾಡುತ್ತಾ ಇದ್ದರಂತೆ. 'ಇದೇನ್ರಿ ಇದು ಹಿಂಗೆ ಮಾಡ್ತಿದೀರಲ್ಲ, ಕಾಣಿಸಲಿಲ್ಲವೇನ್ರಿ No vacancy ಬೋರ್ಡು' ಅಂದದ್ದಕ್ಕೆ ಅವರೇನಂದ್ರಂತೆ ಗೊತ್ತಾ, 'ಕಳಂಕಿತ ಮಂತ್ರಿಗಳು ಜೈಲು ಸೇರಿದಾಗ ಖಾಲಿ ಬೀಳುವ ಸ್ಥಾನಕ್ಕೆ ನನ್ನನ್ನು ಭರ್ತಿ ಮಾಡಲಿ ಅಂತಾವ' ಅಂದರಂತೆ! ಅಂದರೇನಾಯಿತು vacant ಆಗಬಹುದಾದ ಮಂತ್ರಿಸ್ಥಾನಕ್ಕೆ Advance booking ಮಾಡ್ತಾ ಅವ್ರೆ ಅಂದ ಹಾಗಾಯಿತು!

ಮಾನ್ಯ ಶಾಸಕರ ಈ ಆಸೆ ಇದೆಯಲ್ಲ ಇದನ್ನೇ ತಿರುಕನ ಕನಸು ಅನ್ನೋದು. ಹಲವು ಮಂತ್ರಿ ಮಹೋದಯರು ಪರಪ್ಪನ ಅಗ್ರಹಾರಕ್ಕೆ ಭೂಷಣಪ್ರಾಯರೇ ಎಂಬುದು ನಿಜ. ಭವ್ಯಭಾರತದ ಕಾನೂನು, ಅದರ ರಕ್ಷಣೆಗೆಂದೇ ಜನ್ಮ ತಳೆದಿರುವಂತಹ ಕಾನೂನುತಜ್ಞರು ಅವರು ಜೈಲಿಗೆ ಹೋಗಲು ಬಿಡುವುದಿಲ್ಲ, ಒಂದುವೇಳೆ ಪರಿಸ್ಥಿತಿಯ ಒತ್ತಡದಿಂದ ಪರಪ್ಪನ ಅಗ್ರಹಾರದ ದರ್ಶನ ಮಾಡಬೇಕಾಗಿ ಬಂದರೂ ಅಲ್ಲಿ ಬಹಳ ದಿನ ಕೊಳೆಯಲು ಬಿಡುವುದಿಲ್ಲ, ತಾವು ಕಲಿತಿರುವ ವಿದ್ಯೆಯನ್ನೆಲ್ಲ ಬಳಸಿ ಜಾಮೀನು ಕೊಡಿಸುತ್ತಾರೆ. ಅಂತಿಮ ತೀರ್ಪು ಬರುವಷ್ಟರಲ್ಲಿ 'ನೀವ್ನೂ ಮಾಯ, ನಾವ್ನೂ ಮಾಯ, ಎಲ್ಲಾ ಮಾಯ' ಆಗಿರುತ್ತದೆ! ಇಂತಹ ಧೈರ್ಯ ಇರುವ ಹೊತ್ತಿಗೆ ವರಿಷ್ಠರು 'ಅವರು ಆರೋಪಿ ಮಾತ್ರ ಅಪರಾಧಿ ಅಲ್ಲ' ಎನ್ನುತ್ತಿರುವುದು! ಭವ್ಯ ಭಾರತದ ಯಾವುದೇ ಪ್ರಭಾವಿ ವ್ಯಕ್ತಿ 'ಆರೋಪಿ' ಮಾತ್ರ ಆಗಿರಲು ಸಾಧ್ಯ 'ಅಪರಾಧಿ' ಆಗುವುದೇ ಇಲ್ಲ! ಅಂತಹದ್ದರಲ್ಲಿ ಮಂತ್ರಿ ಜೈಲಿಗೆ ಹೋಗಲಿ ಅಂತಾಯ್ತದಾರೆ ಅಂದರೆ....

ಉಪಮುಖ್ಯಮಂತ್ರಿ ಬಂದರು ದಾರಿಬಿಡಿ!

ಅಧಿಕಾರ ಬಂದಾಗ ಅನುಭವಿಸಬೇಕು.

ಅರಬ್ಬೀ ಕುದುರೆ ಸಿಕ್ಕಿದೆ. ಜೀನ ಬಿಗಿದಿದೆ. ಲಗಾಮು ಹಿಡೀಬೇಕು. ಸವಾರಿ ಮಾಡಬೇಕು.

ಇದು ಅಧಿಕಾರಸ್ಥರ ಲಕ್ಷಣ.

ಕೆಲವರು ಹಿಂದೆ ಇದ್ದರು. ಈಗಲೂ ಇರಬಹುದು. ಕುದುರೆ ಕೊಟ್ಟರೂ ಸವಾರಿ ಮಾಡಲು ಆಗದ ಹೇಡಿಗಳು. ಅಧಿಕಾರ ಸಿಕ್ಕಿದರೂ ಅದನ್ನು ಅನುಭವಿಸಲಾರದ ಮುಖೇಡಿಗಳು ಅಂತಹವರಿಗೆ ಸಿಕ್ಕಿದ ಅಧಿಕಾರ ನಾಯಿ ಮೊಲೆಯ ಹಾಲು!

ದೂರಕ್ಕೆ ಹೋಗಬೇಕಿಲ್ಲ, ಕೆ.ಆರ್. ಪೇಟೆ ಕೃಷ್ಣ ಅಧಿಕಾರದಲ್ಲಿದ್ದರು. ಮಂತ್ರಿ ಆಗಿದ್ದರು. ವಿಧಾನಸಭೆಯ ಅಧ್ಯಕ್ಷರಾಗಿದ್ದರು. ಯಾವ ಪುರುಷಾರ್ಥಕ್ಕೆ ಅಂತೀನಿ. ಮರಿ ಅರಮನೆಯಂತಹ ಬಂಗಲೆ, ಆಳುಕಾಳು ಯಾವುದೂ ಇರಲಿಲ್ಲ, ಅವರೇನು ಇವಕ್ಕೆ ಅಂತ ಪ್ರತ್ಯೇಕ ಹಣ ನೀಡಬೇಕಾಗೂ ಇರಲಿಲ್ಲ, ಆದರೂ ಶಾಸಕರ ಭವನದಲ್ಲೇ ಇದ್ದರು! ಅಧಿಕಾರ ಇದ್ದರೂ ಬೀದೀಲಿ ಹೋಗೋ ದಾಸಯ್ಯನ ತರಹವೇ ಇರುತ್ತೀನಿ ಅನ್ನುವ ಜಾಯಮಾನ ಇರಬೇಕು! ಅಧಿಕಾರ ಇದ್ದಾಗಲೂ ಅನುಭವಿಸಬಾರದು ಎಂದು ಅವರ ಹಣೆಯಲ್ಲಿಯೇ ಬರೆದಿರಬಹುದು!


ಅದೇ ನಮ್ಮ ಅಶೋಕ ಅವರನ್ನು ನೋಡಿ. ಪಟ್ಟು ಹಿಡಿದು ಉಪಮುಖ್ಯಮಂತ್ರಿ ಆದರು. ಸಂವಿಧಾನದಲ್ಲಿ ಅಂತಹ ಹುದ್ದೆಯ ಪ್ರಸ್ತಾಪವೇ ಇಲ್ಲವಂತೆ. ಅದರಲ್ಲಿ ಹೇಳಿರುವಂತೆ ಯಾವುದೂ ನಡೆಯುವುದಿಲ್ಲ ಅನ್ನುವುದು ಗುಟ್ಟಿನ ಸಂಗತಿ ಏನೂ ಅಲ್ಲ. ಉಪಮುಖ್ಯಮಂತ್ರಿ ಅಂತ ಆದರು. ಇದು ಮುಖ್ಯ. ಆ ಪದವಿ ಅಂತ ಇದ್ದ ಮೇಲೆ ದೆಹಲಿಗೆ ಹೋಗಿ ಬರುವುದು ಹೆಚ್ಚಿಗೇನೇ ಇರುತ್ತೆ, ಅಲ್ಲಿ ಸಾಮಾನ್ಯ ಮಂತ್ರಿ ಇರುವ ಹಾಗೇನೆ ಉಪಮುಖ್ಯಮಂತ್ರಿ ಆದ ಮೇಲೂ ಇರಬೇಕು ಅಂದರೆ ಅರ್ಥ ಇದೆಯ. ಆ ಉನ್ನತ ಪದವಿಯ ಮಹತ್ವ ಬೇರೆಯವರಿಗೆ ತಿಳಿಯುವುದು ಹೇಗೆ? ಅದಕ್ಕೆ ಅಂತಹ ಯಾವ ಮಹತ್ವವೂ ಇಲ್ಲ ಎನ್ನಬಹುದು. ಆದರೆ ಮಂತ್ರಿ ಸ್ಥಾನಕ್ಕಿಂತ ಉಪಮುಖ್ಯಮಂತ್ರಿ ಸ್ಥಾನ ಉನ್ನತ ಮಟ್ಟದ್ದು ಎಂಬುದನ್ನು ಒಪ್ಪಲೇ ಬೇಕಲ್ಲವಾ. ಸ್ಥಾನಕ್ಕೆ ತಕ್ಕಂತಹ ಮರ್ಯಾದೆ ದೊರಕಲೇ ಬೇಕಲ್ಲವಾ. ಅದಕ್ಕೇ ಅಶೋಕ್ ಅವರು ಮಂತ್ರಿಗಳು ತಂಗುವಂತಹ ಸಾಮಾನ್ಯ ಕೊಠಡಿಯಲ್ಲಿ ಉಪಮುಖ್ಯಮಂತ್ರಿಯಾದ ನಾನು ಇರಲು ಸಾಧ್ಯವೇ ಇಲ್ಲ, ಸುಸಜ್ಜಿತವಾಗಿ ಪ್ರತ್ಯೇಕ 'ಸೂಟ್' ಅನ್ನು ನೀಡಬೇಕೆಂಬ ಒತ್ತಾಯಿಸುತ್ತಿದ್ದಾರಂತೆ! ಅಧಿಕಾರ ಚಲಾಯಿಸುವುದು ಅಂದರೆ ಹೀಗೆ!

ಸನ್ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನನ್ನದೊಂದು ಪುಟ್ಟ ಸಲಹೆ. ತಾವು ಆಗಾಗ್ಗೆ ಪ್ರವಾಸ ಹೋಗುವ ಅನಿವಾರ್ಯತೆ ಬರುತ್ತದೆ. ಕೆಲವು ಮೂರ್ಖರು ಇರಬಹುದು ಅಲ್ಲಿ, ತಮ್ಮ ಗುರುತನ್ನು ಹಿಡಿಯದೇ ಹೋಗಬಹುದು. ಅವರಿಂದ ಸಾಮಾನ್ಯ ಮನುಷ್ಯರಂತೆಯೇ ತಮ್ಮನ್ನು ನಡೆಸಿಕೊಳ್ಳುವ ಅಪರಾಧ ಸಂಭವಿಸಬಹುದು. ಹೀಗೆ ಆಗಬಾರದು. ತಾವು ಉಪಮುಖ್ಯಮಂತ್ರಿಗಳು ಎಂದು ತಕ್ಷಣವೇ ಗುರುತಿಸಬೇಕು. ಅದಕ್ಕೆ ಹೀಗೆ ಮಾಡಿ. ವಿಮಾನ ನಿಲ್ದಾಣಗಳಲ್ಲಿ ತಾವು ಗಮನಿಸಿರಬಹುದು. ಬಹುದು ಏನು ಗಮನಿಸಿಯೇ ಇರುತ್ತೀರಿ. ಅತಿಥಿಗಳನ್ನು ಕರೆದೊಯ್ಯಲು ಬಂದಿರುತ್ತಾರೆ. ಆದರೆ ಅವರ ಪರಿಚಯ ಇರುವುದಿಲ್ಲ, ಆಗ ಅವರೇನು ಮಾಡುತ್ತಾರೆ ಹೇಳಿ. ಅತಿಥಿ ಹೆಸರನ್ನು ಬರೆದ ಬೋರ್ಡ್ ಹಿಡಿದು ನಿಂತುಕೊಂಡಿರುತ್ತಾರೆ ಅಲ್ಲವಾ. ಹಾಗೇನೆ ತಮ್ಮ ಹುದ್ದೆಯ ಹೆಸರನ್ನು ಬರೆದಿರುವ ಬೋರ್ಡ್ ಹಿಡಿಯಲು ಏರ್ಪಾಡು ಮಾಡಿಕೊಳ್ಳುವುದು ಉತ್ತಮ. ಆಗ ಯಾವ ಗೊಂದಲವೂ ಇರುವುದಿಲ್ಲ. ಇದೇನು ಹೊಸದಲ್ಲ, ತಾವು ಹೇಗಿದ್ದರೂ ಪರಂಪರೆಯಲ್ಲಿ ನಂಬಿಕೆ ಇರುವವರು. ಅದರಲ್ಲೇ ಇದು ಇದೆ. ಹಿಂದೆ ಅಸ್ಪೃಶ್ಯರು ದಾರಿಯಲ್ಲಿ ಹೋಗುವಾಗ ಗಂಟೆ ಬಾರಿಸಿಕೊಂಡೋ ಇಲ್ಲ 'ಸಂಭೋಳಿ' ಎಂದು ಕೂಗಿಕೊಂಡೋ ಹೋಗುತ್ತಿದ್ದರು. ಮೇಲ್ಜಾತಿಯ ಜನರಿಗೆ ತಕ್ಷಣ ಇವರ ಇರುವಿಕೆಯ ಅರಿವಾಗಿ ಮೈಲಿಗೆ ಆಗುವ ಅಪಾಯದಿಂದ ಪಾರಾಗುತ್ತಿದ್ದರು. ಈಗ ಅದೇ ದಲಿತರು ಅಧಿಕಾರ ಗದ್ದುಗೆ ಏರಲು 'ದಲಿತರು ಬಂದರು ದಾರಿ ಬಿಡಿ' ಎಂದು ಹಾಡುತ್ತಿದ್ದಾರೆ. ತಾವೂ ಅದೇರೀತಿ 'ಉಪಮುಖ್ಯಮಂತ್ರಿಗಳು ಬಂದರು ದಾರಿ ಬಿಡಿ' ಎನ್ನುವ ಸೂಚನಾಫಲಕಕ್ಕೆ ಅನುವು ಮಾಡಿಕೊಂಡರೆ ಅಥವಾ ಇಂತಹ ಹಾಡನ್ನು ಹಾಡಲು ವಂದಿಮಾಗದರನ್ನು ನೇಮಿಸಿಕೊಂಡರೆ ಇನ್ನೂ ಉತ್ತಮ ಎಂದು ಭಾವಿಸಿದ್ದೇನೆ!

ಕಾಂಗ್ರೆಸ್ ಏಜೆಂಟ್ ಸಲಹೆ!


ಮಾನ್ಯ ರಾಜ್ಯಪಾಲರು 'ಕಳಂಕಿತರಿಗೆ ಸಚಿವ ಸ್ಥಾನ ನೀಡಬೇಡಿ' ಎಂಬ ಸೂಚನೆಯನ್ನು ಮುಖ್ಯಮಂತ್ರಿಯವ[...] ನೀಡಿದ್ದರಂತೆ. ಹೊಸ ಮುಖ್ಯಮಂತ್ರಿ ಜಗದೀಶ್ ಶೆಟ್ಟ[...] ಸಹ ಅವರ ಮಾತಿಗೆ ಮನ್ನಣೆ ಕೊಡಬೇಕು ಎಂ[...] ಇದ್ದರಂತೆ. ಅಂತಹವರಿಗಾಗಿ ತಡಕಾಡಿದರಂತೆ. ಆಗ ಅವ[...] ಒಂದು ಕತೆ ಜ್ಞಾಪಕಕ್ಕೆ ಬಂತಂತೆ. ಅದು ಏನು ಅಂ[...] ಒಂದು ರಾಜ್ಯ ನಮ್ಮಲ್ಲಿ ಇದ್ದಂಗೇನೆ ಭ್ರಷ್ಟಾಚಾರ ಮಿತಿಮೀ[...] ಹೋಗಿತ್ತಂತೆ. ಅಧಿಕಾರಿಗಳು ಪ್ರಜೆಗಳ ಜೀ[...] ಹಿಂಡುತ್ತಿದ್ದರಂತೆ. ಅದು ಅತಿ ಅನ್ನಿಸಿದಾಗ ಅವರೆಲ್ಲ ರಾಜ[...] ಬಳಿಗೆ ಬಂದರಂತೆ. 'ಹಿಂಗಿಂಗೆ ನಿಮ್ಮ ಅಧಿಕಾರಿಗ[...] ಮಾಡ್ತಾ ಅವ್ರೆ. ಅವರಿಂದ ನಮ್ಮ ಪಾರು ಮಾಡಿ' ಅ[...] ಬೇಡಿಕೊಂಡರಂತೆ. ರಾಜನಿಗೂ ಪ್ರಜೆಗಳ ಸಂಕಟ ನೋ[...] ಅಯ್ಯೋ ಅನ್ನಿಸಿತಂತೆ. 'ಭ್ರಷ್ಟಾಚಾರಿಗಳಿಗೆ ಮರಣದಂಡ[...] ಎಂಬ ಶಾಸನ ಮಾಡಿದನಂತೆ. ಆದರೆ ಇದರಲ್ಲಿ ಒಂ[...] ತೊಡಕಿತ್ತಂತೆ. ತನ್ನ ಕೈಕೆಳಗಿನ ಅಧಿಕಾರಿಗಳೆಲ್ಲ ತನ್ನಂತೆಯ[...] ಸಚ್ಚಾರಿತ್ರರು ಎಂದೇ ನಂಬಿದ್ದ ರಾಜ. ಅವರಲ್ಲಿ ಭ್ರಷ್ಟರು[...] ಹುಡುಕುವುದು ಹೇಗೆ ಎಂದು ರಾಜನಿಗೆ ಯೋಚ[...] ಆಯಿತು. ಹೀಗೆ ಚಿಂತಾಕ್ರಾಂತನಾಗಿರುವಾಗ ಅವನ[...] ಅಲ್ಲಾವುದ್ದೀನನ ಅದ್ಭುತ ದೀಪ ನೆನಪಿಗೆ ಬಂತು. ಅದ[...] ಹೊರಕ್ಕೆ ತೆಗೆದ. ಧೂಳು ಒರೆಸಿದ. ಕಲ್ಲಿನ ಮೇಲೆ ಉಜ್ಜಿ[...] ಅದರಿಂದ ಜಿನ್ನ ಪ್ರತ್ಯಕ್ಷ ಆಯಿತು. ಅದರ ಮುಂದೆ ತ[...] ಅಳಲನ್ನು ತೋಡಿಕೊಂಡ. ಅದು ಒಂದು ಕನ್ನಡಕ ಕೊಟ್ಟಿ[...] 'ಇದನ್ನು ಹಾಕಿಕೊಂಡು ನೋಡು. ಭ್ರಷ್ಟಾಚಾರಿಗಳ ತಲೆಯ[...] ಕೊಂಬು ಕಾಣಿಸುತ್ತೆ ಎಂದು ಹೇಳಿತು ಜಿನ್ನ. ರಾಜನಿ[...] ಬಹಳ ಸಂತೋಷ ಆಯಿತು. ರಾಜ ಕನ್ನಡಕ ಧರಿಸಿದಾ[...] ಮಂತ್ರಿ ಬಂದ. ಅವನು ಪ್ರಾಮಾಣಿಕ, ಜನರಹಿತಕಾ[...] ಸರ್ವಸ್ವವನ್ನು ತ್ಯಾಗ ಮಾಡಿದ ಎಂದೇ ರಾಜ ನಂಬಿ[...] ಆದರೇನು ಅವನ ತಲೆಯಲ್ಲಿ ಕೊಂಬು ಕಾಣಿಸಿತು! ಅವನ[...] ಕೂಡಲೇ ಗಲ್ಲಿಗೇರಿಸುವಂತೆ ಸೇನಾಧಿಕಾರಿಗೆ ಅಪ್ಪಣೆ ಮಾಡಿ[...] ಆದರೇನಾಗಿತ್ತು ಅವನು ದಕ್ಷ, ಜನರ ಯೋಗಕ್ಷೇಮಕ್ಕಾಗಿಯೆ[...] ಜನ್ಮತಾಳಿದ ಎಂದು ರಾಜ ನಂಬಿದ್ದ. ಅವನ ತಲೆಯಲ[...] ಕೊಂಬು ಇತ್ತು! ಇದರಿಂದಾಗಿ ಮಾನಸಿಕವಾ[...] ಆಯಾಸಗೊಂಡ ರಾಜ ಹಾಗೇ ಸಿಂಹಾಸನದಲ್ಲಿ ಒರಗಿದನಂ[...] ಪಕ್ಕದಲ್ಲಿದ್ದ ಕನ್ನಡಿ ಕಣ್ಣಿಗೆ ಬಿತ್ತಂತೆ. ಆದರಲ್ಲಿ ತನ್ನ ಪ್ರತಿಬಿಂ[...] ನೋಡಿದ ರಾಜ ದಿಗ್ಭ್ರಾಂತನಾದನಂತೆ. ಯಾಕೆಂದರೆ ಅವ[...] ತಲೆಯಲ್ಲೂ ಕೊಂಬು ಇತ್ತಂತೆ! ತಕ್ಷಣವೇ ರಾಜಾ[...] ಹೊರಬಿತ್ತಂತೆ- 'ಈ ಕನ್ನಡಕ ಧರಿಸಿ ನೋಡಿದಾಗ ಯಾರಿ[...] ಕೊಂಬಿರುವುದಿಲ್ಲವೊ ಅವರೆಲ್ಲರೂ ಭ್ರಷ್ಟರು!' ಜಗದೀ[...] ಶೆಟ್ಟರಿಗೂ ರಾಜನಿಗೆ ಆದ ಹಾಗೆಯೇ ಅಯಿತಂ[...] ಹೀಗಿರುವಾಗ ರಾಜ್ಯಪಾಲರು ಇಂತಹ ಸಲ[...] ನೀಡಬಾರದಿತ್ತು, ಅದರಬದಲು ನೀವು ಮಂತ್ರಿಮಂಡ[...] ರಚಿಸಬಾರದು ಎನ್ನಬಹುದಿತ್ತು! ಇಂತಹ ಸಲಹೆ ನೀಡಿ[...] ರಾಜ್ಯಪಾಲರನ್ನು 'ಕಾಂಗ್ರೆಸ್ಸಿನ ನಿಷ್ಠಾವಂತ ಕಾರ್ಯಕರ್ತ[...] ಎಂದು ಹೇಳುತ್ತಿರುವುದರಲ್ಲಿ ಯಾವುದೇ ಅತಿಶಯ ಇ[...] ಅನ್ನಿಸಿತಂತೆ ಶೆಟ್ಟರಿಗೆ!





ಸುದೀಪ್ ಬಗ್ಗೆ ಹೆಮ್ಮೆ ಆಗುತ್ತಿದೆ

ಎಸ್.ಎಸ್. ರಾಜಮೌಳಿ ನಿರ್ದೇಶನದ 'ಈಗ' (ನೊಣ) ಚಿತ್ರವು ಸುದೀಪ್ ನಟನೆ ಮತ್ತು ಅದ್ಭುತ ಗ್ರಾಫಿಕ್ಸ್‌ನೊಂದಿಗೆ ಕಲಾತ್ಮಕವಾಗಿ ಮೂಡಿಬಂದಿರುವುದು ಮೆಚ್ಚುಗೆಯ ಸಂಗತಿ. ರಾಜಮೌಳಿ ಮೂಲತಃ ಕನ್ನಡಿಗ. ಅವರ ಹುಟ್ಟೂರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿರುವ ಅಮರೇಶ್ವರ ಕ್ಯಾಂಪ್. ರಾಮಮೌಳಿ ಅವರು ಎಂ.ಎಂ.ಕೀರವಾಣಿ ಅವರ ತಮ್ಮನ ಮಗ.



ನಮ್ಮ ಕರ್ನಾಟಕದಲ್ಲೇ ಹುಟ್ಟಿ, ಬೆಳೆದು, ಅರ್ಹತೆ, ಕೌಶಲ್ಯ, ಸಾಮರ್ಥ್ಯಗಳನ್ನು ಹೊಂದಿದ್ದರೂ ನಮ್ಮ ಕನ್ನಡ ಚಿತ್ರರಂಗದಲ್ಲಿ ರಾಜಮೌಳಿ ಮತ್ತು ಕೀರವಾಣಿ ತರಹದವರನ್ನು ಗುರುತಿಸಿ ಅವರ ಪ್ರತಿಭೆಯನ್ನು ಪ್ರೋತ್ಸಾಹಿಸುವಂತಹ ಪರಿಸ್ಥಿತಿ ನಮ್ಮಲ್ಲಿ ಇಲ್ಲದಿರುವುದು ಒಂದು ದುರಂತ. ನಮ್ಮ ಕನ್ನಡ ಚಿತ್ರರಂಗ ಇವತ್ತಿಗೂ ಆಮೆ ಗತಿಯಲ್ಲಿ ಸಾಗುತ್ತಿದೆ. ಇದು ಹೀಗೇ ಮುಂದುವರೆದರೆ ತಮಿಳು, ತೆಲುಗು, ಮಲೆಯಾಳಂ ಚಿತ್ರರಂಗಗಳು ಬೆಳೆದ ಕನ್ನಡ ಚಿತ್ರರಂಗ ಎಲ್ಲಿ ಮೂಲೆ ಗುಂಪಾಗುತ್ತದೆಯೋ ಎಂದು ಭಯವಾಗುತ್ತದೆ.

ಅದೇನೇ ಇರಲಿ, ನಮ್ಮ ಸುದೀಪ್ ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ಈಗ ವಿದೇಶಗಳಲ್ಲೂ 'ಕನ್ನಡದ ನಟ ಸುದೀಪ್' ಎಂದು ಹೆಸರು ಗಳಿಸುತ್ತಿರುವುದು ಎಲ್ಲ ಕನ್ನಡಿಗರಿಗೆ ಹೆಮ್ಮೆಯ ವಿಷಯ.

- ದಿ.ಎಲ್. ಚಂದ್ರಿಕಾ, ಚನ್ನಗಿರಿ



ಜುಲೈ 25, 2012ರ ಸಂಚಿಕೆಯಲ್ಲಿ ಗೌರಿ ಲಂಕೇಶರ[...] ಅಂಕಣಕ್ಕೆ ಕೊಟ್ಟಿದ್ದ 'ಸಿಡುಕುಮೋರೆ, ನಗುಮುಖ[...] ಮುಗುಳ್ನಗೆ ಹಿಂದೆ ಆರೆಸ್ಸೆಸ್' ಎಂಬ ಶೀರ್ಷಿಕೆ ತುಂಬಾ[...] ಇನ್ನೊವೇಟೀವ್ ಆಗಿತ್ತು, ಆರೆಸ್ಸೆಸ್ ಅಂದರೆ ಪಿತೂರಿ[...] ಪಾಪಗಳ ವಿಕೃತ ಪಿಂಡವಲ್ಲವೇ?

- ರವಿಕುಮಾರ್, ಹಾಸನ


ರಾಜ್ಯದ ಹೊಸ ಮುಖ್ಯಮಂತ್ರಿ ಆಗುವ ಮೂಲಕ[...] ಜಗದೀಶ್ ಶೆಟ್ಟರ್ ಅವರು ಈಗ ಹುಲಿಯ ಪಂಜರವನ್ನು[...] ಸೇರಿಕೊಂಡಿದ್ದಾರೆ.

- ಓದುಗ, ಎಸ್‌ಎಸ್‌ಎಸ್ ಮೂಲಕ

ಮುಖ್ಯಮಂತ್ರಿ ಸ್ಥಾನಕ್ಕೆ ಶೆಟ್ಟರ್ ಅವರನ್ನು ಬೆಂಬಲಿಸುವ[...] ಜ್ಞಾನ ಯಡ್ಡಿಗೆ ಈ ಮೊದಲು ಯಾಕೆ ಬಂದಿರಲಿಲ್ಲ?

- ಓದುಗ, ಎಸ್‌ಎಂಎಸ್ ಮೂಲಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.




ಚೊಚ್ಚಲ ನಿರ್ದೇಶಕನ ಆತ್ಮವಿಶ್ವಾಸ

ಒಂದು ಸಿಂಪಲ್ ಲವ್ ಸ್ಟೋರಿ' ಎಂಬ ಹೊಸ ಚಿತ್ರ ಮೊನ್ನೆ ಸೆಟ್ಟೇರಿತು. ನಗರದ ರೇಣುಕಾಂಬ ಥಿಯೇಟರ್‌ನಲ್ಲಿ ಇದರ ಮುಹೂರ್ತವಾಯಿತು. ಈ ಚಿತ್ರದ ನಿರ್ದೇಶಕನ ಹೆಸರು ಸುನಿಲ್‌ಕುಮಾರ್ ಯಾನೆ ಸುನಿ. ಈತನ ಚೊಚ್ಚಲ ನಿರ್ದೇಶನದ ಚಿತ್ರ. ಈತ ಈ ಹಿಂದೆ ದಿನೇಶ್‌ಬಾಬು ಜೊತೆ ಕೆಲಸ ಮಾಡಿ ಅಪಾರವಾದ ಅನುಭವವನ್ನು ಹೊಂದಿದವರು.

ಮುಹೂರ್ತದ ದಿನವೇ ಈ ಚಿತ್ರಕ್ಕೆ ಸಂಬಂಧಪಟ್ಟ ಒಂದು ಸ್ಪೈಸ್ ರೀಲನ್ನು ನಿರ್ದೇಶಕ ಸುನಿಲ್‌ಕುಮಾರ್ ಪತ್ರಕರ್ತರಿಗೆ ತೋರಿಸಿದರು. ಬಹುಶಃ ಚಿತ್ರರಂಗದ ಇತಿಹಾಸದಲ್ಲಿ ಮುಹೂರ್ತದ ದಿನವೇ ಚಿತ್ರಕ್ಕೆ ಸಂಬಂಧಪಟ್ಟ ರೀಲನ್ನು ತೋರಿಸಿದ್ದು ಇದೇ ಮೊದಲ ಬಾರಿ. ಅದಾದನಂತರ ಚಿತ್ರದ ಮುಹೂರ್ತ ನೆರವೇರಿತು. ಅದರ ಬೆನ್ನಲ್ಲೇ ಪತ್ರಿಕಾಗೋಷ್ಠಿಯೂ ಮುಗಿದುಹೋಯಿತು.


ನಿರ್ದೇಶಕ ಸುನಿ ತುಂಬಾ ಸೆನ್ಸಿಬಲ್ ವ್ಯಕ್ತಿ ತರಹ ಕಾಣಿಸುತ್ತಾರೆ. ಕೆಲವೇ ಕೆಲವು ಮಾತುಗಳಲ್ಲಿ ಚಿತ್ರದ ಕಥೆ ಮತ್ತು ಅದರ ಒಟ್ಟಾರೆ ಉದ್ದೇಶವನ್ನು ಹೇಳಿದರು. ಮಳೆಗಾಲ, ಚಳಿಗಾಲ ಬೇಸಿಗೆಕಾಲದಲ್ಲಿ ಈ ಲವ್ ಸ್ಟೋರಿ ಹೇಗೆ ಸಾಗುತ್ತದೆ, ಪ್ರಕೃತಿ ಮತ್ತು ಪ್ರೀತಿಯನ್ನು ಹೇಗೆ ಚಿತ್ರೀಕರಿಸಿದ್ದೇನೆ ಎಂದು ಸುನಿ ವಿವರಿಸಿದರು. ಬಹುಶಃ ಚೊಚ್ಚಲ ನಿರ್ದೇಶಕನೊಬ್ಬ ಇಷ್ಟು ಆತ್ಮವಿಶ್ವಾಸದಿಂದ ಇತ್ತೀಚಿನ ದಿನಗಳಲ್ಲಿ ಮಾತನಾಡಿದ್ದನ್ನು ಯಾರೂ ನೋಡಿಲ್ಲ. ಬಹುತೇಕ ಹೊಸ ಕಲಾವಿದರೇ ನಟಿಸುತ್ತಿರುವ ಈ ಚಿತ್ರದಲ್ಲಿ ಶ್ವೇತ ಶ್ರೀವತ್ಸ ನಾಯಕಿ. ಪತ್ರಿಕಾಗೋಷ್ಠಿ ಮುಗಿದಕೂಡಲೇ ಇಡೀ ಚಿತ್ರತಂಡ ಮಡಿಕೇರಿಯತ್ತ ಪ್ರಯಾಣ ಬೆಳೆಸಿದೆ. ಚಿತ್ರದ ಮುಹೂರ್ತದ ಸಂದರ್ಭದಲ್ಲಿ ತೋರಿಸಿದ ಕ್ರಿಯಾಶೀಲತೆಯನ್ನು ಚಿತ್ರದಲ್ಲೂ ಈ ಯುವ ನಿರ್ದೇಶಕನಿಂದ ನಿರೀಕ್ಷಿಬಂದಲ್ಲಿ ಚಿತ್ರ ಗೆಲ್ಲಬಹುದು. ನೋಡೋಣ ಏನಾಗುತ್ತದೆ ಎಂದು.

'ದಂಡುಪಾಳ್ಯ' ನಿರ್ದೇಶಕನ ಆತ್ಮರತಿ



ಇತ್ತೀಚಿನ ದಿನಗಳಲ್ಲಿ ಯಾರೂ ಕಂಡರಿಯದ ಅಪರೂಪದ ಯಶಸ್ಸು 'ದಂಡುಪಾಳ್ಯ' ಚಿತ್ರಕ್ಕೆ ದೊರಕಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅದೇ ಹಾಗೆ ನಿರ್ದೇಶಕ ಶ್ರೀನಿವಾಸ್‌ರಾಜುರವರ ನೇತೃತ್ವದಲ್ಲಿ ಈ ಚಿತ್ರದ ತಂಡ ದಂಡುಪಾಳ್ಯ ಗ್ರಾಮಕ್ಕೆ ಭೇಟಿ ನೀಡಿತಂತೆ. ಆಗ ಅಲ್ಲಿಯ ನಿವಾಸ್ಥರು ಇವರನ್ನು ಭೇಟಿಯಾಗಿ "ಕೆಲವೇ ಕೆಲವು ಜನರ ಕುಕೃತ್ಯಕ್ಕಾಗಿ ಇಡೀ ಊರಿನ ಹೆಸರನ್ನು ಹರಾಜು ಹಾಕಬೇಡಿ" ಎಂದು ಮನವಿ ಮಾಡಿದರಂತೆ. ಅವರ ಮನವಿಗೆ ಸ್ಪಂದಿಸಿದ ನಿರ್ದೇಶಕ ಶ್ರೀನಿವಾಸ್‌ರಾಜು ಈ ಚಿತ್ರದ ಹೆಸರನ್ನು ಬದಲಾಯಿಸಲು ನಿರ್ಧರಿಸಿ ದ್ದಾರೆ. ಅಂದಹಾಗೆ 'ದಂಡುಪಾಳ್ಯ' ಹೆಸರಿನ ಬದಲು ಬೇರೆ ಯಾವುದೇ ಹೆಸರನ್ನು ಇವರು ಇಡುವುದಿಲ್ಲವಂತೆ. ಅದರ ಬದಲಿಗೆ 'ಶ್ರೀನಿವಾಸ್‌ರಾಜು ನಿರ್ದೇಶನದ ಚಿತ್ರ' ಎಂದಷ್ಟೇ ಜಾಹೀರಾತುಗಳಲ್ಲಿ ಹಾಕುತ್ತಾರಂತೆ. ಇದು ಒಂದು ರೀತಿಯಲ್ಲಿ ಖಂಡಿತವಾಗಿಯೂ ನಿರ್ದೇಶಕನ ಆತ್ಮರತಿಯೆಂದು ಹೇಳಬೇಕು. ಚಿತ್ರ ಯಶಸ್ಸು ಕಂಡ ನಂತರ ಅದು ತನ್ನ ಹೆಸರಿನ ಬಲದಲ್ಲಿಯೇ ಓಡುತ್ತಿದೆ ಎಂದು ತೋರಿಸುವುದು ಆತನ ಉದ್ದೇಶವಿರಬಹುದೋ ಏನೋ? ಎಲ್ಲಕ್ಕಿಂತ ಮುಖ್ಯವಾಗಿ ಚಿತ್ರಕ್ಕೆ ಹೆಸರಿಡುವುದಿಲ್ಲ ಎಂಬುದು ಕೂಡ ಒಂದು ಗಿಮಿಕ್ ಆಗಿಬಿಟ್ಟಿದೆ. ಚಿತ್ರತಂಡಕ್ಕೆ ನಿಜವಾಗಿಯೂ ಆ ಊರಿನ ಬಗ್ಗೆ, ಅಲ್ಲಿಯ ಜನರ ಬಗ್ಗೆ ಅಭಿಮಾನವಿದ್ದಲ್ಲಿ ಚಿತ್ರ ಆರಂಭಿಸುವಾಗಲೇ ಆ ಗ್ರಾಮಕ್ಕೆ ಭೇಟಿ ನೀಡಬೇಕಿತ್ತು ಅಥವಾ ಬಿಡುಗಡೆಯ ಮೊದಲು ಕೋರ್ಟ್‌ನಲ್ಲಿ ಕೇಸ್ ದಾಖಲಾದಾಗಲಾದರೂ ಹೆಸರನ್ನು ಬದಲಾಯಿಸಬಹುದಿತ್ತು. ಈಗ ಇಡೀ ಕರ್ನಾಟಕಕ್ಕೆ ಚಿತ್ರದ ಹೆಸರು, ಚಿತ್ರದ ಕಥೆ-ವ್ಯಥೆ ಇವೆಲ್ಲ ಗೊತ್ತಾದನಂತರ ಹೆಸರು ಬದಲಾಯಿಸುವುದರಿಂದ ಏನು ತಾನೇ ಸಾಧಿಸಿದಂತಾಗುತ್ತದೆ?

'ಅ'ಕಾರ ಪ್ರೇಮಿ ಶ್ರೀನಿವಾಸ್!




ಕಳೆದ ವಾರ ಸಂಗೀತ ನಿರ್ದೇಶಕ ಕಲ್ಯಾಣ್ ಸಿನಿಮಾ ನಿರ್ದೇಶಕನಾಗುವ ಬಗ್ಗೆ ಬರೆದಿದ್ದೆವು. ಅವರಿಗೆ ಇಂತಹ ಬಡ್ತಿ ನೀಡುತ್ತಿರುವವರು ಬೇರೆ ಯಾರೂ ಅಲ್ಲ, ನಿರ್ಮಾಪಕ ಬಿ.ಕೆ. ಶ್ರೀನಿವಾಸ್. ಈಗಾಗಲೆ 'ಅಲೆಮಾರಿ' ಮತ್ತು 'ಭಾಗೀರಥಿ' ಎಂಬ ಚಿತ್ರಗಳನ್ನು ನಿರ್ಮಿಸಿರುವ ಶ್ರೀನಿವಾಸ್ ಸಂಗೀತ ನಿರ್ದೇಶಕರೊಬ್ಬರನ್ನು ಸಿನಿಮಾ ನಿರ್ದೇಶಕನಾಗಿ ಮಾಡುವ ಮುಖಾಂತರ ತಮ್ಮ 'ಶಕ್ತಿ'ಯನ್ನು ಪ್ರದರ್ಶಿಸಿದ್ದಾರೆ. ಅಂದಹಾಗೆ, ಈ ಚಿತ್ರದ ಹೆಸರು 'ಅಂಬೆಗಾಲು' ಎಂಬುದು ತಮಗೆಲ್ಲ ಗೊತ್ತಿರುವ ವಿಷಯ.

ಈ ಶ್ರೀನಿವಾಸ್‌ಗೆ ಅದ್ಯಾಕೋ 'ಅ'ಕಾರದಿಂದ ಆರಂಭವಾಗುವ ಹೆಸರಿನ ಬಗ್ಗೆ ಅಪಾರ ಮೂಢನಂಬಿಕೆ. ಆದ್ದರಿಂದಲೇ ಅವರು ತಮ್ಮ ಚಿತ್ರಗಳಿಗೆ 'ಅ'ಕಾರ ದಿಂದ ಆರಂಭವಾಗುವ ಹೆಸರುಗಳನ್ನೇ ಇಟ್ಟಿದ್ದಾರೆ. 'ಅಲೆಮಾರಿ' ನಂತರ ಅವರೀಗ 'ಅಂಬೆಗಾಲು' ಇಡುತ್ತಿದ್ದಾರಲ್ಲದೆ ಅವರ ಇನ್ನೂ ಎರಡು ಹೊಸ ಚಿತ್ರಗಳಿಗೆ 'ಅಂಗುಲಿಮಾಲಾ' ಮತ್ತು 'ಅಡ್ಡೆ' ಎಂದು ಹೆಸರಿಟ್ಟಿದ್ದಾರೆ.

ಶ್ರೀನಿವಾಸ್ ಅವರ ಫೇವರಿಟ್ ನಿರ್ದೇಶಕ ಬರಗೂರು ರಾಮಚಂದ್ರಪ್ಪ 'ಅಂಗುಲಿಮಾಲಾ' ಸಿನಿಮಾವನ್ನು ನಿರ್ದೇಶಿಸಲಿದ್ದಾರೆ. ಇದರ ಜೊತೆ-ಜೊತೆಗೆ ಬಹಳ ದಿನಗಳ ಹಿಂದೆ ಘೋಷಿಸಿದ್ದ 'ಅಡ್ಡೆ' ಎಂಬ ಚಿತ್ರವನ್ನೂ ಶ್ರೀನಿವಾಸ್ ಸದ್ಯದಲ್ಲೇ ಆರಂಭಿಸಲಿದ್ದಾರಂತೆ. ಅಂದರೆ ಒಟ್ಟೊಟ್ಟಿಗೆ ಮೂರು-ಮೂರು ಚಿತ್ರಗಳನ್ನು ಆರಂಭಿಸುವ ಮುಖಾಂತರ ಶ್ರೀನಿವಾಸ್ ಗಾಂಧಿನಗರದಲ್ಲಿ ಅಚ್ಚರಿ ಮೂಡಿಸಿದ್ದಾರೆ.

ಐಂದ್ರಿತಾ ಡ್ರಾಪ್ ಔಟ್!




ಐಂದ್ರಿತಾ ರೈ ಮತ್ತು ದುನಿಯಾ ವಿಜಿ ನಡುವೆ ಮತ್ತೊಂದು ಸುತ್ತಿನ ಜಗಳ ಆರಂಭವಾಗಿದೆ ಎಂಬ ಸುದ್ದಿ ಗಾಂಧಿನಗರದಿಂದ ತೇಲಿಬಂದಿದೆ.


ಇದಕ್ಕೆ ಕಾರಣ ಐಂದ್ರಿತಾ ರೈಯ ಕೆಲವು ವರ್ತನೆ. 'ರಜನಿಕಾಂತ' ಚಿತ್ರಕ್ಕಾಗಿ ಇಡೀ ಚಿತ್ರತಂಡ ಸಿಂಗಪೂರ್‌ಗೆ ಜುಲೈ 2ರಂದು ಹೋಗಬೇಕಿತ್ತು, ಚಿತ್ರ ತಂಡದ ಎಲ್ಲರೂ ಅಡ್ವಾನ್ಸ್ ಆಗಿ ತಮ್ಮ ಪಾಸ್‌ಪೋರ್ಟ್‌ಗಳನ್ನು ಮ್ಯಾನೇಜರ್‌ಗೆ ತಲುಪಿಸಿದರೆ ಐಂದ್ರಿತಾ ರೈ ಮಾತ್ರ ಕೊನೆ ಕ್ಷಣದಲ್ಲಿ ನೀಡಿದಳಂತೆ. ಆದರೆ ಆ ಪಾಸ್‌ಪೋರ್ಟನ್ನು ತೆರೆದು ನೋಡಿದಾಗ ಅದು ತುಂಬಿಹೋಗಿತ್ತಂತೆ. ಅಲ್ಲಿ ಬರೆಯಲು ಸ್ವಲ್ಪ ಕೂಡ ಜಾಗವೇ ಇರಲಿಲ್ಲವಂತೆ. ಹೀಗಾಗಿ ಆಕೆ ಹೊಸ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸಬೇಕಾಯಿತು. ಆ ಹೊಸ ಪಾಸ್‌ಪೋರ್ಟ್ ಸಿಗಬೇಕಾದರೆ ಕನಿಷ್ಟವೆಂದರೂ ಒಂದು ವಾರ ಕಾಯಲೇಬೇಕಾಯಿತು.

ಇದರ ಪರಿಣಾಮ ಏನಾಯಿತೆಂದರೆ 2ನೇ ತಾರೀಖಿನಂದು ಚಿತ್ರತಂಡ ಸಿಂಗಪೂರ್‌ಗೆ ಹೋಗಲು ಆಗಲಿಲ್ಲ, ನಾಯಕ ನಟ ದುನಿಯಾ ವಿಜಿ ಅವರ ಡೇಟ್ಸ್‌ಗಳೆಲ್ಲವೂ ಇದರಿಂದಾಗಿ ಅಸ್ತವ್ಯಸ್ತವಾಯಿತು. 2ನೇ ತಾರೀಖು ಶೂಟಿಂಗ್‌ಗಾಗಿ ಎಲ್ಲ ವ್ಯವಸ್ಥೆ ಮಾಡಿದ ನಿರ್ಮಾಪಕ ಕೂಡ ಸಾಕಷ್ಟು ಹಣವನ್ನು ನಷ್ಟ ಮಾಡಿಕೊಳ್ಳಬೇಕಾಯಿತು. ತನ್ನಿಂದಾದ ಪ್ರಮಾದಕ್ಕಾಗಿ ನಾಯಕಿ ಐಂದ್ರಿತಾ ರೈ ಕ್ಷಮೆ ಕೇಳಿದರೂ ಆಕೆಯ ವರ್ತನೆ ಈ ಚಿತ್ರತಂಡಕ್ಕೆ ಬೇಸರ ತಂದಿದ್ದು ಮಾತ್ರ ನಿಜ. "ಇನ್ನು ಮುಂದೆ ನಾನು ಐಂದ್ರಿತಾ ರೈ ಜೊತೆ ಖಂಡಿತವಾಗಿಯೂ ನಟಿಸುವುದಿಲ್ಲ" ಎಂದು ನಾಯಕ ದುನಿಯಾ ವಿಜಿ ತನ್ನ ಆಪ್ತರಲ್ಲಿ ಶಪಥ ಮಾಡಿಕೊಂಡಿದ್ದಾರೆಂಬ ಸುದ್ದಿಯೂ ಕೇಳಿಬಂದಿದೆ.

ಈ ಹಿಂದೆ ಶಶಾಂಕ್ ನಿರ್ದೇಶನದ 'ಜರಾಸಂಧ' ಚಿತ್ರದಲ್ಲೂ ನಾಯಕಿಯಾಗಿ ನಟಿಸಬೇಕಾಗಿದ್ದ ಐಂದ್ರಿತಾ ಕೊನೆಯ ಕ್ಷಣದಲ್ಲಿ ಡ್ರಾಪ್ ಔಟ್ ಆಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳ ಬಹುದು. ಈಗ ಈ ಪಾಸ್‌ಪೋರ್ಟ್ ಅವಾಂತರದಿಂದಾಗಿ ಆಕೆ ದುನಿಯಾ ವಿಜಿ ಪಾಳಯದಿಂದಲೂ ಪರ್ಮನೆಂಟಾಗಿ ಡ್ರಾಪ್ ಔಟ್ ಆಗುವ ಹಂತವನ್ನು ತಲುಪಿದ್ದಾಳೆ.

ರಾಗಿಣಿ 'ಕಹಾನಿ'






ನಾಯಕಿ ರಾಗಿಣಿಯ ಅದೃಷ್ಟ ಖುಲಾಯಿಸುತ್ತಲೇ ಇದೆ. ಈ ಹಿಂದೆ ಮಾಲಾಶ್ರೀ, ಪ್ರೇಮಾ ತರಹದ ನಟಿಯರು ತಮ್ಮ ಹೆಸರಿನ ಚಿತ್ರಗಳಲ್ಲಿ ನಟಿಸುವ ಮುಖಾಂತರ ತಾವೇ ಆ ಚಿತ್ರದ ನಾಯಕ ಕಂ ನಾಯಕಿ ಎನಿಸಿಕೊಂಡಿದ್ದರು. ಅವರಂತೆಯೇ ರಾಗಿಣಿಯೂ ಮೊನ್ನೆಮೊನ್ನೆ 'ಐಪಿಎಸ್ ರಾಗಿಣಿ' ಎಂಬ ಚಿತ್ರದಲ್ಲಿ ನಟಿಸುವ ಮೂಲಕ ತನ್ನ ವೃತ್ತಿಜೀವನದಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದ್ದಳು. ಈಗ ರಾಗಿಣಿಗೆ ಇನ್ನೊಂದು ಹೊಸ ಸವಾಲಿನ ಪಾತ್ರ ಸಿಕ್ಕಿದೆ. ಇತ್ತೀಚೆಗೆ 'ಕಹಾನಿ' ಎಂಬ ಹಿಂದಿ ಚಿತ್ರದಲ್ಲಿ ಅದ್ಭುತವಾಗಿ ನಟಿಸಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದ ವಿದ್ಯಾ ಬಾಲನ್ ಅವರ ಪಾತ್ರ ಈಗ ರಾಗಿಣಿಗೆ ದೊರೆತಿದೆ.

'ಕಹಾನಿ' ಕನ್ನಡದಲ್ಲಿ ರೀಮೇಕ್ ಆಗುವ ಸುದ್ದಿ ಬಹಳ ದಿನಗಳಿಂದ ಕೇಳಿಬರುತ್ತಿತ್ತು. ಈ ಚಿತ್ರದ ಮುಖ್ಯ ಪಾತ್ರಕ್ಕಾಗಿ ಪೂಜಾಗಾಂಧಿ ಮತ್ತು ರಾಗಿಣಿ ನಡುವೆ ತೀವ್ರವಾದ ಪೈಪೋಟಿ ಇದ್ದಿತ್ತು. ಮೊನ್ನೆಮೊನ್ನೆಯಷ್ಟೇ 'ದಂಡುಪಾಳ್ಯ' ಚಿತ್ರದಲ್ಲಿ ಚೆನ್ನಾಗಿ ನಟಿಸಿ ಎಲ್ಲರ ಮೆಚ್ಚುಗೆ ಪಡೆದ ಪೂಜಾ ಗಾಂಧಿ ಭಾರಿ ಮೊತ್ತದ ಸಂಭಾವನೆಯನ್ನು ಕೇಳಿದ್ದಕ್ಕಾಗಿ ಈಗ ಈ ಪಾತ್ರ ರಾಗಿಣಿಗೆ ದೊರೆತಿದೆ.

ಅದೇನೇ ಇರಲಿ, ಯಾವುದೇ ನಾಯಕಿ ಇಷ್ಟಪಡುವಂತಹ 'ಕಹಾನಿ' ಚಿತ್ರದ ಈ ಪಾತ್ರ ತುಂಬಾ ಅತ್ಯಂತ ಸವಾಲಿನದ್ದು ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿಯವರೆಗ ಗ್ಲಾಮರಸ್ ಪಾತ್ರಗಳಲ್ಲಿ ಕುಣಿದು ಕುಪ್ಪಳಿಸುವ ರಾಗಿಣಿ ಈ ಪಾತ್ರವನ್ನು ಹೇಗೆ ನಿಭಾಯಿಸುತ್ತಾರೋ ಕಾದುನೋಡಬೇಕು.

ದೇಸೀ ಪ್ರೇಮ್‌ಗೆ
ಪರದೇಸೀ ಹುಡುಗಿ ಹುಚ್ಚು



ಮಂಡ್ಯದ ಹೈದ ಪ್ರೇಮ್‌ಗೆ ಇನ್ನೂ ವಿದೇಶಿ ಹುಡುಗಿಯರ ಹುಚ್ಚು ಕಡಿಮೆಯಾದಂತಿಲ್ಲ. ಈತ ನಾಯಕನಾಗಿ ನಟಿಸುತ್ತಿರುವ 'ಪ್ರೇಮ್ ಅಡ್ಡೆ' ಚಿತ್ರದಲ್ಲಿ ವಿದೇಶಿ ಬ್ಲೂಫಿಲಂ ನಟಿ ಸನ್ನಿ ಲಿಯಾನ್ ಕುಣಿಯಲಿದ್ದಾಳೆ ಎಂದು ಸುಳ್ಳು ಹೇಳುತ್ತಾ ಭಾರೀ ಪ್ರಚಾರ ಪಡೆದಿದ್ದರು ಪ್ರೇಮ್. ಆಗ ಸನ್ನಿ "ಇವನ್ಯಾರು, ಇವನ ಅಡ್ಡೆ ಎಲ್ಲಿದೆ ಎಂದು ನನಗೆ ಗೊತ್ತೇ ಇಲ್ಲ" ಎಂದು ಹೇಳುವ ಮೂಲಕ ಪ್ರೇಮ್ ಮುಖಕ್ಕೆ ಮಂಗಳಾರತಿ ಮಾಡಿದ್ದಳು.

ಆದರೂ ಪ್ರೇಮ್‌ನ ಬಿಳಿ ಹುಡುಗಿಯರ ಹುಚ್ಚು ಬಿಟ್ಟಿಲ್ಲ. "ಸನ್ನಿ ಇಲ್ಲ ಎಂದರೇನಂತೆ? ಬೇರೆ ವಿದೇಶಿ ಹುಡುಗಿಯರು ಸಿಗುವುದೇ ಇಲ್ವ?" ಎಂದು ತೊಡೆ ತಟ್ಟಿದ್ದಾನೆ. ಇದರ ಫಲವಾಗಿಯೇ ಈಗ ಬ್ರಿಟನ್‌ನ ಬಿಳಿ ಹುಡುಗಿ ಸ್ಕಾರ್‌ಲೆಟ್ ವಿಲ್ಸನ್ 'ಪ್ರೇಮ್ ಅಡ್ಡೆ' ಚಿತ್ರದ ಐಟಂ ಸಾಂಗ್‌ನಲ್ಲಿ ಕುಣಿಯುವುದು ಬಹುತೇಕ ಗ್ಯಾರಂಟಿಯಾಗಿದೆ. ಈಕೆ ಈಗಾಗಲೇ 'ಶಾಂಗಾಯ್' ಎಂಬ ಹಿಂದಿ ಚಿತ್ರದಲ್ಲಿ ತನ್ನ ಮೈಸಿರಿಯನ್ನು ಪ್ರದರ್ಶಿಸಿ ಪಡ್ಡೆ ಹುಡುಗರ ನಿದ್ದೆ ಕೆಡಿಸಿದ್ದಳು.



'ಪ್ರೇಮ್ ಅಡ್ಡೆ' ಚಿತ್ರದಲ್ಲಿ ಈ ಬಿಳಿ ಹುಡುಗಿ ಕೊಳ್ಳೆಗಾಲದ ಸಂತೆಯೊಂದರಲ್ಲಿ ಕುಣಿದು ಕುಪ್ಪಳಿಸುವ ದೃಶ್ಯದಲ್ಲಿ ಭಾಗವಹಿಸುತ್ತಾಳಂತೆ. ಅಂತೂ-ಇಂತೂ ತನ್ನ ದೇಸೀ ವಾಸಿಯ ಕಥಾವಸ್ತುವಿನ ಚಿತ್ರದಲ್ಲಿ ಪರದೇಸೀ ಹುಡುಗಿಯನ್ನು ಕುಣಿದು ಕುಪ್ಪಳಿಸುವ ಪ್ರೇಮ್ ಆಸೆ ಕೊನೆಗೂ ಈಡೇರಿದಂತಾಗಿದೆ.

• ತ್ರೆಸ್ಸೈ

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 01-08-2012 RNI No. KARKAN200

50ರ ನಂತರ ಶಿವಣ್ಣ ಸಮಾಜಮುಖಿ

ಶಿವರಾಜ್‌ಕುಮಾರ್ ಅವರ 50ನೇ ವರ್ಷದ ಹುಟ್ಟುಹಬ್ಬದಂದು ಭಾರತೀಯ ಚಿತ್ರರಂಗದ ಕೆಲವು ಪ್ರಮುಖರು ಹೇಗೆಹೇಗೆ ಶುಭಾಶಯಗಳನ್ನು ಹೇಳಿದರು ಗೊತ್ತಾ?

ಅಮಿತಾಭ್ ಬಚ್ಚನ್: ಏಯ್! ತು ಪಚಾಸ್ ಹೈ? ಕಾಲೇಜ್ ಸ್ಟೂಡೆಂಟ್ಸ್ ಜೈಸೇ ದಿಖ್ತೆ ಹೈ.... ಜನುಮ್ ದಿನ್‌ಕಾ ಶುಭಾಶಯ್.



ನಾಗಾರ್ಜುನ: ವೆಲ್‌ಕಮ್ ಟು ಅವರ್ 50 ಕ್ಲಬ್. ಹ್ಯಾಪಿ ಬರ್ತ್‌ಡೆ ಟು ಯು ಶಿವ.

ಶಿವಾಜಿ ಪ್ರಭು: ಹ್ಯಾಪಿ ಬರ್ತ್‌ಡೆ ಟು ಯು ಶಿವ.

ಹೀಗೆ ಭಾರತೀಯ ಚಿತ್ರರಂಗದ ದೊಡ್ಡ ದೊಡ್ಡ ನಟರು ಶಿವರಾಜ್ ಕುಮಾರ್‌ಗೆ 50ನೇ ಹುಟ್ಟು ಹಬ್ಬದ ಮುನ್ನಾದಿನ ಅಂದರೆ ಜುಲೈ 11 ರಂದು ಶುಭಾಶಯ ಕೋರಿದರು. ಇದೆಲ್ಲ ಸಾಧ್ಯವಾಗಿದ್ದು ಕಲ್ಯಾಣ್ ಜ್ಯುವೆಲ್ಲರ್ಸ್‌ನ ಒಂದು ಜಾಹೀರಾತಿನ ಚಿತ್ರೀಕರಣಕ್ಕಾಗಿ ಇವರೆಲ್ಲ ಮುಂಬೈನಲ್ಲಿ ಒಟ್ಟು ಸೇರಿದಾಗ. ಜುಲೈ 11 ರಂದು ಇದರ ಚಿತ್ರೀಕರಣ ನಡೆಯುತ್ತಿದ್ದಾಗ ಅಮಿತಾಭ್ ಬಚ್ಚನ್‌ರಿಂದ ಹಿಡಿದು ನಾಗಾರ್ಜುನ, ಶಿವಾಜಿ ಪ್ರಭು ಮತ್ತು ಮಲಯಾಳಂ ಚಿತ್ರರಂಗದ ದಿಲೀಪ್ - ಇವರೆಲ್ಲ ನೆನಪಿಟ್ಟು ಶಿವಣ್ಣನಿಗೆ ಹುಟ್ಟುಹಬ್ಬದ ಅಭಿನಂದನೆ ಸಲ್ಲಿಸಿ, ತಮ್ಮ ಪ್ರೀತಿಯನ್ನು ತೋರಿಸಿದರಂತೆ. "ನನ್ನ 50ನೆಯ ಹುಟ್ಟುಹಬ್ಬಕ್ಕೆ ಇದಕ್ಕಿಂತ ದೊಡ್ಡ ಉಡುಗೊರೆ ನನಗೆ ಇನ್ನೇನು ಬೇಕು? ನಾನಂತೂ ಆ ಕ್ಷಣಗಳನ್ನು ಮರೆಯಲು ಸಾಧ್ಯವೇ ಇಲ್ಲ. ಅದೇ ನನ್ನ ಪಾಲಿಗೆ 50ನೇ ವರ್ಷದ ಅಪರೂಪದ ಮತ್ತು ಬೆಲೆಬಾಳುವ ಉಡುಗೊರೆ" ಎಂದು ಶಿವಣ್ಣ ಪತ್ರಿಕೆಯ ಜೊತೆ ಮಾತನಾಡುವಾಗ ಭಾವುಕರಾಗಿ ಹೇಳಿದರು.



ಹುಟ್ಟುಹಬ್ಬದ ಅಭಿನಂದನೆ ಸಲ್ಲಿಸಿದ್ದು ಮಾತ್ರವಲ್ಲ, ಅವರೆಲ್ಲ ಆತ್ಮೀಯ ಮಿತ್ರರಂತೆ ಶಿವಣ್ಣನನ್ನು ನೋಡಿಕೊಂಡರಂತೆ. "ಅವರೆಲ್ಲ ನನ್ನನ್ನು ಬಾಲ್ಯದ ಸ್ನೇಹಿತ ಎಂಬಂತೆ 'ಶಿವ' ಎಂದು ಕರೆದದ್ದೇ ನನಗೆ ಬಹಳ ಸಂತೋಷವಾಯಿತು. ಅದರಲ್ಲೂ ನಾಗಾರ್ಜುನರಂತೂ ಬಹಳ ಸಿಂಪಲ್. ಶೂಟಿಂಗ್ ಆದತಕ್ಷಣ ಅಲ್ಲೇ ನೆಲದ ಮೇಲೆ ಕುಳಿತು ಮಾಮೂಲಿ ಹುಡುಗನಂತೆ ಮಾತನಾಡಿ ಕೊಂಡಿರುತ್ತಿದ್ದರು. ಅಮಿತಾಭ್ ಬಚ್ಚನ್ ಕೂಡ ಅಷ್ಟೇ. ತಮ್ಮ ಶೂಟಿಂಗ್ ಆದತಕ್ಷಣ ಅವರಿಗಾಗಿ ಕಾದಿರಿಸಿದ್ದ ಕ್ಯಾರವಾನ್‌ಗೆ ಹೋಗಿ ಕುಳಿತುಕೊಳ್ಳಬಹುದಿತ್ತು. ಆದರೆ ಅದನ್ನೆಲ್ಲ ಬಿಟ್ಟು ಅವರೂ ಕೂಡ ಶೂಟಿಂಗ್ ಆದ ನಂತರವೂ ಅಲ್ಲೇ ನಮ್ಮ ಪಕ್ಕದಲ್ಲೇ ಕುರ್ಚಿ ಹಾಕಿಕೊಂಡು ಕುಳಿತುಕೊಳ್ಳುತ್ತಿದ್ದರು. ಇಷ್ಟು ಸರಳತೆಯನ್ನು ನಾನು ಅವರಿಂದ ಖಂಡಿತವಾಗಿಯೂ ನಿರೀಕ್ಷಿಸಿರಲಿಲ್ಲ" ಎಂದರು ಶಿವಣ್ಣ.

"ಮಲಯಾಳಂನ ಖ್ಯಾತ ನಟ ದಿಲೀಪ್ ನನ್ನ ಬಳಿ ಬಂದು 'ಭಾರತೀಯ ಚಿತ್ರರಂಗದ ಮೂವರು ಮೇರು ನಟರ ಮಕ್ಕಳೊಂದಿಗೆ ನಟಿಸಿದ್ದು ನನ್ನ ಸೌಭಾಗ್ಯ' ಎಂದು ಹೇಳಿದಾಗಲೇ ನಾನೂ ಕೂಡ ಒಬ್ಬ ಮಹಾನ್ ನಟನ ಮಗ ಎಂದು ಅವರು ನನ್ನನ್ನು ನೆನಪಿಸಿದಂತಿತ್ತು. ನಿಜಕ್ಕೂ ಪರಭಾಷಾ ನಟರುಗಳೆಲ್ಲ ಇಷ್ಟು ಸೌಹಾರ್ದತೆ ಮತ್ತು ಪ್ರೀತಿಯನ್ನು ತೋರಿಸುತ್ತಿದ್ದಾರೆಂದರೆ ನಮ್ಮ ಕನ್ನಡ ಚಿತ್ರರಂಗ ದಲ್ಲಿ ಅದ್ಯಾಕೆ ಸಾಧ್ಯವಾಗುತ್ತಿಲ್ಲ ಎಂದು ನನ್ನನ್ನು ನಾನೇ ಪ್ರಶ್ನಿಸತೊಡಗಿದೆ. ಅಮಿತಾಭ್ ಬಚ್ಚನ್‌ನವರ ನಟನೆಯನ್ನು ಬಾಲ್ಯದಿಂದಲೂ ನೋಡಿ ಆನಂದಿಸುತ್ತ ಅವರ ಅಭಿಮಾನಿಯಾಗಿ ಬೆಳೆದವನು ನಾನು. ಅಂತಹ ಮಹಾನ್ ನಟನ ಜೊತೆ ನಾನು ಕೂಡ ನಟಿಸುತ್ತೇನೆ ಎಂದು ಕನಸು-ಮನಸಿನಲ್ಲೂ ನಾನು ಎಣಿಸಿರಲಿಲ್ಲ. ಇದು ಖಂಡಿತವಾಗಿಯೂ 50ನೇ ವರ್ಷಕ್ಕೆ ನನಗೆ ಸಿಕ್ಕ ದೊಡ್ಡ ಉಡುಗೊರೆ" ಎಂದು ಶಿವಣ್ಣ ಬಚ್ಚನ್ ಅವರನ್ನು ಪ್ರಶಂಸಿಸುತ್ತಾ ಭಾವುಕತೆಯಿಂದ ಮಾತನಾಡಿದರು.

ಬಚ್ಚನ್ ಅವರನ್ನು ಭೇಟಿ ಆದಾಗ ಶಿವಣ್ಣನ ಸಹೋದರ ಪುನೀತ್ ರಾಜ್‌ಕುಮಾರ್ ತಮ್ಮ ತಂದೆ ಡಾ.ರಾಜ್ ಕುಮಾರ್ ಅವರ ಬಗ್ಗೆ ಬರೆದಿರುವ 'ವ್ಯಕ್ತಿಯ ಹಿಂದಿನ ವ್ಯಕ್ತಿತ್ವ' ಎಂಬ



ಪುಸ್ತಕವನ್ನು ಬಚ್ಚನ್‌ಗೆ ಕೊಟ್ಟಿದ್ದನ್ನು ಶಿವಣ್ಣ ಸಂತ... ಹೇಳಿಕೊಂಡರು. "ನಮ್ಮ ತಂದೆಯನ್ನು ಕುರಿತ ... ಪ್ರಕಟಿಸಲು ಅಮಿತಾಭ್ ಬಚ್ಚನ್ ಅವರ ... ತಂದೆಯನ್ನು ಕುರಿತು ಹೊರತಂದ ಪುಸ್ತಕವೇ ... ಆಗಿತ್ತು" ಎಂದರು ಶಿವಣ್ಣ.

50 ದಾಟಿದ ನಂತರ ಇನ್ನು ಮುಂದೆ ಸಮಾ... ಯಾಗಿ ಹೆಚ್ಚು ಕೆಲಸ ಮಾಡಬೇಕು ಎಂಬುದು ... ಆಸೆಯಂತೆ. ಅದಕ್ಕಾಗಿ ಈ ತಿಂಗಳ ಕೊನೆಯ... ಆಂಬುಲೆನ್ಸ್‌ಗಳನ್ನು ಆಸ್ಪತ್ರೆಗೆ ದಾನ ಮಾ... ಹಾಗೆಯೇ ರಕ್ತದಾನ ಶಿಬಿರವನ್ನು ಏರ್ಪಡಿ... ಜೊತೆಗೆ ಬಡವರಿಗೆ ಆಟೋರಿಕ್ಷಾವನ್ನು ಕೊ... ಇತ್ಯಾದಿ ಕೆಲವು ಕಾರ್ಯಕ್ರಮಗಳನ್ನು ಶಿವಣ್ಣ ... ಕೊಂಡಿದ್ದಾರೆ. "ಇದರ ಜೊತೆಜೊತೆಗೆ ಒಳ್ಳೊಳ್ಳೆ ... ಸಿನಿಮಾಗಳಲ್ಲಿ ನಟಿಸುವ ಮುಖಾಂತರ ಪ್ರೇಕ್ಷ... ರನ್ನು ಮತ್ತು ಅಭಿಮಾನಿಗಳನ್ನು ರಂಜಿಸುವುದಕ್ಕೆ ಕೂಡ ಹೆಚ್ಚಿನ ಆದ್ಯತೆ ನೀಡುತ್ತೇನೆ" ಎಂದು ಹೇಳಲು ಶಿವಣ್ಣ ಮರೆಯಲಿಲ್ಲ.

ಇದು 50 ತಲುಪಿದ ಸಂದರ್ಭದಲ್ಲಿ ನಮಗೆ ಶಿವಣ್ಣ ಹೇಳಿದ ಕೆಲವು ನುಡಿ ಮುತ್ತುಗಳು.

● ಶೆಣೈ



'ಒಕ್ಕಲಿಗರು' ಒಂದಾಗಲಿಲ್ಲ!

ಇತ್ತೀಚೆಗೆ ಒಕ್ಕಲಿಗರು ಬೆಂಗಳೂರು ಅರಮನೆಯಲ್ಲಿ ದೊಡ್ಡ ಸಮಾವೇಶ ನಡೆಸಿದ್ದು ನಿಮಗೆ ಗೊತ್ತೇ ಇದೆ. ಅದಾದನಂತರ ಸದಾನಂದ ಗೌಡರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಿಗೊಳಿಸಿದಾಗಲೂ ಇದೇ ಒಕ್ಕಲಿಗರು ಸಿಟ್ಟು ಮಾಡಿಕೊಂಡು ಬೀದಿಗಿಳಿದು ಪ್ರತಿಭಟನೆ ಮಾಡಿದ್ದೂ ಎಲ್ಲರಿಗೆ ಗೊತ್ತಿರುವ ವಿಚಾರ. ಅಂದರೆ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಒಕ್ಕಲಿಗರೆಲ್ಲರೂ ಒಂದಾಗುವುದು ಹೊಸ ವಿಷಯವೇನೂ ಅಲ್ಲ.

ಅದೇರೀತಿ ಇತ್ತೀಚೆಗೆ 'ಶ್ರೀ ಆದಿಚುಂಚನಗಿರಿ' ಎಂಬ ಚಲನಚಿತ್ರ ಬಿಡುಗಡೆಯಾದಾಗ ಒಕ್ಕಲಿಗರೆಲ್ಲರೂ ಥಿಯೇಟರ್‌ಗಳಿಗೆ ನುಗ್ಗಬಹುದು ಎಂದು ಕೆಲವರು ಭಾವಿಸಿದ್ದರು. ಈ ಚಿತ್ರದಲ್ಲಿ ಅರ್ಧ ಡಜನ್‌ಗೂ ಹೆಚ್ಚು ಮಂತ್ರಿಗಳು ಮತ್ತು ಶಾಸಕರು ಭಯ, ಭಕ್ತಿಯಿಂದ ನಟಿಸಿದ್ದರು. ಹಾಗೆಯೇ ಉದ್ಯಮದಲ್ಲಿರುವ ಬಹುತೇಕ ಎಲ್ಲ ಒಕ್ಕಲಿಗ ಕಲಾವಿದರು ಈ ಚಿತ್ರಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದ್ದರು. ಈ ಎಲ್ಲ ಕಾರಣಗಳಿಂದ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಭಾರಿಸಬಹುದು ಎಂದು ಚಿತ್ರಬ್ರಹ್ಮ ಲೆಕ್ಕಹಾಕಿದ್ದರು. ಆದರೆ ಅವೆಲ್ಲ ಈಗ ತಲೆಕೆಳಗಾಗಿದೆ. ಈ ಚಿತ್ರ ತೆರೆಕಂಡ ಬಹುತೇಕ ಥಿಯೇಟರ್‌ಗಳು ಖಾಲಿ ಹೊಡೆಯುತ್ತಿದೆ.

ಅದಕ್ಕಿಂತ ಬೇಸರದ ವಿಷಯವೆಂದರೆ ಈ ಚಿತ್ರವನ್ನು ನೋಡಲು ಆದಿಚುಂಚನಗಿರಿ ಸಂಸ್ಥಾನದ ಶಾಲಾಮಕ್ಕಳನ್ನು ಕರೆದೊಯ್ದಿದ್ದಾರೆ. ಹಾಗೆಯೇ ಮೊನ್ನೆ ಬಹುತೇಕ ಉತ್ತರ ಭಾರತದ ವಿದ್ಯಾರ್ಥಿಗಳನ್ನು ಬಲವಂತವಾಗಿ ಈ ಚಿತ್ರ ನೋಡಲು ಶಾಲೆಗೆ ರಜೆ ನೀಡಿ ಕರೆದೊಯ್ಯಲಾಯಿತು. ಈ ಉತ್ತರ ಭಾರತದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯೇ ಗೊತ್ತಿಲ್ಲ, ಆದಿಚುಂಚನಗಿರಿಯ ವಿಷಯವೂ ಗೊತ್ತಿಲ್ಲ. ಅವರೆಲ್ಲ ಸುಮ್ಮನೆ ಎರಡೂವರೆ ಗಂಟೆ ಥಿಯೇಟರ್‌ನಲ್ಲಿ ಕುಳಿತು ಹೊರಬಂದಿದ್ದಾರೆ.

ಇಂತಹ ಚಿತ್ರಗಳನ್ನು ನಿರ್ಮಿಸುವುದು ತಪ್ಪಲ್ಲ. ಆದರೆ ಬಲವಂತವಾಗಿ ಇಂತಹ ಚಿತ್ರಗಳನ್ನು ಜನರಿಗೆ ತೋರಿಸುವುದು ಮತ್ತು ಚಿತ್ರಮಂದಿರದಲ್ಲಿ ಓಡಿಸುವುದು ಯಾವ ಪುರುಷಾರ್ಥಕ್ಕಾಗಿ ಎಂಬ ಪ್ರಶ್ನೆಗೆ ಆ ಚಿತ್ರದ ನಿರ್ಮಾಪಕ ನರಸಿಂಹಯ್ಯನವರು ಉತ್ತರ ಕೊಡಬೇಕಿದೆ. ●



ಗಣೇಶನ 'ಗಲಾ...

ಮೊನ್ನೆ ಗೋಲ್ಡನ್ ಸ್ಟಾರ್ ಗಣೇಶ್ ನಟಿಸಿರುವ 'ರೋಮಿ... ಚಿತ್ರ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಬಿಡುಗಡೆಯಾ... ಶೇಖರ್ ನಿರ್ದೇಶನದ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಸ್ವಲ್ಪ... ಹಣ ಮಾಡಿದೆ. ಅಷ್ಟೇ ಅಲ್ಲ, ಕಳೆಗುಂದಿಹೋಗಿದ್ದ ಗ... ವರ್ಚಸ್ಸನ್ನು ಮತ್ತೆ ಗಳಿಸಿಕೊಟ್ಟಿದೆ. ಕಳೆದ ಮೂರ್ನಾಲ್ಕು ವರ್ಷಗ... ಸೋಲನ್ನೇ ಕಾಣುತ್ತಿದ್ದ ಗಣೇಶ್ ಕೊನೆಗೂ ಆ ಸೋ... ಸರಪಳಿಯಿಂದ ಹೊರಬಂದು ಗೆಲುವಿನ ರುಚಿ ಕಂಡಿದ್ದಾ...

ಸುದೀಪ್ ಖಳನಾಯಕನಾಗಿ ನಟಿಸಿರುವ ತೆಲುಗು ... 'ಈಗ' ಇದೇ ಸಂದರ್ಭದಲ್ಲಿ ಬಿಡುಗಡೆಯಾಗದಿದ್ದರೆ ಬ... ಗಣೇಶನ 'ರೋಮಿಯೋ' ಇನ್ನಷ್ಟು ಗಳಿಕೆಯನ್ನು ಸಂಪಾದಿಸ... ಎಂಬುದು ನಿಜ.

ಆದರೆ ಸಮಸ್ಯೆ ಅದಲ್ಲ. ಈ ಚಿತ್ರ ನಿಧಾನವಾಗಿ ಚೇತರಿಸಿಕೊ... ಬೆನ್ನಲ್ಲೇ ಗಣೇಶನ ಧನದಾಹ ಕೂಡ ಚೇತರಿಸಿಕೊಂಡಿದೆ. ಈ ... ಪಬ್ಲಿಸಿಟಿಗಾಗಿ ತಮ್ಮೊಂದಿಗೆ ಊರೂರು ತಿರುಗಾಡಲು ಗಣೇಶ... ನಿರ್ಮಾಪಕರು ಆಹ್ವಾನಿಸಿದರೆ ಈ ಮನುಷ್ಯ ಏನೆಂದು ಹೇ... ಗೊತ್ತಾ? "ನನ್ನ ಕೆಲಸ ಚಿತ್ರ ಮಾಡಿ ಮುಗಿಸುವುದು ಅಷ್ಟೆ. ಪಬ್ಲಿಸಿ... ನಾನು ಬರಬೇಕಾದರೆ ಮತ್ತೆ ಹೆಚ್ಚಿನ ಸಂಭಾವನೆಯನ್ನು ನೀಡ... ಅಥವಾ ಲಾಭದಲ್ಲಿ ಇಂತಿಷ್ಟು ಹಣ ಕೊಡಬೇಕು" ಎಂದಿದ್ದಾನೆ.

ಇತ್ತೀಚೆಗೆ ಕನ್ನಡ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಗೆಲ್ಲುವುದೇ ... ಅಪರೂಪವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಗೆಲ್ಲುತ್ತಿರುವ ಒಂದು ... ಸಂಪೂರ್ಣ ಸಹಕಾರ ನೀಡುವ ಬದಲು ಈ ರೀತಿ ನಿರ್ಮಾಪಕ... ಹಣ ಕೀಳುವ ನಾಯಕ ನಟರುಗಳು ಇರುವುದರಿಂದಲೇ ಕನ್ನಡ ಚಿತ್ರರಂಗ ಅಭಿವೃದ್ಧಿಯಾಗುತ್ತಿಲ್ಲ ಎಂಬುದು ನಿಜವಲ್ಲವೇ? ●

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com